
ಕರ್ನಾಟಕ ಗಾಂಧೀ ಸ್ಮಾರಕ ನಿಧಿ


ಬಾಪು ಪ್ರಪಂಚ

BAPU PRAPANCHA

ಕನ್ನಡ - English Monthly


ಸಂಪುಟ – 2 : ಸಂಚಿಕೆ – 11 ಫೆಬ್ರವರಿ 2021 ಪುಟ – 32 ₹ 20/-























ಭಾರತರತ್ನ ಜಾಕೀರ್ ಹುಸೇನ್ ಖಾನ್ (8ನೇ ಫೆಬ್ರವರಿ 1897–3ನೇ ಮೇ 1969)

– ನಾಡೋಜ ಡಾ. ವೂಡೇ ಪಿ. ಕೃಷ್ಣ



ಭಾರತದ ಮೂರನೇ ರಾಷ್ಟ್ರಪತಿಯಾಗಿದ್ದ ಶ್ರೀ ಜಾಕೀರ್ ಹುಸೇನ್ ಅವರು, 1957 ರಿಂದ 1962 ರವರೆಗೆ ಬಿಹಾರದ ರಾಜ್ಯಪಾಲರಾಗಿ, 1962ರಿಂದ 1967ರವರೆಗೆ ಭಾರತದ ಉಪ ರಾಷ್ಟ್ರಪತಿಯಾಗಿ ಸೇವೆ ಸಲ್ಲಿಸಿದ್ದರು. ಶ್ರೀಯುತರಿಗೆ 1963ರಲ್ಲಿ ಭಾರತದ ಅತ್ಯುನ್ನತ ನಾಗರಿಕ ಗೌರವ ಭಾರತರತ್ನ ಪ್ರಧಾನ ಮಾಡಲಾಗಿತ್ತು. ಹುಸೇನ್ ಅವರು ಪಂಜಾಬ್‌ನ ಪಶ್ತೂನ್ ಮುಸ್ಲಿಂ, ಖೇಶಿ ಮತ್ತು ಆಫ್ರಿದಿ ಬುಡಕಟ್ಟು ಜನಾಂಗದವರಾಗಿದ್ದು, ಹೈದ್ರಾಬಾದ್‌ನಲ್ಲಿ ಜನಿಸಿದ್ದರು. ಇವರ ಪೂರ್ವಜರು 19ನೇ ಶತಮಾನದಲ್ಲಿ ದಖನ್‌ಗೆ ತೆರಳುವ ಮುನ್ನ ಸಂಯುಕ್ತ ಸಂಸ್ಥಾನದ ಮಲಿಹಾಬಾದ್‌ನಲ್ಲಿ ನೆಲೆಸಿದ್ದರು. ಏಳು ಜನ ಪುತ್ರರಲ್ಲಿ ಜಾಕೀರ್ ಹುಸೇನ್ ಎರಡನೆಯವರು. ಹುಸೇನ್‌ರ ಆರಂಭಿಕ ಶಿಕ್ಷಣ ಹೈದರಾಬಾದ್ ನಲ್ಲಿಯೂ, ಎಟಾವಾದ ಇಸ್ಲಾಮಿಯಾ ಹೈಸ್ಕೂಲ್‌ನಲ್ಲಿ ಪ್ರೌಢ ಶಿಕ್ಷಣ, ನಂತರ ಲಕ್ನೋ ವಿಶ್ವವಿದ್ಯಾಲಯದ ಕ್ರಿಶ್ಚಿಯನ್ ಕಾಲೇಜಿನಲ್ಲಿ ಅರ್ಥಶಾಸ್ತ್ರದಲ್ಲಿ ಪದವಿ ಪಡೆದರು. ಆಂಗ್ಲೋ-ಓರಿಯಂಟಲ್ ಕಾಲೇಜು, ತದನಂತರ ಅಲಹಾಬಾದ್ ವಿಶ್ವವಿದ್ಯಾಲಯದಲ್ಲಿ ಪ್ರಮುಖ ವಿದ್ಯಾರ್ಥಿ ನಾಯಕರಾಗಿದ್ದರು. ಅವರು 1926ರಲ್ಲಿ ಬರ್ಲಿನ್ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರದಲ್ಲಿ ಡಾಕ್ಟರೇಟ್ ಪಡೆದರು. ಅವರಿಗೆ ಷಹಜಹಾನ್ ಬೇಗಂ ಅವರೊಂದಿಗೆ 1915ರಲ್ಲಿ ವಿವಾಹವಾಗಿತ್ತು. ಇವರಿಗೆ ಸಯೀದಾ ಖಾನ್ ಮತ್ತು ಸಫಿಯಾ ರೆಹಮಾನ್ ಎಂಬ ಇಬ್ಬರು ಪುತ್ರಿಯರಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲಿಯೂ ಹುಸೇನ್ ಅವರು ಅತ್ಯುನ್ನತ ಹುದ್ದೆಗಳಲ್ಲಿ ಸೇವೆಸಲ್ಲಿಸಿದರು. ಹುಸೇನ್ ಅವರ ಅಳಿಯ ಖುರ್ಷಿದ್ ಆಲಂಖಾನ್ ಅವರು ಕರ್ನಾಟಕದ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ್ದರು. ಮತ್ತು ಅವರ ಮೊಮ್ಮಗ, ಸಲ್ಮಾನ್ ಖುರ್ಷಿದ್, ಪ್ರಧಾನ ಮಂತ್ರಿ ಮನಮೋಹನ್ ಸಿಂಗ್ ಅವರ ನೇತೃತ್ವದಲ್ಲಿ ಭಾರತದ ವಿದೇಶಾಂಗ ಸಚಿವರಾಗಿದ್ದರು.

ಜಾಕೀರ್ ಹುಸೇನ್ ಅವರು 23 ವರ್ಷದವರಿದ್ದಾಗಲೇ, ವಿದ್ಯಾರ್ಥಿಗಳು ಮತ್ತು ಶಿಕ್ಷಕರೊಡಗೂಡಿ ರಾಷ್ಟ್ರೀಯ ಮುಸ್ಲಿಂ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದ್ದರು. ನಂತರ ಜರ್ಮನಿಗೆ ತೆರಳಿ ಅರ್ಥಶಾಸ್ತ್ರದಲ್ಲಿ ಬರ್ಲಿನ್‌ನ ಫ್ರೆಡರಿಕ್ ವಿಲಿಯಂ ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪದವಿ ಪಡೆದಿದ್ದರು. ಜರ್ಮನಿಯಲ್ಲಿದ್ದಾಗ, ಹುಸೇನರು ಉರ್ದುವಿನ ಪ್ರಸಿದ್ಧ ಕವಿ ಮಿರ್ಜಾ ಅಸಾದುಲ್ಲಾಖಾನ್‌ರ "ಗಾಲಿಬ್" (1797–1868) ಎಂಬ ಅಂತಾಲಜಿಯನ್ನು ಹೊರತರುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಇವರು ಬ್ರಿಟಿಷ್ ಆಡಳಿತದ ವಿರುದ್ಧ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ನಿಕಟವಾಗಿ ತೊಡಗಿಸಿಕೊಂಡಿದ್ದರು. ಮಹಾತ್ಮಾ ಗಾಂಧಿ ಮತ್ತು ಹಕೀಂ ಅಜ್ಮಲ್ ಖಾನ್ ಪ್ರತಿಪಾದಿಸಿದ ಮೌಲ್ಯಾಧಾರಿತ ಶಿಕ್ಷಣವನ್ನು ಒಂದು ಸಂಸ್ಥೆಯ ಮೂಲಕ ಅನುಷ್ಠಾನಗೊಳಿಸಿದರು. ಈ ಅವಧಿಯಲ್ಲಿ ಅವರು ಭಾರತದಲ್ಲಿ ಶೈಕ್ಷಣಿಕ ಸುಧಾರಣೆಗಳಿಗಾಗಿ ನಡೆದ ಚಳುವಳಿಗಳಲ್ಲಿ ತೊಡಗಿಸಿಕೊಂಡಿದ್ದರು ಮತ್ತು ವಿಶೇಷವಾಗಿ ತಮ್ಮ ಹಿಂದಿನ ಅಲ್ಮಾ ಮೇಟರ್ ದಿ ಮಹಮ್ಮದನ್ ಆಂಗ್ಲೋ ಓರಿಯಂಟಲ್ ಕಾಲೇಜ್ (ಈಗ ಅಲಿಗಢ ಮುಸ್ಲಿಂ ವಿಶ್ವವಿದ್ಯಾಲಯ) ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದರು. ಹೀಗೆ ಹುಸೇನ್ ಅವರು ಆಧುನಿಕ ಭಾರತದ ಪ್ರಮುಖ ಶೈಕ್ಷಣಿಕ ಚಿಂತಕರಾಗಿ ಹೊರಹೊಮ್ಮಿದರು. 1956ರಲ್ಲಿ ಉಪಕುಲಪತಿಯಾಗಿ ಅಧಿಕಾರವನ್ನು ಪೂರ್ಣಗೊಳಿಸಿದ ನಂತರ, 1957ರಲ್ಲಿ ಅವರು ಬಿಹಾರ ರಾಜ್ಯದ ರಾಜ್ಯಪಾಲರಾಗಿ ನೇಮಕಗೊಂಡರು. ನಂತರ 1962ರಿಂದ 1967ರವರೆಗೆ ಭಾರತದ ಎರಡನೇ ಉಪರಾಷ್ಟ್ರಪತಿಯಾಗಿ ಸೇವೆ ಸಲ್ಲಿಸಿದ ಹುಸೇನ್ ಅವರು 1967ರ ಮೇ 13ರಂದು ಭಾರತದ ರಾಷ್ಟ್ರಪತಿಯಾಗಿ ಅಧಿಕಾರ ವಹಿಸಿಕೊಂಡರು. ಪದಗ್ರಹಣದ ಭಾಷಣದಲ್ಲಿ "ಇಡೀ ಭಾರತವೇ ನನ್ನ ಮನೆ, ಎಲ್ಲ ಜನರೂ ನನ್ನ ಕುಟುಂಬ" ಎಂದು ಹೇಳಿದ್ದರು. ಭಾರತರತ್ನ ಜಾಕೀರ್ ಹುಸೇನ್ ಅವರು ಅಧಿಕಾರದಲ್ಲಿದ್ದಾಗಲೇ 1969ರ ಮೇ 3ರಂದು ಕಾಲವಶರಾದರು. ಭಾರತೀಯ ಮುಸ್ಲಿಂ ಸಮುದಾಯದಲ್ಲಿ "ಭಾರತದ ಅತ್ಯುನ್ನತ ರಾಷ್ಟ್ರಪತಿ ಸ್ಥಾನವನ್ನಲಂಕರಿಸಿದವರಲ್ಲಿ ಮೊದಲಿಗರಾಗಿದ್ದಾರೆ. ಹಾಗೆಯೇ ಅಧಿಕಾರವಧಿಯಲ್ಲಿಯೇ ನಿಧನರಾದ ರಾಷ್ಟ್ರಪತಿಗಳಲ್ಲಿ ಇವರೇ ಮೊದಲಿಗರಾಗಿದ್ದಾರೆ.



ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಕನ್ನಡ – ಇಂಗ್ಲಿಷ್ ಮಾಸಪತ್ರಿಕೆ

BAPU PRAPANCHA
(A Monthly Kannada - English Magazine of Gandhian Thoughts)

ಪ್ರಧಾನ ಸಂಪಾದಕರು :
ನಾಡೋಜ ಡಾ.ವೂಡೇ ಪಿ. ಕೃಷ್ಣ
Chief Editor :
Nadoja Dr. Wooday P. Krishna

ಸಂಪಾದಕರು : ಇಂದಿರಾ ಕೃಷ್ಣಪ್ಪ
Editor : **Indira Krishnappa**

ಸಲಹಾ ಸಂಪಾದಕರು : ವಿ.ಎನ್. ತಿಪ್ಪನಗೌಡ
Advisory Editor : **V.N. Tippana Gouda**

ಪ್ರಕಾಶಕರು : ಕಾರ್ಯದರ್ಶಿ
ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧೀ ಭವನ
ಕುಮಾರ ಪಾರ್ಕ್ ಪೂರ್ವ, ಬೆಂಗಳೂರು–560001

Published by :
Karnataka Gandhi Smaraka Nidhi
Gandhi Bhavana, Kumarapark East
Bengaluru - 560001
Phone : +91 80 22261967, 9738605799
gandhibhavanabengaluru@gmail.com

Design & Print : **CreativeGeekZ**
Yadhava College Road, Madhavanagara
Bengaluru - 560001
Ph : +91 80 40927049
E-mail : mail@creativegeekz.com



ಈ ಸಂಚಿಕೆಯಲ್ಲಿ

ಸಂಪಾದಕೀಯ



ಇಂದಿರಾ ಕೃಷ್ಣಪ್ಪ

ಎಲ್ಲರಿಗೂ ನಮಸ್ಕಾರಗಳು,

ಕರೋನ ಇಳಿಕೆಯ ಶುಭಾಶಯಗಳು

ಜನವರಿ 2021ರ ಹೊಸವರ್ಷ ಕೋವಿಡ್-19ರ ಇಳಿಮುಖದೊಂದಿಗೆ ಎಲ್ಲರಲ್ಲಿ ಹೊಸ ಆಸೆ, ಆಸಕ್ತಿ, ಭರವಸೆ, ಯೋಜನೆ ಮತ್ತು ಹಿಂದಿನ ಅವಘಡಗಳ ಪರ್ಯಾಲೋಚನೆಯಿಂದ, ಸಮಾಜಮುಖಿ ಚಿಂತನೆಗಳೆಡೆಗೆ ನಮ್ಮನ್ನು ಕರೆದೊಯ್ಯುತ್ತಿದೆ. 'ಕರೋನ-ಇಲ್ಲವೇ ಇಲ್ಲ' ಎಂಬ ಸ್ಥಿತಿಗೆ ನಾವಿನ್ನು ಬಂದಿಲ್ಲ. ರಾಜಧಾನಿ ಬೆಂಗಳೂರು ನಗರದ ಅಂಕಿ ಅಂಶವನ್ನೇ ಗಮನಿಸೋಣ. ಫೆಬ್ರವರಿ 14ರ ಅಂಕಿ ಅಂಶದಂತೆ ಮೃತಪಟ್ಟವರಲ್ಲಿ ಎಪ್ಪತ್ತು ವರ್ಷ ಮೇಲ್ಪಟ್ಟವರು-3553, ಮಕ್ಕಳು ಮತ್ತು ಮಧ್ಯ ವಯಸ್ಕರು - 0858 ಇದ್ದಾರೆ. ಇದರಲ್ಲಿ ಪುರುಷ ಸೋಂಕಿತರ ಸಂಖ್ಯೆ 2991 ಇದ್ದರೆ, ಮಹಿಳೆಯರ ಪ್ರಮಾಣ 1420 ಇದೆ. ಒಟ್ಟು ಸೋಂಕಿತರ ಸಂಖ್ಯೆ 4,01,775ಕ್ಕೆ ಏರಿಕೆಯಾಗಿದೆ. ಹಾಗೂ ಗುಣಮುಖರಾದವರ ಸಂಖ್ಯೆ 3,93,390 ಇದೆ. ಇದರಲ್ಲಿ ಇನ್ನೂ 3857 ಮಂದಿ ಸಕ್ರಿಯ ಸೋಂಕಿತರು ಮತ್ತು 65 ಮಂದಿಯ ಆರೋಗ್ಯ ಸ್ಥಿತಿ ಶೋಚನೀಯವಾಗಿದೆ. ಈ ನಡುವೆ ಫ್ರಂಟ್‌ಲೈನ್ ವಾರಿಯರ್ಸ್‌ಗೆ ಉಚಿತ ಲಸಿಕೆ ಹಾಕಲಾಗುತ್ತಿದ್ದರೂ, ಅನೇಕ ಸಮಸ್ಯೆಗಳು ಎದುರಾಗಿವೆ. ಲಸಿಕೆ ಪಡೆಯಲು ನಿರಾಕರಿಸುತ್ತಿರುವ ಹಲವು ಆರೋಗ್ಯ ಕಾರ್ಯಕರ್ತರು ಮತ್ತು ಕೋವಿಡ್ ವಾರಿಯರ್ಸ್‌ಗಳು, ವೈದ್ಯರುಗಳ ಮನ ಒಲಿಸುವುದೇ ಕಷ್ಟಕರವಾದ ಕಾರ್ಯವಾಗಿದೆ. ಮುಂಚೂಣಿ ಕಾರ್ಯಕರ್ತರೇ ಹಿಂಜರಿಕೆ ತೋರಿದಲ್ಲಿ ಮುಂದೆ ಮೂರನೇ ಹಂತದಲ್ಲಿ ಜನಸಾಮಾನ್ಯರಿಗೆ ಲಸಿಕೆ ಹಾಕುವಾಗ ಇನ್ನೆಷ್ಟು ಸಮಸ್ಯೆಗಳು ಬರುವುದೋ ಕಾದು ನೋಡಬೇಕಿದೆ. ಭಾರತ ಕರೋನಾ ಲಸಿಕೆ ಉತ್ಪಾದಿಸಿ ನೆರೆಹೊರೆ ರಾಷ್ಟ್ರಗಳಿಗೆ ಉಚಿತವಾಗಿ ಹಂಚಿಕೆ ಮಾಡಿರುವುದು, ವಿಶ್ವ ಆರೋಗ್ಯ ಸಂಸ್ಥೆಯ ಮೆಚ್ಚುಗೆಗೆ ಪಾತ್ರವಾಗಿರುವುದನ್ನು ಇಲ್ಲಿ ಸ್ಮರಿಸಲೇಬೇಕು.

ಕರೋನಾದ ಒಂದು ವರ್ಷದ ಅವಧಿಯಲ್ಲಿ ಭಾರತದ ಶೈಕ್ಷಣಿಕ ಪರಿಸ್ಥಿತಿ ತೀವ್ರ ಕುಸಿತಕ್ಕೆ ಈಡಾಗಿದೆ. ಜನವರಿ 24ರ ಅಂತರ ರಾಷ್ಟ್ರೀಯ ಶಿಕ್ಷಣ ದಿನವಾಗಿ ಘೋಷಿಸಿದ ವಿಶ್ವಸಂಸ್ಥೆ, ಶಿಕ್ಷಣದ ಮೌಲ್ಯ, ಅಭಿವೃದ್ಧಿ ಶಿಕ್ಷಣದ ಮಹತ್ವ ಎಲ್ಲರನ್ನೂ ಒಳಗೊಳ್ಳುವ ಗುಣಮಟ್ಟದ ಶಿಕ್ಷಣದ ವ್ಯಾಪಕತೆಯನ್ನು ಕುರಿತು ಈ ದಿನ ಪುನರ್ವಿಮರ್ಶಿಸಿಕೊಂಡು ಮುಂದಿನ ಹೆಜ್ಜೆ ಹಾಕಲು ಅವಕಾಶ ಒದಗಿಸಿದೆ. 'ಶಿಕ್ಷಣ ಮತ್ತೆ ಪಡೆಯಿರಿ, ಪುನರ್ ಶಕ್ತಿ ತುಂಬಿಸಿ' ಇದು ಇಂದಿನ ಘೋಷವಾಕ್ಯವಾಗಿದೆ. ಕರೋನಾದಿಂದಾಗಿ, 190 ದೇಶಗಳ 1.6 ಬಿಲಿಯನ್ ಮಕ್ಕಳು, ಭಾರತದಲ್ಲೇ 286 ಮಿಲಿಯನ್ ಮಕ್ಕಳು ಶಿಕ್ಷಣ ವಂಚಿತರಾದರು. ಅಂದಾಜಿನಂತೆ ಕಳೆದ ವರ್ಷದಲ್ಲಿ ಶೇ.0.78 ಬಿಲಿಯನ್ ಮೊತ್ತ ಮಾತ್ರ ಶಿಕ್ಷಣಕ್ಕಾಗಿ ವ್ಯಯಿಸಲಾಯಿತು. ಶಿಕ್ಷಣಕ್ಕಾಗಿ ಇಟ್ಟ 11.8 ಟ್ರಿಲಿಯನ್ ಮೊತ್ತದಲ್ಲಿ 73 ಬಿಲಿಯನ್ ಡಾಲರ್ ಮೊತ್ತವನ್ನು ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ವೆಚ್ಚಮಾಡಲಾಯಿತು. ಆದಾಗ್ಯೂ ಈ ಸಂದರ್ಭದಲ್ಲಿ ರೇಡಿಯೋ, ಟಿ.ವಿ., ಮೊಬೈಲ್ ಇಂಟರ್ನೆಟ್ ಮೂಲಕ ಶಿಕ್ಷಣಕ್ಕಾಗಿ ತೆಗೆದುಕೊಂಡ ಕ್ರಮಗಳು, ಶ್ಲಾಘನೀಯ ವಿಚಾರವಾಗಿದೆ. ಇನ್ನೂ 800 ಮಿಲಿಯನ್‌ಗಿಂತಲೂ ಅಧಿಕ ವಿದ್ಯಾರ್ಥಿಗಳು ಶಿಕ್ಷಣದಿಂದ ಹೊರಗಿರುವುದು ಇನ್ನೂ ಸಕಾಲಿಕ ಕ್ರಮಗಳ ವ್ಯಾಪಕತೆಯ ಕಡೆ ಗಮನ ಹರಿಸಲು ಸೂಚಿಸುತ್ತದೆ.

ಇದೇ ಸಮಯದಲ್ಲಿ ಶಿವಮೊಗ್ಗಾದ ಹುಣಸೋಡುನಲ್ಲಿ ನಡೆದ ಗಣಿಸ್ಫೋಟ ದುರಂತ, ಸಾವು ನೋವುಗಳು, ಕರ್ನಾಟಕದಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಯ ಚಿತ್ರಣವನ್ನೇ ಬಿಚ್ಚಿಡುತ್ತದೆ. ಬಳ್ಳಾರಿ, ಚಾಮರಾಜನಗರ, ಕೊಪ್ಪಳ, ಹಾವೇರಿ, ಧಾರವಾಡ, ರಾಯಚೂರು, ಹಾಸನ, ದಕ್ಷಿಣ ಕನ್ನಡ, ಉಡುಪಿ, ರಾಮನಗರ, ಮಂಡ್ಯ, ವಿಜಯಪುರ, ಕಲ್ಬುರ್ಗಿ, ಬೀದರ್ ಜಿಲ್ಲೆಗಳಲ್ಲಿ ಭಾಗಶಃ ಅಕ್ರಮ ಗಣಿಗಾರಿಕೆಗಳನ್ನು ಕಾನೂನು ವ್ಯಾಪ್ತಿಗೆ ಒಳಪಡಿಸಿ, ದುರಂತಗಳು, ಸಾವುನೋವುಗಳನ್ನು ತಪ್ಪಿಸುವ ಜವಾಬ್ದಾರಿ ಸರ್ಕಾರದ ಮೇಲಿದೆ. ಇಂಥಹದ್ದೇ ಮತ್ತೊಂದು ಅಮಾನವೀಯ ಘಟನೆ ಶತಮಾನಗಳ ದುರಂತ ಪರಂಪರೆಯನ್ನೇ ಕಣ್ಣಮುಂದಿಡುತ್ತದೆ. ಅದೆಂದರೆ ಜನವರಿ 28ರಂದು ಕಲ್ಬುರ್ಗಿಯಲ್ಲಿ ಮಲದಗುಂಡಿ ಸ್ವಚ್ಛಪಡಿಸಲು ಕಾರ್ಮಿಕರನ್ನು ಇಳಿಸಿ, ಅವರ ದುರ್ಮರಣಕ್ಕೆ ಈಡಾದದ್ದು, ನಮ್ಮ ಅವಮಾನವೀಯತೆಯ ಚರಿತ್ರೆಯನ್ನು ತೆರೆದಿಡುತ್ತದೆ. ಮಲಗುಂಡಿ ಮಾನವ ಸ್ವಚ್ಛಗೊಳಿಸುವ ಪದ್ಧತಿ ನಿಷೇಧ ಕಾಯ್ದೆ - 2013ರಿಂದ ಜಾರಿಯಲ್ಲಿದ್ದರೂ ಮಾಲೀಕರು ಮತ್ತು ಸಾವಿನ ಗುಂಡಿಗೆ ನೂಕುವವರನ್ನು ಕಠಿಣ ಶಿಕ್ಷೆಗೆ ಗುರಿಪಡಿಸಿದ ನಿದರ್ಶನಗಳು ನಮ್ಮ ಮುಂದಿಲ್ಲ. ಮ್ಯಾನುಯಲ್ ಸ್ಕಾವೆಂಜಿಂಗ್ ನಿಷೇಧ ಕಾಯ್ದೆಯ ಸಮರ್ಪಕ ಜಾರಿ, ಸ್ವಚ್ಛತಾ ಪರಿಕರ ವಿತರಣೆ, ಆರೋಗ್ಯ ರಕ್ಷಣೆ, ಪುನರ್ವಸತಿ ಇಂದಿನ ತುರ್ತಾಗಿರುವುದು ಸರ್ಕಾರದ ನಿಗಾದಲ್ಲಿ ಇರಲೇ ಬೇಕಾದ, ನೀತಿ ನಡಾವಳಿಗಳಾಗಿವೆ.

ಭಯೋತ್ಪಾದಕ ನಿಗ್ರಹ ತರಬೇತಿಗೆ 16 ಮಂದಿ, ಮಹಿಳಾ ಕಮಾಂಡೋಗಳು ಇದೇ ಮೊದಲ ಬಾರಿಗೆ ಆಯ್ಕೆಯಾಗಿರುವುದು ಮಹಿಳಾ ಶಕ್ತಿಯ ದ್ಯೋತಕವಾಗಿದೆ. ಕರ್ನಾಟಕದ ಈ ಯುವ ಮಹಿಳಾ ಕಾನ್ಸ್‌ಟೇಬಲ್‌ಗಳು, 'ಗರುಡ ಟೀಂ' ನಂತೆಯೇ ದೇಶದ 36 ಮಹಿಳಾ ವಿಶೇಷ ಆಯುಧ ಟ್ಯಾಕ್ ಟೀಂ (SWAT) ದೆಹಲಿಯಲ್ಲಿದೆ. 34 ಮಂದಿಯ ಸಿ.ಆರ್.ಪಿ.ಎಫ್ ಟೀಂ 'COBRA' ಟೀಂ ಸಹ ಇದೆ. ಇಂಥಹ ಬೆಳವಣಿಗೆಯ ನಡುವೆಯೂ ಸಾಮಾನ್ಯ ಮಹಿಳಾ ಜಗತ್ತು ಸಂಕಷ್ಟದಲ್ಲಿಯೇ ಇದೆ. ಐ.ಪಿ.ಸಿ. ಸೆಕ್ಷನ್ 498ಎ ಪ್ರಕಾರ ದಾಖಲಾಗುತ್ತಿರುವ ಪ್ರಕರಣಗಳು ಹೆಚ್ಚಾಗುತ್ತಿವೆ. ರಾಷ್ಟ್ರೀಯ ಅಪರಾಧ ಬ್ಯೂರೋ-ಅಂಕಿ ಅಂಶದಂತೆ ಕೌಟುಂಬಿಕ ಹಿಂಸಾಚಾರದಿಂದ 2019-20ರಲ್ಲಿ ಕರ್ನಾಟಕದಲ್ಲಿ ಶೇ 44, ಬಿಹಾರ ಶೇ. 40, ತೆಲಂಗಾಣ ಶೇ. 36.9, ಹಿಮಾಚಲ ಪ್ರದೇಶ ಶೇ. 8.3, ಆಂಧ್ರಪ್ರದೇಶ ಶೆ.30, ನಾಗಲ್ಯಾಂಡ್ ಶೆ. 6.4, ಲಕ್ಷದ್ವೀಪ ಶೇ. 1.3 ದಾಖಲಾಗಿರುವುದನ್ನು ಕಾಣಬಹುದು. ಕೆಲವು ರಾಜ್ಯಗಳು ಈ ಹಿಂಸಚಾರದ ಮಾಹಿತಿಯನ್ನೇ ನೀಡಿಲ್ಲ. ಪುರುಷಾಹಂಕಾರದೆಡೆಗೆ ಬೆರಳೆತ್ತಿ ತೋರುತ್ತಿರುವ ಈ ದುಷ್ಟ ಪಿಡುಗನ್ನು ನಿವಾರಿಸಲು, ಜನಜಾಗೃತಿ, ಕಾನೂನು ಶಿಕ್ಷೆಗಳ ಪ್ರಚಾರ, ಶಾಸನಸಭೆಗಳಲ್ಲಿ ಚರ್ಚೆ, ಪುರುಷರ ಬಹಿರಂಗ ಪ್ರತಿಜ್ಞೆ ಅಭಿಯಾನಗಳಿಂದ ತಡೆಯಲು ಪ್ರಯತ್ನಿಸಬಹುದಾಗಿದೆ. ಭವಿಷ್ಯದ ಭಾರತವನ್ನು ಹೊಸ ಆಶಯ ಮತ್ತು ಪ್ರಯತ್ನದೊಂದಿಗೆ ಆರಂಭಿಸೋಣ ಎಂಬ ಶುಭನುಡಿ ನಮ್ಮೆಲ್ಲರಲ್ಲಿರಲಿ. ವಂದನೆಗಳು.



ಸಂಸಾರ ಪ್ರವೇಶ : ಗಾಂಧೀಜಿ ಅವರ "ನನ್ನ ಸತ್ಯಾನ್ವೇಷಣೆ' ಕೃತಿಯಿಂದ ಆಯ್ದ ಭಾಗ

(ಗಾಂಧೀಜಿ ಅವರ ಜೀವನದಲ್ಲಿ ನಡೆದ ಹಲವಾರು ಘಟನೆಗಳು ಇಂದಿನ ಹಲವು ಸಂಕಷ್ಟದಲ್ಲಿ ದಾರಿತೋರುವ ದೀವಿಗೆಗಳಾಗಿವೆ. ಹೀಗಾಗಿ ಗಾಂಧೀಜಿ ಅವರ ಆತ್ಮಕಥೆಯ ಆಯ್ದ ಭಾಗಗಳನ್ನು ನಿಯತವಾಗಿ ಪ್ರಕಟಿಸುತ್ತಿದ್ದೇವೆ.)

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಮಕ್ಕಳ ಶಿಕ್ಷಣದ ವಿಷಯದಲ್ಲಿಯೂ ಕೆಲವು ಸುಧಾರಣೆಗಳನ್ನು ಮಾಡಬೇಕೆಂದು ನಾನು ಯೋಚಿಸಿದ್ದೆ. ನಮ್ಮಣ್ಣನಿಗೆ ಮಕ್ಕಳಿದ್ದರು. ಇಂಗ್ಲೆಂಡಿಗೆ ಹೊರಟಾಗ ನಾನು ಬಿಟ್ಟು ಹೋಗಿದ್ದ ನನ್ನ ಮಗನಿಗೆ ಈಗ ನಾಲ್ಕು ವರುಷ ವಯಸ್ಸಾಗಿತ್ತು. ಅವರನ್ನು ನನ್ನ ಕಣ್ಣೆದುರಿಗೆ ಇಟ್ಟುಕೊಂಡು ತಿದ್ದಿ, ವ್ಯಾಯಾಮ ಮಾಡಿಸಿ, ದೃಢಕಾಯರನ್ನಾಗಿ ಮಾಡಬೇಕು ಎಂಬುದು ನನ್ನ ಇಷ್ಟವಾಗಿತ್ತು. ನಮ್ಮಣ್ಣನೂ ಇದನ್ನು ಒಪ್ಪಿದನು. ಈ ಪ್ರಯತ್ನದಲ್ಲಿ ನಾನು ಸ್ವಲ್ಪ ಹೆಚ್ಚು ಕಡಿಮೆ ಜಯಶಾಲಿಯಾದೆ. ಮಕ್ಕಳ ಜತೆಗೆ ಇರುವುದು ನನಗೆ ಪ್ರಿಯವಾಗಿದ್ದಿತು. ಅವರ ಸಹವಾಸ, ಅವರೊಡನೆ ಹಾಸ್ಯ, ಮಾತುಕತೆ ಇವು ಇಂದಿಗೂ ನನ್ನ ಸ್ವಭಾವವಾಗಿವೆ. ಅಂದಿನಿಂದ ಮಕ್ಕಳಿಗೆ ನಾನು ಒಳ್ಳೆಯ ಶಿಕ್ಷಕನಾಗಬಲ್ಲೆ ಎಂಬುದು ನನ್ನ ಭಾವನೆಯಾಗಿದೆ.

ಊಟ, ತಿಂಡಿಯಲ್ಲಿ ಸುಧಾರಣೆ ಮಾಡುವುದು ಅವಶ್ಯಕವಾಗಿತ್ತು. ಕಾಫಿ ಮತ್ತು ಟೀ ನಮ್ಮ ಮನೆಯಲ್ಲಿ ಆಗಲೇ ಪ್ರವೇಶ ಮಾಡಿದ್ದುವು. ನಾನು ಇಂಗ್ಲೆಂಡಿನಿಂದ ಹಿಂದಿರುಗುವ ವೇಳೆಗೆ, ಸ್ವಲ್ಪ ಇಂಗ್ಲಿಷ್ ವಾತಾವರಣ ನಮ್ಮ ಮನೆಯಲ್ಲಿರುವುದು ಯೋಗ್ಯವೆಂದು ನಮ್ಮಣ್ಣ ಭಾವಿಸಿದ್ದ. ಈ ಕಾರಣದಿಂದ, ವಿಶೇಷ ಸಂದರ್ಭಗಳಲ್ಲಿ ಮಾತ್ರ ಉಪಯೋಗಿಸುತ್ತಿದ್ದ ಚೀಣಾ ಪಾತ್ರೆಗಳು ಸಾಧಾರಣವಾಗಿಯೇ ಬಳಕೆಗೆ ಬಂದವು. ನನ್ನ ಸುಧಾರಣೆಗಳು ಈ ಬದಲಾವಣೆಗಳನ್ನು ಪೂರ್ತಿ ಮಾಡಿದವು. ಜವೆಗೋಧಿಯ ಗಂಜಿಯನ್ನು ನಾನು ಪ್ರಾರಂಭಿಸಿದೆ. ಕಾಫಿ, ಟೀಗಳಿಗೆ ಬದಲಾಗಿ ಕೋಕೋ ಪ್ರಾರಂಭಿಸಿದೆ. ಆದರೆ, ವಾಸ್ತವವಾಗಿ ಕೋಕೋ, ಕಾಫಿ, ಟೀಗಳ ಜತೆ ಸೇರಿತು. ಬೂಟ್ಸ್‌ಗಳು, ಮೋಚಾಗಳೂ ಆಗಲೇ ಮನೆಯಲ್ಲಿದ್ದವು. ನಾನು ಯೂರೋಪಿನವರ ಉಡುಪನ್ನು ಧರಿಸಿ ಮನೆಯ ಆಂಗ್ಲ ವಾತಾವರಣವನ್ನು ಪೂರ್ಣಗೊಳಿಸಿದೆ. ಹೀಗೆ ವೆಚ್ಚ ಹೆಚ್ಚುತ್ತಾ ಹೋಯಿತು. ದಿನದಿನವೂ ಹೊಸ ಹೊಸ ಪದಾರ್ಥಗಳು ಮನೆಗೆ ಬರತೊಡಗಿದವು. ನಮ್ಮ ಮನೆಯ ಬಾಗಿಲಿಗೆ ನಾವು ಬಿಳಿಯ ಆನೆಯನ್ನು ಕಟ್ಟಿಹಾಕಿಕೊಂಡುದಾಯಿತು. ಆದರೆ ಅದಕ್ಕೆ ಬೇಕಾದ ಹಣವನ್ನು ಎಲ್ಲಿಂದ ತರುವುದು, ರಾಜಕೋಟೆಯಲ್ಲಿ ವಕೀಲಿ ವೃತ್ತಿಯನ್ನು ಪ್ರಾರಂಭಿಸುವುದೆಂದರೆ ಹಾಸ್ಯಾಸ್ಪದವಾಗುತ್ತಿತ್ತು. ನನಗೆ ಅಲ್ಲಿನ ವಕೀಲರಿಗಿದ್ದಷ್ಟು ತಿಳಿವಳಿಕೆಯೂ, ಜ್ಞಾನವೂ ಇರಲಿಲ್ಲ. ಆದರೆ ಅವರಿಗೆ ಕೊಡುತ್ತಿದ್ದುದರ ಹತ್ತರಷ್ಟು ಶುಲ್ಕವನ್ನು ನಾನು ನಿರೀಕ್ಷಿಸುತ್ತಿದ್ದೆ. ನನ್ನನ್ನು ನಿಯಮಿಸಿಕೊಳ್ಳುವಷ್ಟು ಮೂರ್ಖರಾದ ಕಕ್ಷಿಗಾರರು ಯಾರೂ ಇರಲಿಲ್ಲ. ಒಂದು ವೇಳೆ ಅಂತಹ ದಡ್ಡ ಕಕ್ಷಿಗಾರರು ನನ್ನಲ್ಲಿ ಬಂದರೂ ನನ್ನ ಅಜ್ಞಾನದ ಜೊತೆ ಉದ್ಧಟತನವನ್ನೂ ಮೋಸವನ್ನೂ ಬೆರೆಸಿ, ಜಗತ್ತಿಗೆ ನನ್ನ ಹಣವನ್ನು ಇನ್ನೂ ಹೆಚ್ಚಿಸಿಕೊಳ್ಳುವುದೇ? ಸ್ನೇಹಿತರು, 'ಬೊಂಬಾಯಿಗೆ ಹೋಗಿ ಕೆಲವು ಕಾಲ ಇರಿ, ಹೈಕೋರ್ಟಿನ ಅನುಭವವನ್ನು ಪಡೆಯಿರಿ. ಹಿಂದೂ ಕಾನೂನನ್ನು ಅಧ್ಯಯನ ಮಾಡಿ, ದೊರೆತಷ್ಟು ಮೊಕದ್ದಮೆಗಳನ್ನು ಪಡೆಯಲು ಪ್ರಯತ್ನಿಸಿ' ಎಂದು ಹೇಳಿದರು. ಅವರ ಸಲಹೆಯನ್ನು ಅಂಗೀಕರಿಸಿ ನಾನು ಬೊಂಬಾಯಿಗೆ ಹೋದೆ.

ನಾನು ಬೊಂಬಾಯಿಯಲ್ಲಿ ಒಂದು ಮನೆ ಮಾಡಿ ಒಬ್ಬ ಅಡಿಗೆಯವನನ್ನು ಗೊತ್ತು ಮಾಡಿಕೊಂಡೆ. ನನ್ನ ಕೆಲಸದಲ್ಲಿ ನಾನು ಅಶಕ್ತನಾಗಿದ್ದಂತೆ ಅವನ ಕೆಲಸದಲ್ಲಿ ಅವನೂ ಅಶಕ್ತನಾಗಿದ್ದನು. ಆತ ಬ್ರಾಹ್ಮಣ. ಆತನನ್ನು ನೌಕರನೆಂದು ಭಾವಿಸದೆ ಕುಟುಂಬಕ್ಕೆ ಸೇರಿದ ಒಬ್ಬನನ್ನಾಗಿ ನಾನು ಭಾವಿಸಿದೆ. ಆತ ಮೈಮೇಲೆ ನೀರು ಸುರಿದುಕೊಳ್ಳುತ್ತಿದ್ದ. ಆದರೆ ಮೈ ತಿಕ್ಕಿ ಸ್ನಾನ ಮಾಡುತ್ತಿರಲಿಲ್ಲ. ಆತನ ವಸ್ತ್ರ ಕೊಳಕಾಗಿತ್ತು. ಜನಿವಾರವೂ ಅಷ್ಟೆ. ಶಾಸ್ತ್ರಗಳ ವಿಷಯ ಅವನಿಗೆ ಏನೇನೂ ತಿಳಿದಿರಲಿಲ್ಲ. ಆದರೆ ಅವನಿಗಿಂತ ಉತ್ತಮವಾದ ಅಡಿಗೆಯವನು ನನಗೆ ಎಲ್ಲಿಂದ ಸಿಕ್ಕಬೇಕು.

ನಾನು ಅವನನ್ನು ಹೀಗೆ ಕೇಳುತ್ತಿದ್ದೆ; "ರವಿಶಂಕರ್, ನಿನಗೆ ಅಡಿಗೆ ಮಾಡಲು ಬರದೆ ಇರಬಹುದು. ಆದರೆ ನಿನಗೆ ಸಂಧ್ಯಾವಂದನೆ ಚೆನ್ನಾಗಿ ಬರುತ್ತಿರಬೇಕಲ್ಲವೆ?" ಆತನ ಉತ್ತರ ಹೀಗಿರುತ್ತಿತ್ತು: "ಸಂಧ್ಯಾವಂದನೆ! ಸ್ವಾಮಿ, ನೇಗಿಲೇ ನಮ್ಮ ಸಂಧ್ಯಾವಂದನೆ, ಗುದ್ದಲಿಯೇ ನಮ್ಮ ಧರ್ಮಾನುಷ್ಠಾನ. ನಾವು ಅಂತಹ ಬ್ರಾಹ್ಮಣರು, ನಾನು ನಿಮ್ಮ ಕೃಪೆಯಿಂದಲೇ ಬದುಕಬೇಕಾಗಿದೆ. ಹಾಗಾಗದಿದ್ದಲ್ಲಿ ನನ್ನ ವ್ಯವಸಾಯದ ಕಸಬು ನನಗೆ ಇದ್ದೇ ಇದೆ. ಆದುದರಿಂದ ನಾನು ರವಿಶಂಕರನ ಉಪಾಧ್ಯಾಯನಾಗಬೇಕಾಯಿತು. ನನಗೆ ಅದಕ್ಕೆ ಬೇಕಾದ ವಿರಾಮವೂ ಇದ್ದಿತು. ಅಡಿಗೆಯ ಅರ್ಧ ಭಾಗವನ್ನು ನಾನು ವಹಿಸಿಕೊಂಡು ಶಾಖಾಹಾರ ತಯಾರಿಕೆಯಲ್ಲಿ ಇಂಗ್ಲಿಷ್ ಅಡಿಗೆಯ ಪ್ರಯೋಗವನ್ನು ಪ್ರಾರಂಭಿಸಿದೆ. ಒಂದು (ಸ್ಟೋವ್) ಎಣ್ಣೆ ಒಲೆಯನ್ನು ಕೊಂಡುಕೊಂಡು ನಾನೇ ಅಡಿಗೆಮನೆಯ ಪಾರುಪತ್ಯವನ್ನು ವಹಿಸಿಕೊಂಡೆ. ರವಿಶಂಕರನ ಸಹಪಂಕ್ತಿಯಲ್ಲಿ ಕುಳಿತು ಊಟಮಾಡಲು ನನಗೆ ಆಕ್ಷೇಪವಿರಲಿಲ್ಲ. ರವಿಶಂಕರನಿಗೂ ಇದ್ದಂತೆ ಕಾಣಲಿಲ್ಲ. ಆದುದರಿಂದ ನಾವಿಬ್ಬರೂ ಸುಖವಾಗಿ ಜೀವಿಸತೊಡಗಿದೆವು. ಒಂದು ಅಡಚಣೆ ಮಾತ್ರ ಇತ್ತು. ಅವನು ಕೊಳಕುತನವನ್ನು ಬಿಡುವುದಿಲ್ಲವೆಂದೂ, ಅಡಿಗೆಯನ್ನು ಶುಚಿಯಾಗಿ ಇಡುವುದಿಲ್ಲವೆಂದೂ ಪ್ರತಿಜ್ಞೆ ಮಾಡಿದಂತೆ ಕಂಡುಬಂದಿತು.

ಮುಂದುವರಿಯುವುದು...

ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಕರ್ನಾಟಕದಲ್ಲಿ ಕಾಂಗ್ರೆಸ್ : ಬೆಳಗಾವಿ, 1924

ಮೋ. ಕ. ಗಾಂಧಿ (ಗಾಂಧಿ ಮತ್ತು ಕರ್ನಾಟಕ ಕೃತಿಯಿಂದ)
ಸಂಪಾದನೆ : ಸಿದ್ದವನಹಳ್ಳಿ ಕೃಷ್ಣಶರ್ಮ

"ಗಾಂಧೀಜಿ ಅವರ ವಿಚಾರಗಳು - ಚಿಂತನೆಗಳು - ಈ ಅಂಕಣದಲ್ಲಿ ಗಾಂಧೀಜಿ ಅವರು ಕೈಗೊಂಡ ನಿಲುವು ನಿರ್ಧಾರಗಳನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ. ಈ ಅಂಕಣವು ನಿಯತವಾಗಿ ಬರಲಿದೆ.
(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಆದ್ದರಿಂದಲೇ ಚರಖಾ ಪ್ರಚಾರವನ್ನು ತಾವು ಕೈಗೊಂಡದ್ದು. ಈ ರಾಟೆಯ ಕಾರ್ಯಕ್ರಮದ ಮೇಲು ಕೀಳು ಎಂಬ ಭೇದವಿಲ್ಲದೆ, ಹಳ್ಳಿ-ಪಟ್ಟಣ ಎಂಬ ಭೇದವಿಲ್ಲದೆ ಒಬ್ಬೊಬ್ಬರೂ ಒಂಟಿಯಾಗಿ ಮಾಡಬಹುದು. ಆದ್ದರಿಂದ ಅದು ಅವರ ಈ ವರ್ಷದ ಕಾರ್ಯಕ್ರಮದ ಕಮಾನಿಗೆ ನಡುಗಲ್ಲು ಇದ್ದಂತೆ. ಚರಖಾ ಕಾರ್ಯಕ್ರಮ ಅಪಾರವಾಗಿ ನಡೆಯದೇ ಈ ವರ್ಷದಲ್ಲಿ ಪರದೇಶಿ ವಸ್ತ್ರ ಬಹಿಷ್ಕಾರ ಸಂಪೂರ್ಣವಾಗಿ ನಡೆಯುವುದಿಲ್ಲ. ಕಾಂಗ್ರೆಸ್ಸು ನೂಲುವ ಮತದಾನವನ್ನು ಅಂಗೀಕರಿಸಿದರೆ ವರ್ಷವೆಲ್ಲ ಅದನ್ನು ಶ್ರದ್ಧೆಯಿಂದ ನಡೆಸಬೇಕು ಅದನ್ನು ಒಪ್ಪಿಕೊಂಡು, ಅದಕ್ಕೆ ಮತಕೊಟ್ಟು ಅದರಂತೆ ನಡೆಯದೆ ಇದ್ದರೆ ತಮಗೆ ಹೃದಯಾಘಾತವಾಗುತ್ತದೆ ಎಂದರು.

ಹೊಸ ಕಾರ್ಯಕ್ರಮ

ಹೊಸ ಕಾರ್ಯಕ್ರಮ ಒಂದು ಬಂದಿತ್ತು. ಬ್ರಿಟಿಷ್ ಸರಕಾರದೊಂದಿಗೆ ಒಂದು ಹೊಸ ಬಗೆಯ ಹೋರಾಟ ನಡೆಸಬೇಕೆಂದು ಗಾಂಧೀಜಿಯವರ ಮನಸ್ಸಿನಲ್ಲಿತ್ತು. ಆದರೆ ಪರದೇಶಿ ವಸ್ತ್ರಬಹಿಷ್ಕಾರ ಸಂಪೂರ್ಣವಾಗಿ ಆಗದೆ, ಅದು ಯಶಸ್ವಿಯಾಗುವಂತಿರಲಿಲ್ಲ. ಅಪರಿವರ್ತನವಾದಿಗಳು ತಮ್ಮ ಶಕ್ತಿಯನ್ನೆಲ್ಲ ಹಾಕಿ, ಬರುವ ವರ್ಷ ಶ್ರದ್ಧೆಯಿಂದ ಚರಖಾ ಕಾರ್ಯಕ್ರಮವನ್ನು ನಡೆಸದೆ ಇದ್ದರೆ ತಮಗೆ ಹೃದಯಕ್ಕೆ ವಜ್ರಾಘಾತವಾಗುತ್ತದೆ. ಮುಂದಿನ ಕಾರ್ಯಕ್ರಮ ಬಾರ್ಡೋಲಿಯ ಕಾರ್ಯಕ್ರಮಕ್ಕಿಂತ ಭಿನ್ನ. ಈ ಹೊಸ ಕಾರ್ಯಕ್ರಮ ಏನೆಂಬುದನ್ನು ಈಗಲೇ ತಿಳಿಸುವುದಿಲ್ಲ. ಆದರೆ ವಿದೇಶೀ ವಸ್ತ್ರಬಹಿಷ್ಕಾರದ ಈ ಕಾರ್ಯಕ್ರಮ ಸಫಲಗೊಂಡರೆ, ದೇಶದಲ್ಲಿ ಏನೇ ನಡೆಯುತ್ತಿರಲಿ, ಈ ಹೊಸ ಕಾರ್ಯಕ್ರಮ ಆಚರಣೆಗೆ ಬರುತ್ತದೆ. ಅದಕ್ಕೆ ಮುಖ್ಯ ಆಧಾರ ಪರದೇಶಿ ವಸ್ತ್ರಬಹಿಷ್ಕಾರ ಎಂದರು.

ಬಿನ್ನವತ್ತಳೆಗಳಿಗೆ ಗಾಂಧೀಜಿಯ ಉತ್ತರ

ಅವತ್ತೇ ಬೆಳಗಾಂವಿಯ ಪೌರಸಭೆ ಮತ್ತು ಜಿಲ್ಲಾ ಬೋರ್ಡುಗಳು ಗಾಂಧೀಜಿಗೆ ಬಿನ್ನವತ್ತಳೆಗಳನ್ನು ಅರ್ಪಿಸಿದವು. ಅದಕ್ಕೆ ಉತ್ತರ ಕೊಡುತ್ತ ತಾವು ಬೆಳಗಾಂವಿಗೆ ಏನೂ ಸೇವೆ ಸಲ್ಲಿಸದೆ ಇದ್ದುದರಿಂದ ಅದರಲ್ಲಿ ಇದ್ದ ಪ್ರಶಂಸೆಯೆಲ್ಲ ತಮಗೆ ಸಲ್ಲಬೇಕಾದ್ದಲ್ಲ ಎಂದರು. ಪ್ರಸ್ತುತ ಪರಿಸ್ಥಿತಿಯಲ್ಲಿ ಭಾರತದ ಎಲ್ಲ ಪೌರಸಭೆಗಳೂ ರಾಷ್ಟ್ರೀಯ ಚಳವಳಿಯಲ್ಲಿ ಭಾಗವಹಿಸಬೇಕು; ಆದರೆ ಪ್ರಾಥಮಿಕ ಕರ್ತವ್ಯ ಆದ ನೈರ್ಮಲ್ಯ ಸಫಾಯಿಗಳನ್ನು ಬಿಡಬಾರದು ಎಂದರು. ಪಾಶ್ಚಾತ್ಯ ನಾಗರಿಕತೆಯ ಮೋಹ ತಮಗೆ ಇಲ್ಲವಾದರೂ ಸಫಾಯಿಯ ಬಗ್ಗೆ ಅವರಿಂದ ಕಲಿಯಬೇಕಾದ್ದು ಬಹಳ ಇದೆ ಎಂದರು. ಭಾರತ ಬೇಸಾಯದ ದೇಶ. ಈ ದೇಶದ ಪಟ್ಟಣಗಳಲ್ಲಿ ಪ್ಲೇಗು ಮುಂತಾದ ಪಿಡುಗುಗಳು ಹರಡಬಾರದು. ಈ ಪಿಡುಗು ದೈವದತ್ತ ಎಂದು ಹೇಳುವುದನ್ನು ಕೇಳಿ ತಮಗೆ ಬಹಳ ದುಃಖ. ತಾವು ದೇವರಲ್ಲಿ ನಂಬಿಕೆ ಇದ್ದವರು. ಆದರೆ ಮಾನವ ಸಂಕಟವನ್ನು, ಮನುಷ್ಯ ಪ್ರಯತ್ನದಿಂದ ನಿವಾರಿಸಿಕೊಳ್ಳಬಹುದಾದ ಅವಕಾಶ ಅಪಾರ. ನಾವೇ ದೈವೀ ನಿಯಮವನ್ನು ಅಥವಾ ಪ್ರಕೃತಿ ನಿಯಮವನ್ನು ಮೀರಿ, ಈ ಪಿಡುಗು ದೈವದತ್ತ ಎನ್ನುವುದು ಆಭಾಸ. ಬೇರೆ ಬೇರೆ ಜಾತಿಗಳಲ್ಲಿ ಇದ್ದ ಸೌಹಾರ್ದವನ್ನು ನೋಡಿ ತಮಗೆ ಸಂತೋಷ. ಇವು ಹೀಗೇ ಇರಲಿ. ಇದರ ಜೊತೆಗೇ ಅಸ್ಪೃಶ್ಯರನ್ನು ಪ್ರೀತಿಸಿ ಎಂದರು.

ಒಪ್ಪಂದದ ಪ್ರಸ್ತಾಪ

ವಿಷಯ ನಿಯಾಮಕ ಸಮಿತಿಯಲ್ಲಿ ಡಿಸೆಂಬರ್ 23ರ ದಿನ ಯಾವ ವಿಷಯದಲ್ಲಿಯೂ ಸಭೆಯನ್ನು ಇಬ್ಭಾಗ ಮಾಡುವುದು ತಮಗೆ ಇಷ್ಟವಿಲ್ಲ ಎಂದರು ಗಾಂಧೀಜಿ. ಸ್ವರಾಜ್ಯ ಪಕ್ಷದ ಮುಖಂಡರ ಸಂಗಡ ಒಂದು ಸಂಧಾನ ಮಾಡಿಕೊಂಡು ಅದನ್ನು ಸ್ಥಿರೀಕರಿಸಿ ಎಂದು ಕೇಳಿಕೊಂಡರು. ಹಿಂದಿನ ಅ. ಭಾ. ಕಾಂಗ್ರೆಸ್ ಸಮಿತಿಯ ಕಾಲದಿಂದ ಇಲ್ಲಿಯವರೆಗೆ ನಡೆದುದು ಎಲ್ಲವನ್ನೂ ತಾವು ನೋಡಿದ್ದೇವೆ. ಈ ಹೆಜ್ಜೆ ಆತ್ಮಹತ್ಯೆಯ ಹೆಜ್ಜೆ, ಈ ನೂಲುವ ಮತದಾನದಿಂದ ಕಾಂಗ್ರೆಸಿನಲ್ಲಿ ನೂರ-ಕ್ಕೆ ತೊಂಬತ್ತು ಜನ ವಿರುದ್ಧವಾಗಿರುವ ಈ ಮತದಾನ ಪದ್ಧತಿಯನ್ನು ಎಲ್ಲರೂ ವಿರೋಧಿಸುವ ಲಕ್ಷಣ ಇದೆ-ಯೆಂದು ವಿಠ್ಠಲಭಾಯಿ ಪಟೇಲರು, ಗಾಂಧೀಜಿಗೆ ಹೇಳಿದ್ದರು. ಈಗಾಗಲೇ ಬಿಹಾರ ಕಾಂಗ್ರೆಸ್ ಸಮಿತಿ, ಸಿಂಧ್ ಮಧ್ಯಪ್ರಾಂತ ಸಮಿತಿಗಳು ಅದನ್ನು ಒಪ್ಪಿಕೊಂಡಿದ್ದವು. ಆದರೂ ಸಭೆಗೆ ಬೇಡ ಎನಿಸಿದರೆ ಇದನ್ನು ಒಪ್ಪದೇ ಬಿಡಬಹುದು ಎಂದರು ಗಾಂಧೀಜಿ. ಆದರೆ ನನ್ನನ್ನು ಸಂತೋಷಪಡಿಸಲು ಮಾತ್ರ ಈ ಬದಲಾವಣೆಯನ್ನು ಒಪ್ಪಿಕೊಳ್ಳಬೇಡಿ. ನಿಮ್ಮ ಮನಬಂದಂತೆ ಮತ ಕೊಡಿ. ನಿಮ್ಮ ಮನಸ್ಸಿಗೆ ಎಷ್ಟೇ ದೊಡ್ಡವರು ಎಂದು ತೋಚಿದರೂ, ಅವರು ಎಷ್ಟೇ ಸೇವೆ ಮಾಡಿದ್ದರೂ, ಒಬ್ಬ ಮನುಷ್ಯನ ಅಭಿಪ್ರಾಯಕ್ಕೆ ಬೆಲೆ ಕಡಿಮೆ. ಶ್ರೀ ಚಿತ್ತರಂಜನದಾಸರು ನನಗೆ ಬರೆದಿದ್ದಾರೆ. ಸ್ವರಾಜ್ಯ ಪಕ್ಷದವರು ಒಪ್ಪಂದದ ಬಗ್ಗೆ ಯಾವ ವಿರೋಧವನ್ನೂ ತೋರಿಸುತ್ತಿಲ್ಲ. ವಿಠ್ಠಲಭಾಯಿ ಪಟೇಲರ ಅಭಿಪ್ರಾಯ ಅವರ ಸ್ವಂತದ್ದು. ಸ್ವರಾಜ್ಯ ಪಕ್ಷದ ಬಹುಮತದ ತೀರ್ಮಾನದಂತೆ ಎಲ್ಲರೂ ನಡೆಯಲೇಬೇಕು, ನಡೆಯುತ್ತಾರೆ. ಈ ಮಾತನ್ನು ಕೇಳಿದಾಗ ತಮಗೆಷ್ಟೋ ಸಮಾಧಾನ ಆಯಿತೆಂದರು ಗಾಂಧೀಜಿ. ಆದರೆ ಒಪ್ಪಂದ, ಒಪ್ಪಿಗೆ ಆಗದಿದ್ದವರನ್ನು ಹೀಗೆ ಬಂಧಿಸುವುದು ಬೇಡ ಎಂದು ದಾಸರನ್ನು ಕೇಳಿಕೊಳ್ಳುತ್ತೇನೆ.

ಮುಂದುವರಿಯುವುದು...



ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು

– ಇಂದಿರಾ ಕೃಷ್ಣಪ್ಪ,

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಭೀಮಮ್ಮ್ಯಾಮಾ ಸೈದು ಅಲಿ ಸಾಹೇಬನವರ

ಪತಿ ಸೈದುಸಾ ಅಮೀನಾಸಾ ಅವರೊಡಗೂಡಿ ಗಾಂಧಿ ಅವರ ಕರೆಗೆ ಓಗೊಟ್ಟು, ದಂಪತಿಗಳು 1941ರಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ನಾಲ್ಕು ತಿಂಗಳು ಜೈಲುವಾಸ ಅನುಭವಿಸಿದರು. ಪುನಃ 1942–43ರಲ್ಲಿ ಚಲೇಜಾವ್ ಚಳುವಳಿಯಲ್ಲಿ ಪಾಲ್ಗೊಂಡು, ಕಠಿಣ ಶಿಕ್ಷೆಗೆ ಒಳಪಟ್ಟು ಜೈಲು ಸೇರಿದರು. ಬಿಡುಗಡೆಯ ನಂತರ ಪೋಲೀಸರ ನಿಗಾವಣೆಯಿಂದ ತಪ್ಪಿಸಿಕೊಳ್ಳಲು ಭೂಗತರಾದರು. ಮತ್ತು ಹೀಗೆ ಭೂಗತರಾದವರಿಗೆ ನೆರವು ನೀಡುತ್ತಿದ್ದ ಹಳ್ಳಿಯ ಹೆಣ್ಣು ಮಕ್ಕಳು ಮತ್ತು ಅಲಿ ಸಾಹೇಬನವರ ಇವರನ್ನು ಸೇರಿಸಿ ಜೈಲಿಗೆ ಹಾಕಲಾಯಿತು. ಬಿಡುಗಡೆಯ ನಂತರವೂ ಭಾರತಕ್ಕೆ ಸ್ವಾತಂತ್ರ ದೊರಕುವವರೆಗೂ ಅವಿಶ್ರಾಂತವಾಗಿ ಶ್ರಮಿಸಿದವರಾಗಿದ್ದಾರೆ.

ಸಿದ್ಧಮ್ಮ ಮೈಲಾರ

ಮೈಲಾರ ಮಹಾದೇವಪ್ಪ ಅವರಂತೆ, ಅಚಲ ದೇಶಭಕ್ತಿಯಿಂದ ಸಿದ್ಧಮ್ಮ ಅವರು ಕರ ನಿರಾಕರಣೆ ಚಳುವಳಿ 1942ರ ಚಲೇಜಾವ್ ಚಳುವಳಿಯಲ್ಲಿ ಭಾಗವಹಿಸಿದ್ದರು. ಬಾಪುವಿನ ಸಬರಮತಿ ಆಶ್ರಮದಲ್ಲಿ ಸೇವಾ ದೀಕ್ಷೆಯನ್ನು ಪಡೆದವರಾಗಿದ್ದಾರೆ. ಪತಿಯೊಂದಿಗೆ 1937ರಲ್ಲಿ ಆರಂಭಿಸಿದ ಹೊಸರಿತ್ತಿಯ ಕೊರಡೂರು ಆಶ್ರಮ, ಗಾಂಧಿ ಅವರ ವಿಧಾಯಕ ಕಾರ್ಯಗಳ ತಾಣವಾಯಿತು.

ಬಳ್ಳಾರಿ ಸಿದ್ದಮ್ಮ

ಬಳ್ಳಾರಿಯ ಸಿದ್ದಮ್ಮ ಅವರು, ಪತಿ ಮುರಿಗೆಪ್ಪನವರೊಡಗೂಡಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಿದ್ದರು. ಬಾಪೂಜಿ ಅವರ ವಾರ್ಧಾ ಆಶ್ರಮದಲ್ಲಿ ತರಬೇತಿ ಪಡೆದ ದಂಪತಿಗಳು, ಸುಮಾರು 50 ವರ್ಷಗಳ ಕಾಲ ರಚನಾತ್ಮಕ ಕಾರ್ಯದಲ್ಲಿ ನಿರತರಾಗಿದ್ದರು. ಮೈಸೂರು ಅರಸರಿಗೆ, ಭಾರತದಲ್ಲಿ ನಡೆಯುತ್ತಿರುವ ವಿಮೋಚನಾ ಹೋರಾಟವನ್ನು ಸವಿವರವಾಗಿ ವಿವರಿಸಿ, ಮೈಸೂರು ಸಹ ವಿಮೋಚನಾ ಹೋರಾಟದಲ್ಲೂ ಪಾಲ್ಗೊಳ್ಳಬೇಕೆಂಬ ವಿವರಣೆಯನ್ನು ನೀಡಿದ್ದರು. ಕರನಿರಾಕರಣೆ ಚಳುವಳಿ, ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ, ಮೂರು ಬಾರಿ ದೀರ್ಘಾವಧಿ ಸೆರೆವಾಸ ಅನುಭವಿಸಿದವರಾಗಿದ್ದಾರೆ.

ಚನ್ನ ಬಸಮ್ಮ

ರಾಣಿ ಬೆನ್ನೂರು ತಾಲ್ಲೂಕಿನ ರತ್ನಕಟ್ಟಿ ಚೆನ್ನವೀರಪ್ಪ ಅವರ ಸಹೋದರ ಚನ್ನಪ್ಪ ಮತ್ತು ಅವರ ಹೆಂಡತಿ ಚನ್ನಬಸಮ್ಮ ಅವರು ಬಳ್ಳಾರಿ ಜಿಲ್ಲೆಯ ಹರಪ್ಪನ ಹಳ್ಳಿಯ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು. 1930ರ ಸವಿನಯ ಕಾನೂನು ಭಂಗ ಚಳುವಳಿಯಲ್ಲಿ ದಂಪತಿಗಳು ಭಾಗವಹಿಸಿ ಒಂದೂವರೆ ವರ್ಷ ಜೈಲುಶಿಕ್ಷೆ ಅನುಭವಿಸಿದ್ದರು. ವೈಯಕ್ತಿಕವಾಗಿಯೂ, ಚೆನ್ನಬಸಮ್ಮ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರಾಗಿದ್ದರು.

ಮುಂದುವರಿಯುವುದು...

ಗಾಂಧೀಜಿ ಅವರ ವೈಜ್ಞಾನಿಕ ಚಿಂತನೆಗಳು

– ಡಾ. ಸುಮಂಗಲಾ ಎಸ್. ಮುಮ್ಮಿಗಟ್ಟಿ

ಗಾಂಧೀಜಿ ಅವರ ವೈಜ್ಞಾನಿಕ ಚಿಂತನೆಗಳು ಎಂದಾಕ್ಷಣ ಕಣ್ಣ ಮುಂದೆ ಬರುವ ಚಿತ್ರಣ, ಅವರು ಕಾಲುಗಳನ್ನು ಮಡಿಸಿ ನೆಲದ ಮೇಲೆ ಕುಳಿತು ದೂರದರ್ಶಕದಲ್ಲಿ ನೋಡುತ್ತಿರುವುದು. ಸಾಮಾನ್ಯವಾಗಿ ಗಾಂಧೀಜಿಯವರನ್ನು ಒಬ್ಬ ಸತ್ಯಾಗ್ರಹಿಯಾಗಿ, ಸಮಾಜ ಸುಧಾರಕರಾಗಿ, ತತ್ವಜ್ಞಾನಿಯಾಗಿ, ಅಹಿಂಸವಾದಿಯಾಗಿ, ಲಿಂಗಸಮಾನತೆಯ ಪ್ರತಿಪಾದಕರಾಗಿ, ಶ್ರೇಷ್ಠ ಸಂಘಟಕರಾಗಿ, ಹೀಗೆ ಹತ್ತು ಹಲವು ಬಹುಮುಖ ವ್ಯಕ್ತಿತ್ವ ಉಳ್ಳವರಾಗಿದ್ದರೆಂಬುದನ್ನು ನಾವೆಲ್ಲ ಬಲ್ಲೆವು. ಆದರೆ, ಅವರ ವೈಜ್ಞಾನಿಕ ಚಿಂತನೆಗಳ ಪರಿಚಯ ಬಹಳಷ್ಟು ಜನರಿಗೆ ಇಲ್ಲ. ಅವುಗಳನ್ನು ಚರ್ಚಿಸುವುದು ಈ ಲೇಖನದ ಉದ್ದೇಶ. ಕಾಲ ಬದಲಾದಂತೆ ಗಾಂಧೀಜಿ ಅವರ ಚಿಂತನೆಗಳು, ವಿಚಾರಗಳು ತಮ್ಮ ಪ್ರಸ್ತುತತೆಯನ್ನು ಕಳೆದುಕೊಳ್ಳುತ್ತಿವೆ ಎನ್ನುವ ಒಂದು ವಾದವಿದೆ. ಆದರೆ ಅದು ಹಾಗಿರದೇ ಹೇಗೆ ಸರ್ವಕಾಲಕ್ಕೂ ಗಾಂಧೀಜಿ ಅವರ ಚಿಂತನೆಗಳು ಪ್ರಸ್ತುತವೆನಿಸುತ್ತವೆ ಎನ್ನುವುದನ್ನೂ ಸಹ ನಾವಿಲ್ಲಿ ತಿಳಿಯುತ್ತೇವೆ. ಮೊದಲು ಈ ವೈಜ್ಞಾನಿಕ ಪದವನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸೋಣ. ವಿಜ್ಞಾನವನ್ನು ಒಳಗೊಂಡಿದ್ದು ವೈಜ್ಞಾನಿಕ , ವಿಜ್ಞಾನ ಎಂದರೇನು? ನಮ್ಮ ಸುತ್ತಲಿನ ಪರಿಸರದ ಜೈವಿಕ ಮತ್ತು ಭೌತಿಕ ಘಟಕಗಳ ಅಧ್ಯಯನ. ಅದು ಪ್ರಾಯೋಗಿಕ ವಿಜ್ಞಾನವೇ ಆಗಿರಬಹುದು, ಇಲ್ಲವೇ ಸೈದ್ಧಾಂತಿಕ ವಿಜ್ಞಾನವಾಗಿರಬಹುದು. ಉದಾಹರಣೆಗೆ ಸಭೆಯಲ್ಲಿ ನಾನೊಂದು ಮೈಕ್‌ನ ಮುಂದೆ ನಿಂತು ಮಾತಾಡುತ್ತಿದ್ದೇನೆ ಎಂದು ಕೊಳ್ಳಿ, ನಾನು ಮೈಕ್‌ನ ಮುಖಾಂತರ ಮಾತನಾಡುವುದು ವರ್ಧಿತವಾಗಿ ಸಭೆಯಲ್ಲಿ ಇರುವವರಿಗೆ ಕೇಳಿಸುತ್ತದೆ. ಇದನ್ನು ಅರ್ಥ ಮಾಡಿಕೊಂಡು ಅದರ ಕಾರ್ಯ ವಿಧಾನವನ್ನು ತಿಳಿದುಕೊಳ್ಳುವುದು, ಅಂದರೆ ಕಣ್ಣಿಗೆ ಕಾಣುವುದಷ್ಟೇ ಅಲ್ಲದೇ, ಅದರ ಸತ್ಯವನ್ನು ಅರಿಯುವುದು ವಿಜ್ಞಾನ. ನಾವೆಲ್ಲ ಮಹಾತ್ಮಾ ಗಾಂಧಿಯವರ ಆತ್ಮ ಕಥೆ "ನನ್ನ ಸತ್ಯಾನ್ವೇಷಣೆ" ಯನ್ನು ನೋಡಿದ್ದೇವೆ. ತನ್ನದೇ ಜೀವನದಲ್ಲಿ ಸತ್ಯಾನ್ವೇಷಣೆಯನ್ನು ಮಾಡಿಕೊಳ್ಳುವ ವ್ಯಕ್ತಿ, ಪ್ರಯೋಗಗಳನ್ನು ನಡೆಸಿ ಅದನ್ನು ಒಪ್ಪಿಕೊಂಡು ಬರೆದಿರುವುದನ್ನು ನೋಡಿದರೆ, ನಮಗೆ ಇದಕ್ಕಿಂತ ಹೆಚ್ಚಿನ ಸಾಕ್ಷ್ಯ ಗಾಂಧೀಜಿ ಅವರ ವೈಜ್ಞಾನಿಕ ಮನೋಭಾವದ ಬಗೆಗೆ ಬೇಕಿಲ್ಲ.

ಮುಂದುವರಿಯುವುದು...

ಗಾಂಧೀಜಿಯ ಕೊನೆಯ ಉಪವಾಸಗಳು

(ಲೂಯಿ ಫಿಶರ್ ಮಹಾತ್ಮ ಗಾಂಧಿ, ಜಗತ್ತಿಗೆ ಅವರ ಸಂದೇಶ ಕೃತಿಯಿಂದ ಆಯ್ದ ಭಾಗಗಳು)

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಪಟ್ಟಣದ ಅನೇಕ ಪ್ರದೇಶಗಳಲ್ಲಿ ಮುಸ್ಲಿಮರು ಓಡಾಡುವುದೇ ಅಪಾಯಕರವಾಗಿತ್ತು. ಗಲಭೆಗಳು ಪುನಃ ಪ್ರಾರಂಭವಾಗಬಹುದೆಂದು ಗಾಂಧಿ ಹೆದರಿ, ಉಪವಾಸ ಆರಂಭಿಸಲು ನಿಶ್ಚಯಿಸಿದರು. "ಮಿಂಚಿನಂತೆ ನನಗೆ ಹಾಗೆ ಹೊಳೆಯಿತು" ಎಂದು ಹೇಳಿ, ನೆಹರು, ಪಟೇಲ್, ವೈದ್ಯರು ಯಾರನ್ನೂ ಕೇಳದೆ ಉಪವಾಸ ಮಾಡುವುದಾಗಿ ಪ್ರಕಟಿಸಿದನು. ಇದೇ ಆತನ ಕಡೆಯ ಉಪವಾಸ; ಸೌಜನ್ಯದ ಅಳಿಸಲಾಗದ ಕುರುಹನ್ನು ಅದು ಇಂಡಿಯಾದ ಮೇಲೆ ಅಚ್ಚೊತ್ತಿತ್ತು.

ಬಲಿದಾನ ಮಾಡಲು ಸಿದ್ಧವಾಗಿರುವವರಿಗೇ ವಿಜಯ : 1948ರ ಜನವರಿ 13ನೆಯ ತಾರೀಖು ಮಹಾತ್ಮ ಗಾಂಧಿ ತನ್ನ ಕಡೆಯ ಉಪವಾಸವನ್ನು ಪ್ರಾರಂಭಿಸಿದನು. ಎಲ್ಲರ ಅಂತರಾತ್ಮಗಳನ್ನು, ಇಂಡಿಯಾದ ಎರಡು ಭಾಗಗಳಲ್ಲಿದ್ದ ಎಲ್ಲಾ ಹಿಂದೂ ಮುಸ್ಲಿಮರನ್ನು ಕುರಿತ ಅಮರಣಾಂತ ಉಪವಾಸವದು. ಎಲ್ಲರೂ ಮಾರ್ನುಡಿದರೆ ಸಂತೋಷ, ಒಂದು ಪಂಗಡದ ಸಿಕ್ಕರಾಗಿರಬಹುದು, ಮೇಲೆ ಪರಿಣಾಮವಾದರೆ ಅದೊಂದು ಪವಾಡವೆಂದು ತಿಳಿದು ಅವರೊಂದಿಗೆ ಜೀವಿಸಲು ಸಿದ್ಧರಾಗಿದ್ದನು. ತಾನು ಸಾಯಬೇಕೆಂದು ಆತನು ತಿಳಿದಿದ್ದನು. "ಇಂಡಿಯಾ, ಹಿಂದೂ, ಸಿಖ್, ಇಸ್ಲಾಂ ಮತಗಳ ನಾಶವನ್ನು ಅಸಹಾಯಕನಾಗಿ ನೋಡುತ್ತಿರುವುದಕ್ಕಿಂತ ಸಾವೇ ನನಗೆ ಮುಕ್ತಿ". ಸ್ನೇಹಿತರು ಪೇಚಾಡಬೇಕಾಗಿಲ್ಲ. ನಾನು ದೇವರ ರಕ್ಷಣೆಯಲ್ಲಿ ಇದ್ದೇನೆ.

ಮೊದಲ ದಿನ ಬಿರ್ಲಾ ಭವನದ ಹಿಂದೆ ಪ್ರಾರ್ಥನಾ ಸಭೆಗೆ ಎಂದಿನಂತೆ ನಡೆದು ಹೋದನು. "ಮುಸ್ಲಿಮರಿಗಾಗಿ ಉಪವಾಸ ಮಾಡುತ್ತೇನೆಂದು ಕೆಲವರು ಆಕ್ಷೇಪಿಸಿದರು. ಅದು ನಿಜ, ನನ್ನ ಜೀವಮಾನವೆಲ್ಲಾ ನಾನು ಎಲ್ಲರೂ ಇರಬೇಕಾದಂತೆ, ಅಲ್ಪಸಂಖ್ಯಾತರ, ಕಷ್ಟದಲ್ಲಿರುವವರ ಸಹಾಯಕ್ಕಾಗಿ ನಿಂತಿದ್ದೇನೆ. ಎಲ್ಲರ ಹೃದಯವೂ ಪರಿಶುದ್ಧವಾಗುವುದೆಂದು ನಂಬಿದ್ದೇನೆ. ಪಾಕಿಸ್ತಾನದ ಮುಸ್ಲೀಮರೇನು ಮಾಡುವರೆಂಬುದು ಮುಖ್ಯವಲ್ಲ. ಹಿಂದುಗಳು, ಸಿಖ್ಖರು, ಠಾಕೂರರ ಪ್ರಸಿದ್ಧ ಗೀತೆಯನ್ನು ನೆನಪಿನಲ್ಲಿಡಬೇಕು. "ಯಾರೊಬ್ಬರೂ ನಿನ್ನ ಕರೆಗೆ ಕಿವಿಗೊಡದಿದ್ದರೆ ಒಬ್ಬನೇ ನಡೆ, ಒಬ್ಬನೇ ನಡೆ" ಎಂಬ ಗೀತೆಯ ಸಾಲು ಅದಾಗಿತ್ತು.

ಎರಡನೆಯ ದಿನ ಪ್ರಾರ್ಥನೆಗೆ ಹೋಗಕೂಡದೆಂದು ವೈದ್ಯರು ಹೇಳಿದರು. ಆದುದರಿಂದ ಸಭೆಗೆ ಓದಿ ಹೇಳಲು ಒಂದು ಸಂದೇಶವನ್ನು ಬರೆಸಿದನು. ಆದರೆ ಆ ಹೊತ್ತಿಗೆ ತಡೆಯಲಾರದೆ ಎದ್ದು ಹೋದನು. "ಉಪವಾಸ ನನ್ನ ಮತ್ತು ಎಲ್ಲರ ಶುದ್ಧೀಕರಣಕ್ಕಾಗಿ, ಇಂಡಿಯಾದ ಎರಡು ಭಾಗಗಳಲ್ಲೂ ಆತ್ಮಶುದ್ಧಿಯ ಅಲೆಯೊಂದು ಹಾದು ಹೋದರೆ!", ಎಂದು ಆಸೆಯಿಂದ ನುಡಿದನು.

ಮುಂದುವರಿಯುವುದು..

ಸಂಗ್ರಹ : ನಳಿನಾ ಡಿ – ಪತ್ರಕರ್ತೆ, ಕವಯಿತ್ರಿ

ಸರ್ವಾಧಿಕಾರಿಗಳಿಗೆ ತಕ್ಕ ಶಾಸ್ತಿ

– ಡಾ. ಎಚ್.ಎಸ್. ದೊರೆಸ್ವಾಮಿ



ಜಯಪ್ರಕಾಶ ನಾರಾಯಣರಿಗೆ ಇದ್ದ ಕಾಯಿಲೆಯೇ ಒಂದು, ಅವರಿಗೆ ನೀಡಿದ್ದ ಚಿಕಿತ್ಸೆಯು ಬೇರೊಂದು. ಹೀಗಾಗಿ ಜೆಪಿಯವರ ಆರೋಗ್ಯ ಬಿಗಡಾಯಿಸಿತು. ಜೈಲಿನಲ್ಲಿಯೇ ಕೊನೆ ಉಸಿರೆಳೆಯಬಹುದು ಎಂಬ ಆತಂಕ ಇಂದಿರಾಗಾಂಧಿಯವರನ್ನು ಕಾಡಿತು. ಜನರ ಆಕ್ರೋಶದಿಂದ ಪಾರಾಗಲು ಇಂದಿರಾ ಒಂದು ಸಂಚು ಹೂಡಿದರು. ಜೆಪಿ ಅವರಿಗೆ ಸರ್ಕಾರದ ಸಕಲ ಮರ್ಯಾದೆಗಳೊಂದಿಗೆ ಶವಸಂಸ್ಕಾರ ನಡೆಸಲು ತಯಾರಿ ನಡೆಸಿದರು. 200 ಮಂದಿ ಪೊಲೀಸರು ಖಾದಿಬಟ್ಟೆ ಧರಿಸಿ, ತಲೆಗೊಂದು ಗಾಂಧಿಟೋಪಿ ಹಾಕಿಕೊಂಡು ಶವದ ಮೆರವಣಿಗೆಯಲ್ಲಿ ಮುಂಚೂಣಿಯಲ್ಲಿರಬೇಕು. ಈ ಮೂಲಕ ಜನರಲ್ಲಿ ಕಾಂಗ್ರೆಸ್ಸಿಗರೇ ಶವಯಾತ್ರೆಯನ್ನು ನಡೆಸಿಕೊಡುತ್ತಿದ್ದಾರೆಂಬ ಭಾವನೆ ಮೂಡಿಸುವುದು ಅವರ ಹುನ್ನಾರವಾಗಿತ್ತು. ಆದರೆ ಇಂದಿರಾ ನಿರೀಕ್ಷಿಸಿದಂತೆ ಜೆಪಿಯವರ ಸಾವು ಆಗ ಆಗಲಿಲ್ಲ. ಮುಂದಿನ ದಿನಗಳಲ್ಲಿ ಜಯಪ್ರಕಾಶರ ಆರೋಗ್ಯ ಮತ್ತಷ್ಟು ಹದಗೆಟ್ಟಿದ್ದರಿಂದ ಜೆಪಿಯವರನ್ನು ಬಂಧನದಿಂದ ಮುಕ್ತಗೊಳಿಸಲಾಯಿತು. ಆದರೆ ಸೆರೆಮನೆಯಲ್ಲಿ ಇದ್ದ ಇತರ ಹೋರಾಟಗಾರರಿಗೆ ಇಂದಿರಾಗಾಂಧಿ ತಮ್ಮನ್ನು ಅನಿರ್ದಿಷ್ಟಕಾಲ ಸೆರೆಮನೆಯಲ್ಲಿ ಕೊಳೆಸುವರೆಂಬ ಸಂದೇಹ ಮೂಡಿತು. ಪ್ರೊ. ದಂಡವತೆಯವರು ನನಗೆ ಬರೆದ ಕಾರ್ಡಿನಲ್ಲಿ **'we will find our watery grave here in jail'** ಎಂದು ಬರೆದಿದ್ದರು. ಹೀಗಿದ್ದಾಗ ಇಂದಿರಾಗಾಂಧಿಯವರಿಗೆ ಪಾರ್ಲಿಮೆಂಟ್ ಚುನಾವಣೆ ನಡೆಸುವ ವಿಚಾರ ಇದ್ದಕ್ಕಿದ್ದಂತೆ ಹೊಳೆಯಿತು. ವಿರೋಧಿ ನಾಯಕರು ಸೆರೆಮನೆಯಲ್ಲಿರುವುದರಿಂದ ಅವರಿಗೆ ಚುನಾವಣೆ ಸಿದ್ಧತೆ ಮಾಡಿಕೊಳ್ಳಲು ಸಾಕಷ್ಟು ಸಮಯ ಇರುವುದಿಲ್ಲ. ಆದ್ದರಿಂದ ನನ್ನ ಗೆಲುವು ಶತಸ್ಸಿದ್ಧ ಎಂಬುದು ಅವರ ಲೆಕ್ಕಾಚಾರವಾಗಿತ್ತು. ಆದರೆ ದೇಶದ ಮತದಾರರಿಗೆ ಇಂದಿರಾಗಾಂಧಿ ಅವರ ದಬ್ಬಾಳಿಕೆ ಜಿಗುಪ್ಸೆ ಉಂಟುಮಾಡಿತ್ತು. ಮತದಾನ ಮಾಡುವಾಗ ಮತದಾರರೆಲ್ಲ ತಮ್ಮ ಸೇಡು ತೀರಿಸಿಕೊಂಡರು. ಮತದಾರರೆಲ್ಲ ಇಂದಿರಾಗಾಂಧಿಯ ವಿರೋಧವಾಗಿ ಮತ ಚಲಾಯಿಸಿ ಇಂದಿರಾ ಕಾಂಗ್ರೆಸ್ಸನ್ನು ಪರಾಭವಗೊಳಿಸಿದರು. ಸರ್ವಾಧಿಕಾರಿ ನೀತಿ ಅನುಸರಿಸುವವರನ್ನು ಮತದಾರರು ಹೇಳಹೆಸರಿಲ್ಲದಂತೆ ಪರಾಭವಗೊಳಿಸಬಲ್ಲರು ಎಂಬುದಕ್ಕೆ ಜ್ವಲಂತ ಉದಾಹರಣೆ ಇದು.

ಮುಂದುವರಿಯುವುದು...

ನವ ಭಾರತ ನಿರ್ಮಾಪಕರು : ಲೋಕ ಮಾನ್ಯರು : ಶತದಿನ ಸಂಸ್ಮರಣೆ

– ಇಂದಿರಾ ಕೃಷ್ಣಪ್ಪ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಲಕ್ಷಾಂತರ ಜನರು ಹೋರಾಡಿದ್ದಾರೆ. ತಮ್ಮ ಸ್ವಂತ ಹಿತಾಸಕ್ತಿಗಳನ್ನು ಬದಿಗಿಟ್ಟು ದೇಶವನ್ನು ವಿದೇಶಿಯರಿಂದ ಮುಕ್ತಗೊಳಿಸಲು ಜೀವನವನ್ನೇ ಪಣಕ್ಕಿಟ್ಟು ಶ್ರಮಿಸಿದ್ದಾರೆ. ಅಂತಹ ತ್ಯಾಗ, ನಿಸ್ವಾರ್ಥ ದೇಶಪ್ರೇಮಿಗಳ ಜೀವನವನ್ನು ಪರಿಚಯಿಸಲು ಈ ಅಂಕಣ.

ಕರ್ನಾಟಕದಲ್ಲಿ ತಿಲಕರ ಪ್ರಭಾವ : ಹುಕ್ಕೇರಿ ತಾಲ್ಲೂಕಿನ ಪಾಚಾಪುರ ಗ್ರಾಮದ ಬಾಳಾಜಿಯ ಯಾಮಾಜೀ ದೇಶಪಾಂಡೆ ಅವರು, ನೆನಪಿನ ಸುರುಳಿಯನ್ನು ಬಿಚ್ಚುತ್ತಾ ಸಾಗಿದರು. 'ವಂದೇಮಾತರಂ ಮತ್ತು ಟಿಳಕರ ಪೈಸಾ ಫಂಡ್' ನನ್ನ ಬಾಲ್ಯದ ಮನದಲ್ಲಿ ಅಚ್ಚೊತ್ತಿದಂತೆ ನಿಂತಿದೆ. ಅದೇರೀತಿ ನಮ್ಮ ಮನೆ ಮುಂದಿನ ಕಟ್ಟೆಯ ಮೇಲೆ ನಾಲ್ಕಾರು ಜನ ವಿದ್ಯಾರ್ಥಿಗಳು ಸೇರಿ, ಶಿವಾಜಿ, ಟಿಳಕರ ಫೋಟೋಗಳನ್ನಿಟ್ಟು ಪೂಜೆ ಮಾಡಿ, ಶಿವಾಜಿ ಮಹಾರಾಜ ಕೀ ಜೈ, ಟಿಳಕ್ ಮಹಾರಾಜ ಕೀ ಜೈ ಜಯಕಾರ ಹಾಕಿದ್ದು, ನನ್ನ ಕಣ್ಣ ಮುಂದೆಯೇ ಇವೆ. ಅದೇ ರೀತಿ ಯಾರದೋ ಮನೆಯಲ್ಲಿ ಊಟಕ್ಕೆ ಕುಳಿತಾಗ "ನಾನು ಹೋಳಿಗೆ ಬಿಟ್ಟಿದ್ದೇನೆ, ನಾನು ಸಕ್ಕರೆ ಬಿಟ್ಟಿದ್ದೇನೆ", "ಟಿಳಕರಿಗೆ ಶಿಕ್ಷೆಯಾಗಿದೆ" ಎಂದು ಸ್ವಾಭಾವಿಕವಾಗಿ ಘೋಷಣೆ ಕೂಗಿದಾಗ, ಅಲ್ಲಿದ್ದ ಎಲ್ಲರ ದೃಷ್ಟಿ ಕೂಗಿದವರ ಕಡೆ ಹರಿಯಿತು. ತಿಲಕರು ಜೈಲಿನಲ್ಲಿ ರೊಟ್ಟಿ ತಿನ್ನುವಾಗ ನಾವು ಹೋಳಿಗೆ ತಿನ್ನಬಾರದೆಂಬ ದೇಶಾಭಿಮಾನವನ್ನು ಬಡಿದೆಬ್ಬಿಸುವ ಧ್ವನಿಯಾಗಿತ್ತು ಅದು. ನಂತರದಲ್ಲಿ ಯಾಮಾಜೀ ದೇಶಪಾಂಡೆ ಅವರು ಬೆಳಗಾವಿಯಲ್ಲಿ, ಕುರಂದವಾಡ ಸಂಸ್ಥಾನದಲ್ಲಿ ಕಾರಕೂನ ಕೆಲಸದಿಂದಾಗಿ ಅಲ್ಲಿಗೆ ಹೋಗಿ ನೆಲಸಿದ್ದರು. ಆ ಸಂದರ್ಭದಲ್ಲಿ ಲೋಕಮಾನ್ಯರು ಮುಂಬೈನಲ್ಲಿ ನಿಧನರಾದ ಸುದ್ದಿ ಬೆಳಗಾವಿಗೂ ತಲುಪಿತ್ತು. ಮಾರುತಿ ದೇವಾಲಯದಲ್ಲಿ ತಿಲಕರು ನಿಧನರಾದ 13ನೇ ದಿನಕ್ಕೆ ಹಿರಿಯರೆಲ್ಲರೂ ಸೇರಿ ಶ್ರದ್ಧಾಂಜಲಿ ಸಭೆ ಆಯೋಜಿಸಿದ್ದರು. ನಾನು ಅಲ್ಲಿಗೆ ಹೋಗಿದ್ದೆ. ಹಿರಿಯರು ಸಂತಾಪ ಭಾಷಣ ಮಾಡಿದ್ದರು. ಅವರಲ್ಲಿ ವಕೀಲರಾದ ದತ್ತೋಪಂಥ ಮಜಲಿ ಅವರ ಭಾಷಣ ಪರಿಣಾಮಕಾರಿಯಾಗಿತ್ತು.



ಇದರಿಂದ ನನ್ನಲ್ಲಿ ದೇಶಕ್ಕಾಗಿ ನಾನೇನಾದರೂ ಕೆಲಸ ಮಾಡಬೇಕೆಂಬ ಇಚ್ಛೆ ತುಂಬಿಕೊಳ್ಳುತ್ತಿತ್ತು. ಜೋಶಿ ನಾರಾಯಣರಾಯರು, ಬೆಳಗಾವಿ ಜಿಲ್ಲೆಯ ಪ್ರಖ್ಯಾತರಾದ ವಕೀಲರು, ಮುಖಂಡರೂ ಆಗಿದ್ದರು. 1906ರಲ್ಲಿಯೇ ಮುಂಬೈನಲ್ಲಿ ಕಾಲೇಜು ಶಿಕ್ಷಣ ಮತ್ತು ಎಲ್.ಎಲ್.ಬಿ. ಪದವಿ ಪಡೆದು ಅಥಣಿಯಲ್ಲಿ ವಕೀಲಿಕೆ ಆರಂಭಿಸಿದ್ದರು. ನಂತರ ಬೆಳಗಾವಿಗೆ ಹಿಂತಿರುಗಿ ವೃತ್ತಿ ಮುಂದುವರಿಸಿದ್ದರು. ಅವರು ಮುಂಬೈನಲ್ಲಿ ಶಿಕ್ಷಣ ಪಡೆಯುತ್ತಿದ್ದಾಗಲೇ ಟಿಳಕರ ಪ್ರಭಾವಕ್ಕೆ ಒಳಗಾಗಿದ್ದರು. ಅಥಣಿ ಬೆಳಗಾವಿಗಳಲ್ಲಿ ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಿದರು. ಬೈಲಹೊಂಗಲದ ವಾಮನರಾವ್ ಕಾಮತರು ಟಿಳಕರ ದೇಶಭಕ್ತಿಯ ಕರೆಗೆ ಮನಸೋತಿದ್ದರು. ಆದ್ದರಿಂದ ಬೈಲಹೊಂಗಲದಲ್ಲಿ ಟಿಳಕರ ಭಾಷಣಕ್ಕೆ ಅವಕಾಶ ಕೊಡಬಾರದೆಂದು ಬ್ರಿಟಿಷ್ ಸರ್ಕಾರ ಆದೇಶ ಹೊರಡಿಸಿತ್ತು.

ಮುಂದುವರಿಯುವುದು...

ಅಕ್ಷರದವ್ವ : ಸಾವಿತ್ರಿ ಬಾಫುಲೆ

ಜಗತ್ತಿನಾದ್ಯಂತ 18 ಮತ್ತು 19ನೇ ಶತಮಾನ, ರಾಷ್ಟ್ರೀಯತೆ, ಆಧುನಿಕತೆ, ಸಮಾನತೆ, ಸ್ವಾತಂತ್ರ್ಯ ಮತ್ತು ವೈಚಾರಿಕತೆಯ ಚಿಗುರು ಟಿಸಿಲೊಡೆದು ಬೃಹತ್ ಮರವಾಗಿ ಬೆಳೆದ ಕಾಲ. ಅಂಥಹ ಕಾಲಘಟ್ಟದಲ್ಲಿ ಹೊಂಬೆಳಕಾಗಿ ಮೂಡಿಬಂದವರೇ 'ಸಾವಿತ್ರಿ ಬಾ' ಅವರಾಗಿದ್ದಾರೆ. ಹೆಣ್ಣು ಮಕ್ಕಳ ಆಶಾಕಿರಣ, ಮಹಿಳೆಯರ ಮಹಾಮಾತೆ, ದಲಿತರು ಮತ್ತು ತಳ ಸಮುದಾಯದ ಚೈತನ್ಯದ ಉಸಿರಾಗಿ ಅಜೀವಪರ್ಯಂತ ದುಡಿದುಡಿದು ಸಮಾನತೆಯ ತೇರನೆಳೆದವರು, ಸಾವಿತ್ರಿ ಫುಲೆ. ಮಹಾರಾಷ್ಟ್ರದ ಸತಾರ ಜಿಲ್ಲೆಯ ನೈಗಾಂವ್‌ನಲ್ಲಿ 1831ರ ಜನವರಿ 3ರಂದು ಜನಿಸಿದ ಸಾವಿತ್ರಿಗೆ ಓದುಬರಹದಲ್ಲಿ ಇನ್ನಿಲ್ಲದ್ದ ಆಸಕ್ತಿ. ಆದರೇನು? ಅಂದಿನ ಸಂಪ್ರದಾಯದಂತೆ ಆಕೆಯ ಒಂಭತ್ತನೇ ವರ್ಷದಲ್ಲಿ, ಬಾಲಕ ಜ್ಯೋತಿ ಬಾಫುಲೆ 13ವರ್ಷದವನೊಂದಿಗೆ ವಿವಾಹ ಮಾಡಿದರು. ಜ್ಯೋತಿಬಾ ಅಕ್ಷರ ದಾಹದವರಾಗಿದ್ದನು. ಪೇಶ್ವೆಗಳ ಅರಮನೆಗೆ 'ಹೂ ಮಾರಾಟ' ವೃತ್ತಿಯನ್ನಾಗಿಸಿಕೊಂಡ ಮನೆತನಕ್ಕೆ 'ಫುಲೆ' ಎಂಬ ವಿಶೇಷಣ ಸೇರಿಕೊಂಡು ಜ್ಯೋತಿ ಬಾ ಫುಲೆ ಎಂಬ ಹೆಸರೇ ರೂಢಿಯಾಯಿತು. ತಂದೆ ತಾಯಿಯ ಇಚ್ಛೆಯಂತೆ, ಶಾಲೆಗೆ ಹೋಗುತ್ತಿದ್ದ ಜ್ಯೋತಿಬಾ, ಓದುವುದರಲ್ಲಿ ತೋರಿಸಿದ ಆಸಕ್ತಿ. ಬಡತನದ ನಡುವೆಯೂ ತಂದೆ ಗೋವಿಂದರಾವ್ ಓದನ್ನು ಮುಂದುವರಿಸಲು ಪ್ರೇರಣೆಯಾಗಿ ನಿಂತರು. ಆದರೆ ಒಂದೆರಡು ವರ್ಷಗಳಲ್ಲಿ ತಾಯಿ ಶೀಮಾಳ ಅಕಾಲಿಕ ನಿಧನದಿಂದ ಕೌಟುಂಬಿಕ ತೊಂದರೆ ದ್ವಿಗುಣವಾಯಿತು. ಅನಿವಾರ್ಯವಾಗಿ ಫುಲೆ ತಂದೆಯೊಂದಿಗೆ ತೋಟದ ಕೆಲಸಕ್ಕೆ ಹೋಗಲೇ ಬೇಕಾಯಿತು. ಕೆಲಸದ ಬಿಡುವಿನಲ್ಲಿ ಪುಸ್ತಕ ಓದುವುದೇ ಹವ್ಯಾಸವಾಗಿದ್ದನ್ನು ಕಂಡ ಗಫಾರ್‌ಬೇಗ್ ಮತ್ತು ಲಿಗೇಡ್ ಮಾಸ್ತರರುಗಳು ಗೋವಿಂದರಾವ್ ಅವರಿಗೆ ಕೆಲಸದಿಂದ ಮಗನನ್ನು ಬಿಡಿಸಿ, ಶಾಲೆಗೆ ಕಳುಹಿಸಲು ತಿಳಿಸಿದರು. ಅದರಂತೆ, 1841ರಲ್ಲಿ ಆರಂಭವಾಗಿದ್ದ ಸರ್ಕಾರಿ ಶಾಲೆಗೆ ಪುನಃ ಸೇರ್ಪಡೆಯಾಗಿ ನಿರಂತರ ಕಲಿಕಾ ವಿದ್ಯಾರ್ಥಿಯಾದರು. ಅದಾಗಲೇ ವಿವಾಹವಾದ ಫುಲೆ ಅವರಿಗೆ ಜೀವನ ಸಂಗಾತಿ, ಸಾವಿತ್ರಿ ನಿರಕ್ಷರಿಯಾಗಿ ಉಳಿಯಬಾರದೆಂದು ಅವಳಿಗೆ ಓದಿಸಲಾರಂಭಿಸಿದರು. ಜಾಣೆ ಸಾವಿತ್ರಿ ಒಂದೇ ವರ್ಷದಲ್ಲಿ ಮರಾಠಿ, ಇಂಗ್ಲೀಷ್, ಪಾರ್ಸಿ, ಸಂಸ್ಕೃತ ಕಲಿತಳು. ಸ್ಕಾಟಿಷ್ ಮಿಷನ್ ಇಂಗ್ಲೀಷ್ ಶಾಲೆಯಲ್ಲಿ ಓದಿ ಉತ್ತೀರ್ಣಳಾದಳು.



ಮುಂದುವರಿಯುವುದು...

ಎಸ್.ಎಂ. ಶ್ಯಾಮಲ, ಅಧ್ಯಾಪಕರು (ನಿ)

ಕನ್ನಡ ನೆಲ-ಜಲ-ಶಿಕ್ಷಣವನ್ನು ಸಮೃದ್ಧಿಗೊಳಿಸಿದ ಅಧಿಕೃತ ಗೊಳಿಸಿದ ಸರ್ಕಾರ ನೇಮಕಮಾಡಿದ ಸಮಿತಿಗಳ ವರದಿಗಳು

ಸಂಗ್ರಹ : ರುದ್ರಪ್ಪ ಹನಗವಾಡಿ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಕನ್ನಡ ನಾಡನ್ನು ಕಟ್ಟುವಲ್ಲಿ, ವಿವಿಧ ಚಳುವಳಿಗಳು ಬಹು ಮುಖ್ಯ ಪಾತ್ರವಹಿಸಿದಂತೆ ಸರ್ಕಾರ ನೇಮಿಸಿದ ಸಮಿತಿಗಳ ವರದಿಗಳು ಪ್ರಮುಖವಾಗಿವೆ. 1967ರ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರ ವರದಿಯ ಉಲ್ಲೇಖವಿದೆ. ಆದರೆ ವರದಿ ಲಭ್ಯವಿಲ್ಲ. ಹಲವು ವರದಿಗಳು ಗಾತ್ರದಲ್ಲಿ ದೊಡ್ಡದಾಗಿವೆ. ಕೆಲವು ಆಂಗ್ಲ ಭಾಷೆಯಲ್ಲಿವೆ. ಲಭ್ಯವಿರುವುದನ್ನು ಇಲ್ಲಿ ಸಂಗ್ರಹಿಸಲಾಗಿದೆ.



ಕನ್ನಡ ತಂತ್ರಾಂಶ ವರದಿ – ಡಾ. ಕೆ. ಚಿದಾನಂದ ಗೌಡ ವರದಿ

ಈ ಸಮಿತಿಯ ನೇತೃತ್ವವನ್ನು ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ. ಕೆ. ಚಿದಾನಂದ ಗೌಡರು ವಹಿಸಿದ್ದರು. ಚಂದ್ರಶೇಖರ ಕಂಬಾರ, ಗಣಕ ತಜ್ಞ ಅನಂತ ಕೊಪ್ಪರಂ, ಕನ್ನಡ ಗಣಕ ಪರಿಷತ್‌ನ ಕಾರ್ಯದರ್ಶಿ ಜಿ.ಎನ್. ನರಸಿಂಹಮೂರ್ತಿ, ಪರ್ತಕರ್ತ ಎನ್.ಎ.ಎಂ. ಇಸ್ಮಾಯಿಲ್, ಡಾ. ಯು.ಬಿ. ಪವನಜ ಮೊದಲಾದವರು ಈ ಸಮಿತಿಯ ಸದಸ್ಯರಾಗಿದ್ದರು. ಆಸ್ಕಿ ಆಧಾರಿತ ಕನ್ನಡ ತಂತ್ರಾಂಶ, ಫಾಂಟ್ ಪರಿವರ್ತಕಗಳು, ಯುನಿಕೋಡ್ ಆಧಾರಿತ ಕನ್ನಡ ತಂತ್ರಾಂಶ, ಅಕ್ಷರ ಸಂಸ್ಕರಣೆ ಇಂಜಿನ್, ಓಪನ್ ಟೈಪ್ ಫಾಂಟ್, ಡಿಟಿಪಿಗೆ ಅಗತ್ಯವಿರುವ ತಂತ್ರಾಂಶಗಳು, ವಾಣಿಜ್ಯಕ ಅನ್ವಯಿಕ ತಂತ್ರಾಂಶಗಳು ಹೀಗೆ ಹಲವು ವಿಷಯಗಳಿಗೆ ಸಂಬಂಧಿಸಿದಂತೆ ಈ ಸಮಿತಿಯ ವರದಿಯಲ್ಲಿ ಶಿಫಾರಸುಗಳನ್ನು ಮಾಡಿದೆ.



ಕಸ್ತೂರಿ ರಂಗನ್ ವರದಿ

'ವಿಶ್ವದ ಜೀವ ವೈವಿಧ್ಯಗಳ ಕಣಜ', ನಿತ್ಯ ಹರಿದ್ವರ್ಣ ಕಾನನದ ತವರು ಎಂದೆಲ್ಲ ಗುರುತಿಸುವ ಪಶ್ಚಿಮ ಘಟ್ಟ ನಾಶವಾಗುತ್ತಿದೆ ಎನ್ನುವ ಆತಂಕದ ಮಾತುಗಳು ಎಲ್ಲೆಡೆ ಕೇಳಿ ಬರುತ್ತಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿದ ಕೇಂದ್ರ ಸರಕಾರ 2009ರಲ್ಲಿ ಖ್ಯಾತ ವಿಜ್ಞಾನಿ ಮಾಧವ ಗಾಡ್ಗೀಳ್ ನೇತೃತ್ವದಲ್ಲಿ ಪಶ್ಚಿಮ ಘಟ್ಟಗಳ ಪರಿಸರ ತಜ್ಞರ ಸಮಿತಿ ರಚಿಸಿತು. ಗಾಡ್ಗೀಳ್ ವರದಿ ಬಂದ ನಂತರ ಸಮಾಜದ ವಿವಿಧ ಸ್ತರದ ಜನ ಭಿನ್ನ ಅಭಿಪ್ರಾಯಗಳನ್ನು ಸೂಚಿಸಿದರು. ಆಗ ಖ್ಯಾತ ಬಾಹ್ಯಾಕಾಶ ವಿಜ್ಞಾನಿ ಡಾ. ಕಸ್ತೂರಿ ರಂಗನ್ ನೇತೃತ್ವದಲ್ಲಿ 17.08.2012ರಲ್ಲಿ ಪಶ್ಚಿಮ ಘಟ್ಟ ಉನ್ನತ ಮಟ್ಟದ ಕಾರ್ಯತಂಡವನ್ನು ಕೇಂದ್ರ ಸರಕಾರವು ರಚಿಸಿತು. ಹಲವು ವಿಜ್ಞಾನಿಗಳು, ಪರಿಸರ ತಜ್ಞರು ಚಿಂತಕರು ಈ ಸಮಿತಿಯಲ್ಲಿದ್ದರು.

ಮುಂದುವರಿಯುವುದು...

ದೂರಗಾಮಿ ಓಟದ ವೀರ ಕನ್ನಡತಿ

– ಡಾ. ವಿ. ಪ್ರಶಾಂತ್, ಸಂಗ್ರಹ : ಗಾಂಧಿ ಭವನ

ಅಶ್ವಿನಿ ಭಟ್ : ಅಪರೂಪದ ಸಾಧಕಿ



ದೂರಗಾಮಿ ಓಟದ ಸ್ಪರ್ಧೆಗಳಲ್ಲಿ ಕರ್ನಾಟಕದ ಅಥ್ಲೀಟ್, ಗೃಹಿಣಿ ಅಶ್ವಿನಿ ಭಟ್ ಮಹತ್ವದ ಸಾಧನೆ ಮಾಡಿದ್ದಾರೆ. ಶಿವಮೊಗ್ಗ ಜಿಲ್ಲೆಯ ಸಾಗರದಲ್ಲಿ ಜನಿಸಿ, ಸದ್ಯ ಬೆಂಗಳೂರಿನಲ್ಲಿ ನೆಲೆಸಿರುವ ಅಶ್ವಿನಿ ಜನವರಿ 23ರಂದು ವಿದ್ಯಾನಗರ ಕ್ರೀಡಾಂಗಣದಲ್ಲಿ ಭಾರತ ಅಥ್ಲೆಟಿಕ್ ಸಂಸ್ಥೆ ಆಯೋಜಿಸಿದ್ದ ರಾಷ್ಟ್ರೀಯ ಅಲ್ಟ್ರಾ ಸ್ಟೇಡಿಯಂ ರನ್ ಸ್ಪರ್ಧೆಯಲ್ಲಿ 24 ಗಂಟೆ ಟ್ರ್ಯಾಕ್ ನಲ್ಲಿ 181 ಕಿ.ಮಿ. ಓಡಿದ ಸಾಧನೆ ಮಾಡಿದ್ದಾರೆ. ಇದರಿಂದಾಗಿ ಅಶ್ವಿನಿ, 2021ರ ಅಕ್ಟೋಬರ್‌ನಲ್ಲಿ ರುಮೇನಿಯಾದ ತಿಮಿಸೋರಾದಲ್ಲಿ ನಡೆಯಲಿರುವ ಐಎಯು ವಿಶ್ವ 24ತಾಸು ಅಲ್ಟ್ರಾ ಓಟದ ಚಾಂಪಿಯನ್‌ಶಿಪ್‌ಗೆ ಅರ್ಹತೆ ಪಡೆದಿದ್ದಾರೆ. ಮೊದಲ ಬಾರಿಗೆ ಅಂತರರಾಷ್ಟ್ರೀಯ 24 ಗಂಟೆ ಅಲ್ಟ್ರಾರನ್ ಚಾಂಪಿಯನ್‌ಶಿಪ್‌ನಲ್ಲಿ 48 ರಾಷ್ಟ್ರಗಳ ಸ್ಪರ್ಧಿಗಳು ಭಾಗವಹಿಸಲಿದ್ದಾರೆ. ಭಾರತದಿಂದ 6 ಪುರುಷ ಹಾಗೂ 6 ಮಹಿಳಾ ಸ್ಪರ್ಧಿಗಳು ಭಾಗವಹಿಸುತ್ತಿದ್ದಾರೆ. ಇದರಲ್ಲಿ ಅಶ್ವಿನಿ ಕೂಡ ಒಬ್ಬರಾಗಿದ್ದಾರೆ. ಅಂತರರಾಷ್ಟ್ರೀಯ ಕೂಟಕ್ಕೆ ಆಯ್ಕೆಯಾದವರ ಪೈಕಿ ಕರ್ನಾಟಕದ ಏಕೈಕ ಓಟಗಾರ್ತಿ ಎನ್ನುವ ಹಿರಿಮೆಗೆ ಅಶ್ವಿನಿ ಪಾತ್ರರಾಗಿದ್ದಾರೆ. ರಾಷ್ಟ್ರೀಯ ಸ್ಪರ್ಧೆಯಲ್ಲಿ ಭಾಗವಹಿಸುವ ಮುನ್ನ ಅಶ್ವಿನಿ ವಾರದಲ್ಲಿ 3 ದಿನ ಫಿಟ್ನೆಸ್ ಟೆಸ್ಟ್ ಉಳಿದ 4 ದಿನ ಓಟದ ಅಭ್ಯಾಸವನ್ನು ನಡೆಸುತ್ತಾರೆ. ಪ್ರತಿ ದಿನ 10 ಗಂಟೆಗಳ ಕಾಲ ಓಡುವ ಅಭ್ಯಾಸ ನಡೆಸುತ್ತಾರೆ. ಈ ಇಂಜಿನಿಯರಿಂಗ್ ಪದವೀಧರೆ ಉದ್ಯೋಗ ತೊರೆದು, ಪೂರ್ಣಾವಧಿ ಓಟಗಾರ್ತಿ ಆಗಿದ್ದಾರೆ. ಇದುವರೆವಿಗೂ ಕುದುರೆಮುಖ ಅರಣ್ಯದ ಮಲ್ನಾಡ್ ಅಲ್ಟ್ರಾರನ್ , ಕೇರಳದ 90 ಕಿ.ಮೀ. ರನ್, ಲಡಾಕ್‌ನ ಕರದುಂಗ್ಲಾ ರನ್ ಸೇರಿದಂತೆ ಅನೇಕ ರಾಷ್ಟ್ರೀಯ ಸ್ಪರ್ಧೆಯಲ್ಲಿ ಭಾಗವಹಿಸಿದ ಖ್ಯಾತಿಯ ಅಶ್ವಿನಿ ಕರ್ನಾಟಕದ ಹೆಮ್ಮೆಯ ಪುತ್ರಿ.



ವರ್ತಮಾನದ ತಲ್ಲಣಗಳಿಗೆ ಬಾಪುವಿನಲ್ಲಿ ಉತ್ತರ

– ಪ್ರಸನ್ನಕುಮಾರ್ ಕೆರಗೋಡು



ಪುಸ್ತಕಗಳಲ್ಲಿ ಆತ್ಮ ಸಾಂಗತ್ಯ ಕಂಡುಕೊಂಡಿದ್ದ ಬಾಪು...

ವ್ಯಕ್ತಿಯ ಜೀವನದಲ್ಲಿ ಪುಸ್ತಕಗಳು ಅದೆಷ್ಟು ಪರಿಣಾಮ ಬೀರುತ್ತವೆ ಎಂಬುದಕ್ಕೆ ಬಾಪುವಿನ ಜೀವನದಲ್ಲಿನ ಈ ಘಟನೆಯನ್ನು ಉದಾಹರಿಸಬಹುದು. ಬಾಪು ದಕ್ಷಿಣ ಆಫ್ರಿಕಾದಲ್ಲಿ ಇದ್ದ ಕಾಲದಲ್ಲಿ ನಡೆದ ಘಟನೆ ಇದು. ಅವರು ನಡೆಸುತ್ತಿದ್ದ 'ಇಂಡಿಯನ್ ಒಪಿನೀಯನ್' ಪತ್ರಿಕೆ ಅನೇಕ ಕಾರಣಗಳಿಂದಾಗಿ ಆರ್ಥಿಕ ಸಂಕಷ್ಟಕ್ಕೆ ಸಿಕ್ಕಿದ್ದಾಗ ಅದರ ಉಸ್ತುವಾರಿ ವಹಿಸಿದ್ದ ಮಿ.ವೆಸ್ಟ್ ಎನ್ನುವವರ ಕೋರಿಕೆಯ ಮೇರೆಗೆ ಬಾಪು ನೆಟಾಲ್‌ಗೆ ಪ್ರಯಾಣಿಸಲು ಅನುವಾಗುತ್ತಾರೆ. ಜೋಹಾನ್ಸ್ ಬರ್ಗ್ ನಿಂದ ಡರ್ಬಾನ್‌ಗೆ ತೆರಳಲು ರೈಲು ಹತ್ತುವಾಗ ರೈಲು ನಿಲ್ದಾಣದಲ್ಲಿ ಭೇಟಿಯಾಗಲು ಬಂದ ಅವರ ಯುವ ಗೆಳೆಯ ಮಿ.ಪೊಲಾಕ್ ಬಾಪುವಿನ ಕೈಯಲ್ಲಿ "ಪ್ರಯಾಣ ಸಾಗಲಿ" ಎಂದು ಜಾನ್ ರಸ್ಕಿನ್ನರ "ಅನ್ ಟು ದಿಸ್ ಲಾಸ್ಟ್" ಪುಸ್ತಕವನ್ನು ಇಡುತ್ತಾರೆ. ಪ್ರಬಂಧಗಳ ಸಂಕಲನವಾದ ಈ ಪುಸ್ತಕ ಅವರನ್ನು ಅದೆಷ್ಟು ಸೆಳೆಯಿತೆಂದರೆ ಮುಂದಿನ ಇಪ್ಪತನಾಲ್ಕು ತಾಸುಗಳ ಪ್ರಯಾಣದಲ್ಲಿ "ಒಮ್ಮೆಯೂ ಕೆಳಗಿಡದೆ ಓದಿದೆ" ಎಂದು ಬಾಪು ಹೇಳುತ್ತಾರೆ. ಪುಸ್ತಕದಲ್ಲಿನ ಎಲ್ಲಾ ಅಂಶಗಳನ್ನು ಬಾಪು ಕೆಳಗಿನ ಮೂರು ಸತ್ಯಗಳಲ್ಲಿ ಗ್ರಹಿಸಿದರು.

1. ಓರ್ವ ವ್ಯಕ್ತಿಯ ಒಳಿತು ಎಲ್ಲರ ಒಳಿತಿನಲ್ಲಿದೆ. 2. ವಕೀಲರ ಕೆಲಸವು ಕ್ಷೌರಿಕನಷ್ಟೇ ಮೌಲ್ಯವನ್ನು ಹೊಂದಿದೆ ಮತ್ತು ಎಲ್ಲರೂ ತಮ್ಮ ಕೆಲಸದಿಂದ ಜೀವನೋಪಾಯವನ್ನು ಗಳಿಸುವ ಹಕ್ಕನ್ನು ಹೊಂದಿರುತ್ತಾರೆ. 3. ಕಾರ್ಮಿಕರ ಜೀವನ, ಅಂದರೆ, ಮಣ್ಣಿನ ಉಳುಮೆ ಮತ್ತು ಕರಕುಶಲ ಕೆಲಸಗಾರನ ಜೀವನವು ಯೋಗ್ಯವಾದ ಜೀವನವಾಗಿದೆ. ಎಂಬ ಪರಮ ಸತ್ಯದರ್ಶನ ಬಾಪುವಿಗೆ ಈ ಪುಸ್ತಕದಿಂದಾಗುತ್ತದೆ. ಈ ತತ್ವಗಳಡಿ ತನ್ನ ಮುಂದಿನ ಜೀವನವನ್ನು ರೂಪಿಸಿಕೊಳ್ಳಲು ನಿರ್ಧರಿಸುವುದಲ್ಲದೆ 'ಅನ್ ಟು ದಿಸ್ ಲಾಸ್ಟ್' ಪುಸ್ತಕವನ್ನು 'ಸರ್ವೋದಯ' ಎಬ ಹೆಸರಿನಲ್ಲಿ ಗುಜರಾತಿ ಭಾಷೆಗೆ ಭಾಷಾಂತರ ಮಾಡಿ ಭಾರತೀಯರಿಗೂ ಅದರ ಸತ್ವವನ್ನು ಉಣ ಬಡಿಸುತ್ತಾರೆ. ಸತ್ಯಾಗ್ರಹದ ವೇದಿಕೆಯಲ್ಲಿರಲಿ, ವಿದೇಶ ಪ್ರಯಾಣದಲ್ಲಿರಲಿ, ಜೈಲಿನಲ್ಲಿರಲಿ, ಆಶ್ರಮದಲ್ಲೆ ತಂಗಿರಲಿ, ಬಾಪುವಿಗೆ ಅಂಟಿದ ನಂಟು ಪುಸ್ತಕಗಳ ಓದು. ಇದು ಬಾಪು ಅವರ ದಿನಚರಿಯ ಭಾಗವಾಗಿತ್ತು. ರೂಢಿಸಿಕೊಂಡಿದ್ದ ಈ ಓದಿನ ಹವ್ಯಾಸ ಭೌತಿಕವಾಗಿ ಅವರು ಪಡೆದುಕೊಳ್ಳುತ್ತಿದ್ದ ಅಪಾರ ಅನುಭವಗಳಿಗೆ ತಾತ್ವಿಕ ಸ್ಪರ್ಶ ನೀಡುತ್ತಿತ್ತು ಎಂಬುದನ್ನು ಗಮನಿಸಬಹುದು.

ಪುಸ್ತಕಗಳು ನಿಜಕ್ಕೂ ಮನುಷ್ಯನ ಮನಸ್ಸಿನ ಮೇಲೆ ಮಾಂತ್ರಿಕ ಪ್ರಭಾವ ಬೀರುತ್ತವೆ ಎಂಬುದಕ್ಕೆ ಈ ಘಟನೆಯೆ ಸಾಕ್ಷಿಯಾಗಿ ನಿಂತಿದೆ. ಇಂತಹ ಅದೆಷ್ಟೋ ಉದಾಹರಣೆಗಳನ್ನು ನಾವು ಜಗತ್ತಿನಲ್ಲಿ ಆಗಿಹೋದ ಮಹಾನ್ ಚೇತನಗಳ ಬದುಕಿನಲ್ಲಿ ಕಾಣಬಹುದು. ಆದರೆ ಇದೆಲ್ಲದರ ನಡುವೆಯೂ ಮನುಷ್ಯ ಅದರಲ್ಲೂ ಯುವಜನರು ಇಂದು ಪುಸ್ತಕಗಳಿಂದ ದೂರ ಸರಿಯುತ್ತಿದ್ದಾರೆ, ಅವರ ಜೀವನದಲ್ಲಿ ಪುಸ್ತಕಗಳ ಜಾಗದಲ್ಲಿ ಏನೆಲ್ಲಾ ಬಂದು ದಾಂದಲೆ ಮಾಡುತ್ತಿವೆ ಎನ್ನುವ ಮಾತುಗಳು ಎದ್ದಿವೆ.

ಮುಂದುವರಿಯುವುದು...




ಭಾರತ ಸರ್ಕಾರವು 2021ರ ಗಣರಾಜ್ಯೋತ್ಸವದಲ್ಲಿ ಕರ್ನಾಟಕದ ಐವರು ವಿವಿಧ ಕ್ಷೇತ್ರಗಳಲ್ಲಿ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ಅವರಿಗೆ ಪದ್ಮ ಪ್ರಶಸ್ತಿಯನ್ನು ಪ್ರಧಾನ ಮಾಡಿರುತ್ತದೆ. ಅವರಿಗೆ ಅಭಿನಂದನೆಗಳು

1.	ಚಂದ್ರಶೇಖರ ಕಂಬಾರ	ಸಾಹಿತ್ಯ ಮತ್ತು ಶಿಕ್ಷಣ	ಪದ್ಮ ಭೂಷಣ್
1.	ಡಾ. ಬೆಳ್ಳಿ ಮೊನಪ್ಪ ಹೆಗ್ಡೆ	ವೈದ್ಯಕೀಯ	ಪದ್ಮವಿಭೂಷಣ್
3.	ರಂಗಸಾಮಿ ಲಕ್ಷ್ಮೀನಾರಾಯಣ ಕಶ್ಯಪ್	ಸಾಹಿತ್ಯ ಮತ್ತು ಶಿಕ್ಷಣ	ಪದ್ಮಶ್ರೀ
4.	ಮತಾ ಬಿ ಮಂಜಮ್ಮ ಜೋಗತಿ	ಶಿಕ್ಷಣ	ಪದ್ಮಶ್ರೀ
5.	ಕೆ.ವೈ.ವೆಂಕಟೇಶ್	ಕ್ರೀಡೆ	ಪದ್ಮಶ್ರೀ

ಸಂಗ್ರಹ : ಯೋಗೀಶ್, ಸಹಾಯಕ ಕಾರ್ಯದರ್ಶಿ, ಗಾಂಧಿ ಭವನ

ಗಾಂಧಿ ಮತ್ತು ದಲಿತರ ದೇವಸ್ಥಾನ ಪ್ರವೇಶ

– ವೇಮಗಲ್ ಸೋಮಶೇಖರ್.

ಗಾಂಧೀಜಿ ಅಸ್ಪೃಶ್ಯರ ಏಳ್ಗೆಗಾಗಿ 1933ರಲ್ಲಿ ಕರೆಕೊಟ್ಟಾಗ ಜಮನಾಲಾಲರು ತಕ್ಷಣ ಓಗೊಟ್ಟರು. ಆಗ ಮನೆ ಕೆಲಸಕ್ಕೆ ಹರಿಜನರನ್ನು ಯಾರೂ ನೇಮಿಸಿಕೊಳ್ಳುತ್ತಿರಲಿಲ್ಲ. ಜಮನಾಲಾಲರು ಅನೇಕ ಹರಿಜನರಿಗೆ ನೌಕರಿ ಕೊಡಿಸಿದರು. ಶಾಲೆಗಳಲ್ಲಿ ಪ್ರವೇಶ ದೊರಕಿಸಿಕೊಟ್ಟರು. ಬಜಾಜ್ ಅವರ ಅಜ್ಜ ವಾರ್ಧಾದಲ್ಲಿ ಲಕ್ಷ್ಮೀನಾರಾಯಣ ದೇವಾಲಯವನ್ನು ಕಟ್ಟಿಸಿದ್ದರು. ಆ ದೇವಾಲಯಕ್ಕೆ ಹರಿಜನರಿಗೆ ಪ್ರವೇಶ ದೊರಕಿಸಿಕೊಡಬೇಕೆಂಬ ಆಸೆ ಜಮನಾಲಾಲರಿಗೆ ಬಹಳ ದಿವಸದಿಂದ ಕಾಡುತ್ತಿತ್ತು ಆ ಕಾರ್ಯಕ್ಕಾಗಿ 1920ರಲ್ಲಿ ಗಾಂಧೀಜಿ ತಮ್ಮ ನೆಚ್ಚಿನ ಶಿಷ್ಯ ವಿನೋಬಾಭಾವೆಯನ್ನು ಅಲ್ಲಿಗೆ ಕಳುಹಿಸಿದರು. ಬಜಾಜರ ಬೆಂಬಲ ನಿಷ್ಠೆಗಳಿಂದ ವಿನೋಬಾ ಅಲ್ಲೊಂದು ಆಶ್ರಮ ನಡೆಸುತ್ತಿದ್ದರು. ಲಕ್ಷ್ಮೀನಾರಾಯಣ ದೇವಾಲಯಕ್ಕೆ ಹರಿಜನರ ಪ್ರವೇಶಕ್ಕೆ ಆತುರ ಪಡದೆ ಗಾಂಧೀಜಿ ಎಲ್ಲರನ್ನೂ ಒಲಿಸಿಕೊಂಡು ಮುಂದುವರಿಯಬೇಕೆಂದು ಸೂಚಿಸಿದರು. ಹೀಗೆ ದೇವಾಲಯಕ್ಕೆ ಸಂಬಂಧಿಸಿದ ಮುಖ್ಯಸ್ಥರನ್ನು ಒಲಿಸಿಕೊಳ್ಳುವ ಹೊತ್ತಿಗೆ ಎಂಟು ವರ್ಷ ಕಳೆಯಿತು. 1928ರ ಜುಲೈ 19ರಂದು ವಿನೋಬಾ ಅವರು ಹರಿಜನರೊಂದಿಗೆ ಲಕ್ಷ್ಮೀನಾರಾಯಣ ದೇವಾಲಯಕ್ಕೆ ಪ್ರವೇಶ ಕಾರ್ಯ ನೆರವೇರಿಸಿದರು. ಭಾರತದಲ್ಲಿ "ದಲಿತರಿಗೆ ದೇವಾಲಯ ಪ್ರವೇಶ"ದಂತಹ ಸಾಮಾಜಿಕ ಪರಿವರ್ತನೆಗೆ ವಾರ್ಧಾದ ಲಕ್ಷ್ಮೀನಾರಾಯಣ ದೇವಸ್ಥಾನ ಪ್ರಪ್ರಥಮವಾಗಿ ಮುನ್ನುಡಿ ಬರೆದ ಕೀರ್ತಿಗೆ ಭಾಜನವಾಗಿದೆ.

ಗಾಂಧೀಜಿ 1933ರ ಸೆಪ್ಟೆಂಬರ್ 23ರಂದು ನಾಗಪುರ ಸಮೀಪದ ವರ್ಧಾಕ್ಕೆ ತೆರಳಿದ್ದರು. ಮಹಾರಾಷ್ಟ್ರದ ಪೂರ್ವದ ತುದಿಯಲ್ಲಿದ್ದ ವಾರ್ಧಾ ಜಮನಾಲಾಲ್ ಬಜಾಜರ ಊರಾಗಿತ್ತು. ಅಹಮದಾಬಾದ್‌ಗಿಂತ ಅಲ್ಲಿ ಉಷ್ಣಾಂಶ ಹೆಚ್ಚು. ಹಾಗೂ ಭಾರತದ ಮಧ್ಯಭಾಗದಲ್ಲಿದ್ದು, ಕೇಂದ್ರಸ್ಥಾನದ ಲಕ್ಷಣ ಹೊಂದಿತ್ತು. ಗಾಂಧೀಜಿ ಅಲ್ಲಿಗೆ ಹೋಗಿ ಬಜಾಜರ ಆತಿಥ್ಯದಲ್ಲಿ ಒಂದೂವರೆ ತಿಂಗಳು ವಿರಮಿಸಿದರು. ಬಜಾಜರಿಗೆ ಅವರ ಅಜ್ಜ ಕಟ್ಟಿಸಿದ ಆ ದೇವಾಲಯದಿಂದಲೇ ಗಾಂಧೀಜಿ ಹರಿಜನ ಪ್ರವೇಶಕಾರ್ಯ ಪ್ರಾರಂಭಿಸಬೇಕೆಂಬ ಇಚ್ಛೆಇತ್ತು. ಅದರಂತೆ ಗಾಂಧಿ ಅವರು ಉಪವಾಸದ ಸಂದರ್ಭದಲ್ಲಿ ರಾಮಮಂದಿರ ಮತ್ತು ಲಕ್ಷ್ಮೀನಾರಾಯಣ ದೇವಾಲಯಕ್ಕೆ 1933ರ ನವೆಂಬರ್ 7ನೇ ಮಂಗಳವಾರದಂದು ಪ್ರವೇಶಿಸಿ, ಅಲ್ಲಿಂದ ದಲಿತರ ಸಬಲೀಕರಣದ ಯಾತ್ರೆ ಆರಂಭಿಸಿದರು. ಅವರೊಂದಿಗೆ ಸಹಾಯಕಿಯಾಗಿ ಮೀರಾ ಬೆನ್ ಹೊರಟಿದ್ದರು. ಜೊತೆಗೆ ವ್ಯವಸ್ಥಾಪಕರಾಗಿ ಜಮನಾಲಾಲ್ ಬಜಾಜ್ ಹಾಗೂ ಮುಂತಾದವರಿದ್ದರು. ಕಸ್ತೂರಬಾ ಅವರಿಗೆ ದೀರ್ಘ ಪ್ರವಾಸ ಶ್ರಮವೆಂದು ಅಹಮದಾಬಾದ್‌ಗೆ ಕಳುಹಿಸಲಾಯಿತು.

ಅಂದು ವಾರ್ಧಾದಿಂದ ಏಳು ಮೈಲಿ ದೂರದಲ್ಲಿ 'ಸೇಲು' ಗ್ರಾಮದ ರಾಮದೇವ್‌ಜೀ (ವರ್ತಕ) ತನ್ನ ಖಾಸಗಿ ದೇವಾಲಯವನ್ನು "ದಲಿತರ ಪ್ರವೇಶಕ್ಕೆ ತೆರೆಯಲಾಗಿದೆಯೆಂದು" ಘೋಷಿಸಬೇಕೆಂದು ಗಾಂಧಿ ಅವರಲ್ಲಿ ಪ್ರಾರ್ಥಿಸಿದನು. ಆತನ ಕೋರಿಕೆಯಂತೆ ದಲಿತರ ದೇವಾಲಯ ಪ್ರವೇಶದ ಪ್ರಾರಂಭೋತ್ಸವವನ್ನು ಗಾಂಧೀಜಿ ಅವರೇ ನೆರವೇರಿಸುತ್ತಾ "ಈ ಪವಿತ್ರ ಕಾರ್ಯದಿಂದ ನನ್ನ ಯಾತ್ರೆ ಆರಂಭವಾಗುವುದು ಶುಭಸೂಚನೆಯೆಂದು ನಾನು ಭಾವಿಸುತ್ತೇನೆ. ಮುಂದಿನ ಒಂಬತ್ತು ತಿಂಗಳ ಕಾಲ ನಿಯೋಜಿಸಿರುವ ಪೂರ್ಣ ಕಾರ್ಯಕ್ರಮವನ್ನು ನಡೆಸಲು ಶಕ್ತನಾದೇನೋ ಹೇಗೋ ನಾನಂತೂ ಅರಿಯೆ. ಅದು ನಡೆಯಲಿ ಬಿಡಲಿ, ಇಂಥ ಮಂಗಳಕರ ಕಾರ್ಯದಿಂದ ಆರಂಭವಾಗುವ ಯೋಜನೆಯಿಂದ ಒಳ್ಳೆಯದೇ ಆಗುತ್ತದೆಂದು ನನ್ನ ನಂಬಿಕೆ. ದೇವಾಲಯದಲ್ಲಿರುವ ವಿಗ್ರಹ ದೇವರಲ್ಲ ಆದರೆ ದೇವರು ಪ್ರತಿ ಅಣುರೇಣುವಿನಲ್ಲಿ ಇರುವುದರಿಂದ ಅವನು ವಿಗ್ರಹದಲ್ಲಿಯೂ ಇದ್ದಾನೆ. ಪವಿತ್ರ ಪ್ರತಿಷ್ಠಾಪನೆಯ ಕಾರ್ಯಗಳನ್ನು ಎಸಗಿದಮೇಲೆ ವಿಗ್ರಹಕ್ಕೆ ವಿಶಿಷ್ಟ ರೀತಿಯ ಪಾವಿತ್ರ್ಯವನ್ನು ಅಧ್ಯಾರೋಪಿಸಲಾಗುತ್ತದೆ. ದೇವಾಲಯಗಳಲ್ಲಿ ನಂಬಿಕೆ ಹೊಂದಿರುವವರು ಅಲ್ಲಿಗೆ ಹೋಗಿ ಅರ್ಚನೆ ಸಲ್ಲಿಸುವರು. ಯಾವುದೇ ದೇವಾಲಯದಲ್ಲಿ ನಂಬಿಕೆಯನ್ನು ಹೊಂದಿರುವ ಅವನ ಭಕ್ತರಲ್ಲಿ ಒಂದು ವರ್ಗಕ್ಕೆ ಅದರ ಪ್ರವೇಶವನ್ನು ನಿಷೇಧಿಸಿದರೆ, ಅಂಥ ದೇವಾಲಯದಲ್ಲಿ ಸೃಷ್ಟಿಕರ್ತ ಇರುವನು ಎಂಬುದು ದೈವದ್ರೋಹವೇ ಸರಿ. ಇಂದು ಹರಿಜನರ ಪ್ರವೇಶಕ್ಕೆ ತೆರೆಯಲಾಗಿದೆಯೆಂದು ಘೋಷಿಸಿದ ಹೊತ್ತಿನಿಂದಲೇ ಇದು ನಿಜವಾದ ದೇವಾಲಯ" ಎಂದು ನುಡಿದರು.

ಅಲ್ಲಿಯೇ ಸಾರ್ವಜನಿಕ ಸಭೆಯನ್ನುದ್ದೇಶಿಸಿ "ಇಂದು ನಾವು ಆಚರಿಸುತ್ತಿರುವ ಅಸ್ಪೃಶ್ಯತೆಗೆ ಹಿಂದೂ ಧರ್ಮದಲ್ಲಿ ಸ್ಥಾನವಿಲ್ಲವೆಂಬುದು ಐವತ್ತು ವರ್ಷಗಳ ನನ್ನ ದೃಢನಂಬಿಕೆ. ನಾನು ಜಗತ್ತಿನ ಎಲ್ಲ ಮತಧರ್ಮಗಳನ್ನೂ ನನ್ನ ಸಾಮರ್ಥ್ಯಕ್ಕೆ ಅನುಗುಣವಾಗಿ ಅಧ್ಯಯನ ಮಾಡಿದ್ದೇನೆ. ಅದೂ ನನ್ನನ್ನು ಇದೇ ತೀರ್ಮಾನಕ್ಕೆ ತಂದಿದೆ. ಈ ಅಸ್ಪೃಶ್ಯತೆಯ ಶಾಪವನ್ನು ತೊಡೆದುಹಾಕುವ ಪವಿತ್ರ ಉದ್ದೇಶಕ್ಕೆ ನನ್ನ ಪ್ರಾಣವನ್ನೇ ಬಲಿದಾನ ಮಾಡುವುದು ಮಹಾ ದೊಡ್ಡದಲ್ಲವೆಂದು ನಾನು ಭಾವಿಸುತ್ತೇನೆ. ಅಸ್ಪೃಶ್ಯತೆಯನ್ನು ಅಮೂಲಾಗ್ರವಾಗಿ ತೊಡೆದುಹಾಕದಿದ್ದರೆ ಹಿಂದೂ ಧರ್ಮವು ನಾಶವಾಗುತ್ತದೆಂಬುದರಲ್ಲಿ ನನಗೆ ಲವಲೇಶ ಅನುಮಾನವಿಲ್ಲ. ಏಕೆಂದರೆ ಯಾವ ಮತಧರ್ಮವೂ ಅದರ ಅನುಯಾಯಿಗಳ ಅವನತಿಯಿಂದ ಎಂದಿಗೂ ಪುಷ್ಟಿ ಪಡೆಯಲಾರದು" ಎಂದರು.

ಮುಂದುವರಿಯುವುದು...



ಗಾಂಧೀಜಿ ಅವರ 'ಹಿಂದ್ ಸ್ವರಾಜ್'ನ ಶತಮಾನೋತ್ತರ ಪ್ರಸ್ತುತತೆ

– ಡಾ.ಎಸ್.ಬಿ. ಬಸೆಟ್ಟಿ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

"ಈ ಭೂಮಿ ಪ್ರತಿಯೊಬ್ಬ ಮಾನವನ ಅಗತ್ಯಗಳನ್ನು ಪೂರೈಸುವಷ್ಟು ಸಂಪನ್ಮೂಲಗಳನ್ನು ಒದಗಿಸುತ್ತದೆ. ಆದರೆ ಆತನ ಆಸೆಗಳನ್ನು ಪೂರೈಸುವಷ್ಟಲ್ಲ"

- ಎಂ.ಕೆ. ಗಾಂಧೀ

ಸಮಕಾಲೀನ ಸಾಮಾಜಿಕ ಸಂದರ್ಭದಲ್ಲಿ ಗಾಂಧೀಜಿಯವರ ಈ ಚಿಂತನೆಯನ್ನು ಅಗತ್ಯವಾಗಿ ಅರ್ಥೈಸಬೇಕಾಗಿದೆ. ಇಂದು ನಮ್ಮ ಕಣ್ಣೆದುರಿಗೆ ಹಲವಾರು ಹಿಂಸಾತ್ಮಕ ಚಳುವಳಿಗಳು ನಡೆಯುತ್ತಿವೆ. ಇವು ರಕ್ತ ಕ್ರಾಂತಿಯಿಂದಲೇ ಬದಲಾವಣೆ ಸಾಧ್ಯ ಎಂದು ಬಿಂಬಿಸುವುದರ ಮೂಲಕ ಹಿಂಸೆಯನ್ನೇ ಪ್ರಚೋದಿಸುತ್ತಿವೆ. ನಕ್ಸಲೀಯ ಚಳುವಳಿ, ಕಾಶ್ಮೀರದಲ್ಲಿ ನಡೆಯುತ್ತಿರುವ ಭಯೋತ್ಪಾದನೆ ಮುಂತಾದ ಉದಾಹರಣೆಗಳು ನಮ್ಮ ಮುಂದಿವೆ. ಇಂದು ಕೆಲವೇ ಜನರ ಹಿತಾಸಕ್ತಿ ಸಾರ್ವಜನಿಕ ಹಿತಾಸಕ್ತಿ ಎಂದು ಬಿಂಬಿತವಾಗುತ್ತಿವೆ. ಪಟ್ಟಭದ್ರ ಹಿತಾಸಕ್ತಿಗಳು ಇಂದು ದೇಶದ ಸಂಪತ್ತನ್ನು ಲೂಟಿ ಮಾಡುತ್ತಿವೆ. ಉನ್ನತ ಹಂತದ ರಾಜಕಾರಣಿಗಳಿಂದ ಹಿಡಿದು ಕೆಳ ಮಟ್ಟದ ನೌಕರರವರೆಗೆ ಭ್ರಷ್ಟಾಚಾರ ತನ್ನಕೆನ್ನಾಲಿಗೆ ಚಾಚಿದೆ. ಪರಿಸ್ಥಿತಿ ಹೀಗಿರುವಾಗ ನಿಜವಾದ ಶೋಷಿತರ ಧ್ವನಿಗೆ ಬೆಲೆ ಎಲ್ಲಿದೆ? ಇದಕ್ಕೆ ಪರಿಹಾರವೇನು? ಈ ಪಟ್ಟಭದ್ರ ಗುಂಪುಗಳ ವಿರುದ್ಧ ಹೋರಾಡಲು ಶೋಷಿತನಿಗೆ ಇರುವ ದಾರಿ ಯಾವುದು? ಎಂಬ ಪ್ರಶ್ನೆಗಳಿಗೆ 'ಹಿಂದ್ ಸ್ವರಾಜ್'ನಿಂದ ಉತ್ತರ ಪಡೆಯಬಹುದು.

ಮಹಾತ್ಮಾ ಗಾಂಧೀಜಿ ಕಂಡ ಸ್ವತಂತ್ರ ಭವ್ಯ ಭಾರತದ ಕನಸಿನ ಕೂಸಾದ ಈ ಕೃತಿ ಜಾತಿ, ಜನಾಂಗ, ಧರ್ಮ, ಭಾಷೆ, ಉಡುಗೆ ತೊಡಿಗೆ, ಲಿಂಗಗಳ ಭೇದಭಾವ ತೊರೆದು ಎಲ್ಲರೂ ಸಮಾನರು ಎಂದು ಸಾರಿತು. ಈ ಕೃತಿಯಲ್ಲಿ ಅಡಕವಾಗಿರುವ ವಿಚಾರಧಾರೆಗಳನ್ನು ಇಂದೂ ನಾವು ಅಳವಡಿಸಿಕೊಂಡಲ್ಲಿ ಗಾಂಧೀಜಿ ಅವರ ಗ್ರಾಮ ಸ್ವರಾಜ್ಯದ ಕನಸು ನನಸಾಗಬಲ್ಲದು. ಆಧುನಿಕ ನಾಗರಿಕತೆ ಸೃಷ್ಟಿಸಿದ ಹಲವಾರು ಸಮಸ್ಯೆಗಳಿಗೆ ಸಮಾಧಾನ ಈ ಕೃತಿಯಲ್ಲಿ ಧಾರಾಳವಾಗಿ ಲಭ್ಯವಿದೆ. ಅಂತಿಮವಾಗಿ ಗಾಂಧೀಜಿ ಅವರೆ ಹೇಳಿದ ಹಾಗೆ ಹಿಂದ್ ಸ್ವರಾಜ್ ದ್ವೇಷಕ್ಕೆ ಬದಲು ಆತ್ಮತ್ಯಾಗವನ್ನು ಕಲಿಸುತ್ತದೆ. ಪಶುಬಲಕ್ಕೆ ಇದಿರಾಗಿ ಆತ್ಮಬಲವನ್ನು ನಿಲ್ಲಿಸುತ್ತದೆ. ಯಾಕೊ ಗಾಂಧೀಜಿ ಮತ್ತೆ ಮತ್ತೆ ನೆನಪಾಗುತ್ತಿದ್ದಾರೆ.

ಚರಿತ್ರೆಯಲ್ಲಿ ಮರೆಯಾದ ಮಹಾತ್ಮರ ಅಕ್ಷರ ಮಾಧ್ಯಮ ಕಾಯಕ

– ಯ.ರು. ಪಾಟೀಲ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಪತ್ರಿಕೆಗೆ ಸಂಬಂಧಿಸಿದಂತೆ ಮುದ್ರಣ ಯಂತ್ರಕ್ಕೆ ಅಚ್ಚಿನ ಮೊಳೆ ಜೋಡಿಸುವುದನ್ನು ಒಳಗೊಂಡಂತೆ ಸಂಪಾದಕೀಯ ಕೆಲಸದವರೆಗೂ ಗಾಂಧೀಜಿಯವರು ಪಳಗಿದ್ದರು. ಇನ್ನೂ ಆಶ್ಚರ್ಯದ ಸಂಗತಿಯೆಂದರೆ ಬಲಗೈಯಿಂದ ಬರೆಯುವುದು ದಣಿವಾದಾಗ ಎಡಗೈಯಿಂದ ಬರೆಯುತ್ತಿದ್ದರು. ಇನ್ನೂ ವಿಚಿತ್ರವೆಂದರೆ ಬಲ ಮತ್ತು ಎಡಗೈ ಬರಹಗಳನ್ನು ಪರಿಶೀಲಿಸಿದಾಗ, ಎಡಗೈ ಬರಹಗಳೇ ಸ್ಫುಟವಾಗಿ ಕಾಣುತ್ತಿತ್ತು. ಇದನ್ನು ನೋಡಿದಾಗ, ಪ್ರಾಯಶಃ ಇವರು ಮೂಲ ಬರಹ ಆರಂಭಿಸಿದ್ದೇ ಎಡಗೈಯಿಂದ ಎನಿಸುತ್ತದೆ. ಭಗವಂತನಿಗೆ ಎಂಟು ಹೂವುಗಳು ಇಷ್ಟವೆಂದು ತಿಳಿಯಲಾಗಿದೆ. ಅವು ಅಹಿಂಸೆ, ಇಂದ್ರಿಯ ನಿಗ್ರಹ, ಸರ್ವಭೂತ ದಯೆ, ಕ್ಷಮೆ, ಕ್ರಾಂತಿ, ತಪಸ್ಸು, ಧ್ಯಾನ ಹಾಗೂ ಸತ್ಯ ಪಾಲನೆ. ಇವುಗಳನ್ನು ಗಾಂಧೀಜಿ ಅವರು ಸಮಾಜಸೇವೆಗೆ ಬಳಸಿಕೊಂಡರು; ಇವುಗಳಲ್ಲಿ ಪತ್ರಿಕಾ ರಂಗವು ಒಂದು. ಗಾಂಧೀಜಿ ಅವರ ಸಹವರ್ತಿ ಮತ್ತು ಗುಜರಾತಿನ ಇಂಗ್ಲೀಷ್ ಪತ್ರಕರ್ತ, ಲೇಖಕ ಭಾರತೀಯ ವಿದ್ಯಾ ಭವನದ ಸ್ಥಾಪಕರಾದ ಕೆ.ಎಂ. ಮುನ್ಷಿ ಅವರು 'ಗಾಂಧೀಜಿ ಅವರ ಪತ್ರಿಕೋದ್ಯಮದ ಗದ್ಯ, ನೇರ, ಸ್ಪಷ್ಟ ಮತ್ತು ಸುಲಭ ಗ್ರಾಹ್ಯ. ಚುಟುಕು ಮತ್ತು ಅನಾವಶ್ಯಕ ವಿವರಗಳ ಪದಗಳೇ ಅಲ್ಲಿಲ್ಲ. ಶಬ್ದಗಳ ಬಳಕೆಯಲ್ಲಿ ಸಮತೋಲನ, ಜನಾಂಗದ ಹೃದಯ ತಟ್ಟುವುದೇ ಬರವಣಿಗೆಯ ಉದ್ದೇಶ. ಸಾಹಿತ್ಯದ ಸುತ್ತ ಬಳಸು ಇಲ್ಲ. ನೇರ ಸೃಷ್ಟಿ ಕಾರ್ಯ' ಎಂದಿರುವುದು ಸಂದರ್ಭೋಚಿತವಾಗಿದೆ. ಇಂಡಿಯನ್ ಒಪಿನಿಯನ್ ಹೊಣೆಗಾರಿಕೆಯನ್ನು ಗಾಂಧೀಜಿ ಅವರು ವಹಿಸಿಕೊಂಡಾಗ ಅವರಿಗೆ ಕೇವಲ 35 ವರ್ಷಗಳು ಮಾತ್ರ. ತಮ್ಮ ಪತ್ರಿಕಾ ಬರಹಗಳಿಂದ ದಕ್ಷಿಣ ಆಫ್ರಿಕಾದ ಭಾರತೀಯರನ್ನು ಜಾಗೃತಗೊಳಿಸಿದ್ದರು. ಈ ಇಂಗ್ಲೀಷ್ ಆವೃತ್ತಿಯ ಜೊತೆಗೆ ಗುಜರಾತಿ ಆವೃತ್ತಿಯನ್ನೂ ಆರಂಭಿಸಿದರು. ದೇಶದ ಸ್ವಾತಂತ್ರ್ಯಕ್ಕಾಗಿ ದುಡಿಯುವವರ ಕುರಿತು ಬರೆದು ಕೊಡಲು ಅನೇಕರಿಗೆ ಗಾಂಧೀಜಿ ಅವರು ವಿನಂತಿಸಿದರು. ಪತ್ರಿಕೆ ಬೆಳೆಯಿತು. ಹತ್ತು ವರ್ಷಗಳ ಕಾಲ ನಿರಂತರವಾಗಿ ಗಾಂಧೀಜಿ ಅವರು ಈ ಪತ್ರಿಕೆಯನ್ನು ಮುನ್ನಡೆಸಿದರು. 'ಪತ್ರಿಕೋದ್ಯಮವನ್ನು ಉದರ ಪೋಷಣೆಗೆ ನಡೆಸತಕ್ಕದ್ದಲ್ಲವೆನ್ನುವುದು ಮತ್ತು ಇದನ್ನು ಲಾಭದಾಯಕ ವೃತ್ತಿಯನ್ನಾಗಿ ಮಾಡಿಕೊಳ್ಳುವುದೆಂದರೆ ಅದು ವೇಶ್ಯಾವೃತ್ತಿ ನಡೆಸಿದಂತೆಯೆ ಸರಿ' ಎನ್ನುವುದು ಗಾಂಧೀಜಿ ಅವರ ಕಠೋರ ತೀರ್ಮಾನವಾಗಿತ್ತು. ಗಾಂಧೀಜಿ ಅವರ ರಾಜಕೀಯ ಗುರುಗಳಾದ ಗೋಪಾಲಕೃಷ್ಣ ಗೋಖಲೆ, ಇಂಗ್ಲೆಂಡ್‌ದಲ್ಲಿ ದಾದಾಭಾಯಿ ನವರೋಜಿ, ರಷ್ಯದಲ್ಲಿ ಲಿಯೋ ಟಾಲ್‌ಸ್ಟಾಯ್ ಅವರು ಇಂಡಿಯನ್ ಒಪಿನಿಯನ್ ಓದಿ ಮೆಚ್ಚುಗೆ ಹೇಳುತ್ತಿದ್ದರು.

ಮುಂದುವರಿಯುವುದು....

ಅಂಬೇಡ್ಕರ್ ಮತ್ತು ಸಂವಿಧಾನ

- ಇಂದಿರಾ ಕೃಷ್ಣಪ್ಪ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)



ಈ ನಿರ್ದೇಶಕ ತತ್ವಗಳನ್ನು ಅಳವಡಿಸುವಲ್ಲಿ "ಭಾರತದ ರಾಷ್ಟ್ರೀಯತೆ-ರಾಜಕೀಯ ಸ್ವಾತಂತ್ರ್ಯ-ಸಾಮಾಜಿಕ ವಿವೇಚನೆ ಮತ್ತು ಆರ್ಥಿಕ ವಿಕೇಂದ್ರಿಕರಣಗಳು ಆಡಳಿತದಲ್ಲಿ, ಯೋಜನೆಗಳಲ್ಲಿ ಕಾರ್ಯಕ್ರಮಗಳಲ್ಲಿ, ಸ್ಪಷ್ಟವಾಗಿ ಅಭಿವ್ಯಕ್ತವಾಗಬೇಕೆಂದು ಡಾ. ಅಂಬೇಡ್ಕರ್ ಅವರು ಆಶಿಸಿದ್ದರು. ಉತ್ಪಾದನಾ ಮೂಲಗಳಾದ ಕೃಷಿ ಮತ್ತು ಕೈಗಾರಿಕೆ, ಸರ್ಕಾರದ ಸ್ವಾಮ್ಯತೆ ಇರಬೇಕು. ಜಾಗತೀಕರಣದ ಈ ಸಂದರ್ಭದಲ್ಲಿ ನಿರುದ್ಯೋಗ-ಬಡತನ ಹೆಚ್ಚುತ್ತಿರುವ ಸ್ಥಿತಿಯಲ್ಲಿ ಅವರ ಮಾತುಗಳು ನೆನಪಿಗೆ ಬರುತ್ತವೆ. ಮೂಲಭೂತ ಹಕ್ಕುಗಳು ಮತ್ತು ನಿರ್ದೇಶಕ ತತ್ವಗಳು ಪ್ರಜೆಗಳ ಮತ್ತು ಸರ್ಕಾರದ ಜವಾಬ್ದಾರಿಯನ್ನು ನಿರ್ದೇಶಿಸುತ್ತವೆ. ಮೂಲಭೂತ ಹಕುಗಳು ವ್ಯಕ್ತಿಯ ಘನತೆಯ ಬದುಕನ್ನು ಪ್ರತಿಪಾದಿಸುತ್ತಾ, ಪ್ರಜೆಗಳು ಸಂಪೂರ್ಣವಾಗಿ ಅರಳುವ ವಾತಾವರಣವನ್ನು ನಿರ್ಮಿಸುತ್ತದೆ. ಆಗ ಮಾತ್ರ ಭಯ-ಶೋಷಣೆ-ಅಭದ್ರತೆಗಳಿಂದ ಮುಕ್ತವಾದ ಭಾರತೀಯ ಸಮಾಜ ನಿರ್ಮಾಣವಾಗಲು ಸಾಧ್ಯ. ರಾಜಕೀಯ ಸ್ವಾತಂತ್ರ್ಯದೊಂದಿಗೆ ಆರ್ಥಿಕ ಮತ್ತು ಸಾಮಾಜಿಕ ಸ್ವಾತಂತ್ರ ಎಂದರೆ, "ಹೃದಯ ಮತ್ತು ಆತ್ಮಗಳ ಮಿಲನ" ಎಂದರು ಡಾ. ಅಂಬೇಡ್ಕರ್ ಅವರು. ಪ್ರಜೆಗಳು ನಿರ್ವಹಿಸಲೇಬೇಕಾದ ಕರ್ತವ್ಯಗಳು ಹೀಗಿವೆ.

1. ಸಂವಿಧಾನದ ಪಾಲನೆ
2. ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗೆ ಗೌರವ
3. ಚುನಾವಣೆಯಲ್ಲಿ ಮತದಾನ
4. ದೇಶದ ರಕ್ಷಣೆಗೆ ಸದಾ ಸಿದ್ಧರಿರುವುದು
5. ಸಾರ್ವಜನಿಕ ಸ್ವತ್ತಿನ ರಕ್ಷಣೆ
6. ಎಲ್ಲ ಜನರೊಂದಿಗೆ ಸಹಬಾಳ್ವೆ-ಮಹಿಳೆಯರ ಗೌರವ
7. ಪರಿಸರ ಸಂರಕ್ಷಣೆ
8. ವೈಜ್ಞಾನಿಕ ಮಾನವೀಯ ಮನೋಭಾವ
9. ಸಾಂಸ್ಕೃತಿಕ ಪರಂಪರೆಯನ್ನು ಗೌರವಿಸುವುದು.

ಭಾರತದ ಸಂವಿಧಾನದಲ್ಲಿನ ಕಾನೂನಿನ ಮುಂದೆ ಎಲ್ಲರೂ ಸಮಾನರು; ಏಕರೂಪದ ಪೌರತ್ವ; ಮಾನವನ ಘನತೆಯ ಬದುಕು; ಇವುಗಳೊಂದಿಗೆ, ಪ್ರಜೆಗಳೇ ಪ್ರಭುಗಳಾಗಿರುವ ಸಾಮಾಜಿಕ-ರಾಜಕೀಯ ವ್ಯವಸ್ಥೆಯಾಗಿದೆ. ಜಗತ್ತಿನಲ್ಲಿಯೇ ಅತ್ಯಂತ ಶ್ರೇಷ್ಠವಾಧ ಸಂವಿಧಾನವನ್ನು ಭಾರತರತ್ನ ಅಂಬೇಡ್ಕರ್ ಅವರು ಪಾರ್ಲಿಮೆಂಟಿನಲ್ಲಿ ಒಪ್ಪಿಸಿದಾಗ, ಸುಮಾರು 45 ನಿಮಿಷಗಳ ಸುಧೀರ್ಘ ಭಾಷಣ ಮಾಡಿದ್ದರು. "ಸಂವಿಧಾನ ರಚನಾ ಸಮಿತಿಯು, ಸಂವಿಧಾನ ಕರಡು ರಚನಾ ಸಮಿತಿಯನ್ನು ರಚಿಸಿ, ಮೂರು ಉಪ ಸಮಿತಿಗಳ (1. Union Constitution Committee, 2. Provisional Consitutions Committee, 3. Advisory Committee on Fundamental rights, Minorities Tribal areas) ಚರ್ಚೆಗಳು ಮತ್ತು ಗೌರ್ನಮೆಂಟ್ ಆಫ್ ಇಂಡಿಯಾ ಆಕ್ಟ್-1935ರಲ್ಲಿರುವುದನ್ನು ಪರಿಶೀಲಿಸಿಕೊಂಡು, ಸಂವಿಧಾನ ರಚಿಸಲು ನಿರ್ದೇಶಿಸಿದಂತೆ, ಸಂವಿಧಾನವನ್ನು ರಚಿಸಲಾಗಿದೆಯೆಂದು, ಸಂವಿಧಾನ ರಚಿಸುವ ಈ ಮಹತ್ತರವಾದ ರಾಷ್ಟ್ರಸೇವಾ ಕಾರ್ಯಕ್ಕೆ ಅವರನ್ನು ಅಧ್ಯಕ್ಷರನ್ನಾಗಿ ಆಯ್ಕೆಮಾಡಿದ ಎಲ್ಲರಿಗೂ ಕೃತಜ್ಞತೆಯನ್ನು ಸಲ್ಲಿಸುತ್ತಾ, ಸಮಿತಿಯ ಸದಸ್ಯರೆಲ್ಲರಿಗೂ ಕೃತಜ್ಞತೆಯನ್ನು ಸಲ್ಲಿಸಿದರು. ನಂತರದಲ್ಲಿ ಮಾತನಾಡುತ್ತಾ, ಕರಡು ರಚನಾ ಸಮಿತಿ ನಡೆಸಿದ ಸಭೆಗಳು-ಚರ್ಚೆಗಳ ವಿವರಗಳನ್ನು ಮುಂದಿಡುತ್ತಾ ಕೆನಡಾ-ಅಮೇರಿಕಾ-ಆಸ್ಟ್ರೇಲಿಯಾ-ದಕ್ಷಿಣ ಆಫ್ರಿಕಾದ ಸಂವಿಧಾನದ ವಿವರಗಳನ್ನು ವಿಶ್ಲೇಷಿಸಿದರು. ಹಾಗೆಯೇ, ಭಾರತದ ಹಿಂದಿನ ಇತಿಹಾಸವನ್ನು ಮುಂದಿಡುತ್ತಾ, ಆತ್ಮಾವಲೋಕನದ ವಿಚಾರಗಳನ್ನು ಪ್ರಸ್ತಾಪಿಸುತ್ತಾ, ಅನೇಕ ಘಟನೆಗಳನ್ನು ಹೇಳುತ್ತಾ, ಭಾರತದ ನೆಲಮೂಲದವರೇ ಶತೃಗಳಿಗೆ ಕೆಂಪುಹಾಸಿನ ಸ್ವಾಗತ ಕೋರಿದ್ದನ್ನು, ದೇಶವಾಸಿಗಳ ವಿರುದ್ಧ ಸಂಚು ಮಾಡಿದ್ದನ್ನು ವಿವರಿಸುತ್ತಾ- "ನಾವಿಂದು ರಾಜಕೀಯ ಸ್ವಾತಂತ್ರ್ಯವನ್ನು ಪಡೆದಿದ್ದೇವೆ. ಆದರೆ ಸಾಮಾಜಿಕ-ಆರ್ಥಿಕ ಪ್ರಜಾಪ್ರಭುತ್ವವನ್ನು ಸಾಧಿಸಬೇಕಾಗಿದೆ. ಅದನ್ನು ಸಾಧಿಸಿಕೊಳ್ಳದೆ ಇದ್ದಲ್ಲಿ, ಅಸಮಾನತೆಯಿಂದ ತೊಳಲಾಡುವವರು ಸಂವಿಧಾನವನ್ನು, ಪ್ರಜಾಪ್ರಭುತ್ವವನ್ನು ಧ್ವಂಸ ಮಾಡಿಯಾರು" ಎಂದು ಎಚ್ಚರಿಕೆಯನ್ನು ಕೊಟ್ಟರು. ಮುಂದುವರಿದು ರಾಜನೀತಿಜ್ಞ ಜಾನ್ ಸ್ಟುವರ್ಟ್‌ಮಿಲ್ ಹೇಳಿದ ಮಾತನ್ನು "ಪ್ರಜಾಪ್ರಭುತ್ವದ ರಕ್ಷಣೆಗಾಗಿ, ಎಂಥಹ ಮಹಾನ್ ವ್ಯಕ್ತಿಯೇ ಆಗಿರಲಿ, ಅವನ ಪಾದದಡಿಯಲ್ಲಿ ಸ್ವಾತಂತ್ರ್ಯವನ್ನು ಎಸೆಯಬಾರದು" ಎಂದರು. ಈಗಿರುವ ಎಲ್ಲಾ ಅಸಮಾನತೆಯೊಂದಿಗೆ ಇಂದಿನಿಂದ ಪಕ್ಷ ರಾಜಕಾರಣವೂ ಸೇರಿದೆ. ದೇಶದ ಹಿತಕ್ಕಿಂತ, ಪಕ್ಷವೇ ಮುಖ್ಯವೆನ್ನುವವರಿಂದ ಭಾರತದ ರಾಷ್ಟ್ರೀಯತೆಗೆ ಅಪಾಯವಿದೆ. ಆದ್ದರಿಂದ ನಾವು ನಮ್ಮ ದೇಹದ ಬಿಸಿರಕ್ತದ ಕೊನೆ ಹನಿಯಿರುವವರೆಗೂ ಭಾರತದ ಸ್ವಾತಂತ್ರ, ಸಮಾನತೆ, ಬಂಧುತ್ವ, ಜಾತ್ಯಾತೀತತೆಯನ್ನು ರಕ್ಷಣೆ ಮಾಡಲು ಧೃಡ ಪ್ರತಿಜ್ಞೆ ಮಾಡಬೇಕು" ಎಂದಿದ್ದರು.



ಕನ್ನಡ... ಕನ್ನಡಿಗ... ಕರ್ನಾಟಕ : ಭಾರತ ರತ್ನ ಪಂ. ಭೀಮಸೇನ ಗುರುರಾಜ ಜೋಷಿ ಜನ್ಮಶತಮಾನೋತ್ಸವ : (04.02.1922–24.01.2011)

– ಡಾ. ಗಣನಾಥ ಶೆಟ್ಟಿ ಎಕ್ಕಾರು

ಕರ್ನಾಟಕ ಏಕೀಕರಣವಾಗಿ 2020ನೇ ನವೆಂಬರ್ 1ನೆಯ ತಾರೀಖಿಗೆ ಅರವತ್ತನಾಲ್ಕು ವರ್ಷಗಳಾಗುತ್ತದೆ. ಕರ್ನಾಟಕದ ಏಕೀಕರಣ ಹೋರಾಟವು ಕಹಿ-ಸಿಹಿ ಘಟನೆಗಳ ಸ್ಮರಣಲೋಕವನ್ನೇ ತೆರೆದಿಡುತ್ತವೆ. ಈ ಸ್ತರದಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ಸಾಹಿತ್ಯ, ಸಂಸ್ಕೃತಿ, ಸಮಾಜ, ಶಿಕ್ಷಣ, ರಾಜಕಾರಣದ ಮೂಲಕ ಕನ್ನಡ ನಾಡು ನುಡಿ ಕಟ್ಟಿದ ಮಹಾನ್ ಚೇತನಗಳನ್ನು ಗಾಂಧಿ ಭವನ ಸ್ಮರಿಸುತ್ತದೆ.

ಭೀಮಸೇನ ಜೋಷಿಅವರು ಗದಗ ಜಿಲ್ಲೆಯ ರೋಣ ತಾಲೂಕಿನಲ್ಲಿ ಜನಿಸಿದರು. ಭೀಮಸೇನರ ಪೂರ್ವಜರು, ಮೂಲತಃ ಗದಗ ಜಿಲ್ಲೆಯ 'ಹೊಂಬಳ' ಗ್ರಾಮದವರು. ಇವರ ತಂದೆ ಗುರುರಾಜ ಜೋಷಿ ಸಂಸ್ಕೃತ ಪಂಡಿತರು. 'ಬಸವೇಶ್ವರ ಹೈಸ್ಕೂಲ್'ನಲ್ಲಿ ಮುಖ್ಯೋಪಾಧ್ಯಾರಾಗಿ ಸೇವೆಸಲ್ಲಿಸಿದ್ದರು. ಹಿರಿಯ ಮಗ ಭೀಮಸೇನರು 'ಭಾರತ ರತ್ನ' ಪ್ರಶಸ್ತಿಗೆ ಭಾಜನರಾದ ಮೊದಲ ಹಿಂದುಸ್ತಾನಿ ಸಂಗೀತ ಗಾಯಕರಾಗಿದ್ದಾರೆ. ಚಿಕ್ಕಂದಿನಿಂದಲೇ ಸಂಗೀತದ ಗೀಳಿದ್ದ ಜೋಷಿಯವರು ಹನ್ನೊಂದನೆಯ ವಯಸ್ಸಿನಲ್ಲಿಯೇ ಮನೆ ಬಿಟ್ಟು ಮುಂಬಯಿಗೆ ಹೋದರು. ಮುಂಬಯಿಯಲ್ಲಿ ಜೀವನೋಪಾಯಕ್ಕಾಗಿ ಕೂಲಿ ನಾಲಿ ಮಾಡಿ, ಫುಟ್ಪಾತ್‌ನಲ್ಲಿ ಮಲಗಿ ದಿನ ಕಳೆದಿದ್ದರು. ಹಸಿವು, ಅಸಹಾಯಕತೆ, ನಿರುದ್ಯೋಗ ಅವರನ್ನು ಮತ್ತೆ ಹುಟ್ಟೂರಿಗೆ ಬರುವಂತೆ ಮಾಡಿತು. ಸಂಗೀತ ಕಲಿಯಲೇಬೇಕೆಂಬ ಆಸೆ ಮತ್ತು ಹಠ ಅವರನ್ನು ಎರಡನೆ ಬಾರಿ ಮನೆ ಬಿಡುವಂತೆ ಮಾಡಿತು. ಅಲ್ಲಿಂದ ಅವರು ಗ್ವಾಲಿಯರ್‌ಗೆ ಬಂದು ಅಲ್ಲಿ ಗಾಯಕ ವಿನಾಯಕ್ ರಾವ್ ಪಟವರ್ಧನ್ ಇವರ ನಿರ್ದೇಶನದಂತೆ ಸವಾಯಿ ಗಂಧರ್ವರಲ್ಲಿ ಸಂಗೀತಾಭ್ಯಾಸ ಮಾಡಿದರು. ಧಾರವಾಡಕ್ಕೆ ಹಿಂದಿರುಗಿ ಕುಂದಗೋಳದ ಪ್ರಸಿದ್ಧ ಗಾಯಕರಾದ ಸವಾಯಿ ಗಂಧರ್ವರ ಪರಮ ಶಿಷ್ಯರಾದರು. ಹಿಂದುಸ್ತಾನಿ ಸಂಗೀತದ ಕಿರಾಣಾ ಘರಾನಾದಲ್ಲಿ ಪರಿಣತರಾದ ಭೀಮಸೇನ ಜೋಷಿ ಅವರು ಐದು ದಶಕಗಳ ಕಾಲ ಸಂಗೀತ ಕಛೇರಿಗಳಲ್ಲಿ ಹಿಂದುಸ್ತಾನಿ ಸಂಗೀತ ಗಂಗೆಯನ್ನು ಹರಿಸಿದರು.

ಪಂ॥ ಭೀಮಸೇನ ಜೋಷಿ ಅವರ ಮನೆತನ ಸಂಗೀತ, ಸಾಹಿತ್ಯ, ಮತ್ತು ಕ್ರೀಡೆಗಳಿಗೆ ಹೆಸರುವಾಸಿಯಾಗಿತ್ತು. ಅಜ್ಜ ಕೀರ್ತನಕಾರರು. ಮೊಮ್ಮಗ, 'ಭೀಮಸೇನ', ಭಜನಾಮೇಳದವರೊಡನೆ ದಾಸರ ಪದಗಳನ್ನು ಕೇಳುತ್ತಾ, ಹಾಡುತ್ತಾ ಮೈಮರೆಯುತ್ತಿದ್ದರು. ಹೀಗೆಯೇ ಮುಂದುವರೆದು, 'ದಾಸವಾಣಿ ಮತ್ತು ಶಾಸ್ತ್ರೀಯ ಸಂಗೀತ'ದಲ್ಲಿ ಅಪ್ರತಿಮ ಸಾಧನೆಮಾಡಿದರು;

ಅವರಿಗೆ ಗದುಗಿನ 'ಖಡಕ್ ರೊಟ್ಟಿ' ಮತ್ತು ಝುಣಕ ಬಲುಪ್ರೀತಿ. 'ಅಭಿನಯರಂಗ ವಿದ್ಯಾದಾನ ಸಮಿತಿ ಹೈಸ್ಕೂಲ್' ಅವರಣದಲ್ಲಿ ನಡೆದ ಸಂಗೀತ ಕಾರ್ಯಕ್ರಮದಲ್ಲಿ ಸಂಗ್ರಹವಾದ ಹಣದಲ್ಲಿ ನಗರದ ವಿವಿಧ ಶಾಲಾ ಕೊಠಡಿ ನಿರ್ಮಾಣಕ್ಕೆ ಮತ್ತು ದೇವಾಲಯಕ್ಕೆ ದೇಣಿಗೆ ನೀಡಿದರು. ಕೊಲ್ಕತ್ತಾಕ್ಕೆ ಅವರು ವರ್ಷದಲ್ಲಿ ಸುಮಾರು 20 ಬಾರಿಯಾದರೂ ಹೋಗಿಬರುತ್ತಿದ್ದರು. ಕೊಲ್ಕತ್ತಾದಲ್ಲಿನ ಹಿಂದೂಸ್ತಾನೀ ಸಂಗೀತ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದು ಪ್ರತಿಷ್ಠೆಯ ವಿಷಯವಾಗಿತ್ತು. ಅಲ್ಲಿ ಹಲವಾರು ಸಂಗೀತ ಸಮ್ಮೇಳನಗಳು ವರ್ಷಪೂರ್ತಿ ಆಯೋಜಿತಗೊಳ್ಳುತ್ತಿದ್ದವು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ,



'ಆಲ್ ಬೆಂಗಾಲ್ ಮ್ಯೂಸಿಕ್ ಕಾನ್ಫರೆನ್ಸ್',
'ತಾನ್ಸೇನ್ ಮ್ಯೂಸಿಕ್ ಕಾನ್ಫರೆನ್ಸ್',
'ಡೋವರ್ ಲೇನ್ ಮ್ಯೂಸಿಕ್ ಕಾನ್ಫರೆನ್ಸ್',

ಹಿಂದುಸ್ತಾನಿ ಸಂಗೀತದ ಖಯಾಲ್ ಕೃತಿಗಳ ಹಾಡುಗಾರಿಕೆಗೆ ಜೋಷಿ ಅವರು ಪ್ರಸಿದ್ಧರು. ಕನ್ನಡದ ದಾಸಪದ 'ಭಾಗ್ಯದ ಲಕ್ಷ್ಮಿ ಬಾರಮ್ಮ ಹಾಡನ್ನು ಕೇಳಿದರೆ' ಜೋಷಿ ಅವರ ಸ್ವರಮಾಧುರ್ಯದಲ್ಲೇ ಕೇಳಬೇಕು, ಎಂಬಷ್ಟು ಸುಪ್ರಸಿದ್ಧವಾಗಿದೆ. ಇವರು ಹಿಂದಿ ಭಜನೆಗಳು, ಮರಾಠಿ ಅಭಂಗ ಮತ್ತು ನಾಟ್ಯಗೀತೆಗಳ ಖ್ಯಾತ ಗಾಯಕರು ಆಗಿದ್ದಾರೆ. ಭೀಮಸೇನರು ಸ್ವಭಾವತಃ ಮಹಾಮೌನಿಗಳು. ಅವರು ಪ್ರಸ್ತುತಪಡಿಸುತ್ತಿದ್ದ,'ಬೃಂದಾವನ ಸಾರಂಗದಲ್ಲೋ,' 'ಭೀಮ ಪಲಾಸಿನಲ್ಲೋ', ಅಥವಾ ಮತ್ಯಾವುದೋ ಮುದಕೊಡುವ ರಾಗಗಳಲ್ಲಿ ರಸಾನಂದವನ್ನರಸುತ್ತಿದ್ದರು. ಅವರ ಮನೋಲೋಕದಲ್ಲೆಲ್ಲಾ ಆವರಿಸಿದ್ದು,'ಸಂಗೀತ'; 'ಕೇವಲ ಸಂಗೀತ,' ಹಾಗೂ ಅಪಾರ ಗುರುಭಕ್ತಿ ಮಾತ್ರ.

ಭೀಮಸೇನ ಜೋಶಿಯವರ ಸಂಗೀತದ, ಧ್ವನಿಸುರಳಿಗಳು ಮತ್ತು ಧ್ವನಿಮುದ್ರಿಕೆಗಳು, ಸಂಗೀತ ಸಾಹಿತ್ಯ ಪ್ರಿಯರ ಮನೆ–ಮನವನ್ನು ತಲುಪಿವೆ. ಸಂಗೀತದಲ್ಲಿ 'ಕಲಾಶ್ರೀ' ರಾಗವನ್ನು ರಚಿಸಿದ ಅವರು ಮರಾಠಿ ಅಭಂಗ, ನಾಟ್ಯ ಸಂಗೀತ, ಹಿಂದಿ ಭಜನ್, ಕನ್ನಡದಲ್ಲಿ ದೇವರನಾಮಗಳನ್ನು ಹಾಡಿದ್ದಾರೆ. ಮತ್ತು ಹಲವು ಚಲನಚಿತ್ರಗಳಿಗೂ ಕಂಠದಾನ ಮಾಡಿದ್ದಾರೆ. ಇವರ 'ಸಂತವಾಣಿಯ ನಾದಾಮೃತ' ಅತ್ಯಂತ ಜನಪ್ರಿಯತೆಯನ್ನು ಪಡೆದಿದೆ.

ಗುರುಗಳ ನೆನಪಿನಲ್ಲಿ 1952ರಿಂದ ಪ್ರತಿ ವರ್ಷವೂ "ಸವಾಯಿ ಗಂಧರ್ವ ಸಂಗೀತ ಮಹೋತ್ಸವ"ವನ್ನು ನಡೆಸುತ್ತಿದ್ದರು. ಹುಬ್ಬಳ್ಳಿಯ ಹಾನಗಲ್ ಮ್ಯೂಸಿಕ್ ಸಂಸ್ಥೆ, 12ನೇ ಅಕ್ಟೋಬರ್, 2007ರಲ್ಲಿ ಪಂ. ಭೀಮಸೇನ ಜೋಷಿ ಅವರಿಗೆ ಪುಣೆಯಲ್ಲಿ, ಡಾ. ಗಂಗೂಬಾಯಿ ಹಾನಗಲ್ ಅವರ ಅಮೃತಹಸ್ತದಿಂದ, "ಸಂಗೀತಕಲಾನಿಧಿ"ಯೆಂಬ ಪ್ರಶಸ್ತಿ ಪ್ರಧಾನಿಸಿತ್ತು. ಅನೇಕ ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್‌ನ್ನೂ, ಭಾರತ ಸರ್ಕಾರವು ಇವರ ಕಲಾಸೇವೆಗೆ ಅತ್ಯುನ್ನತ ಪದ್ಮಶ್ರೀ ಮತ್ತು ಭಾರತರತ್ನ ಪ್ರಶಸ್ತಿಯನ್ನು ಪ್ರಧಾನಿಸಿ ಗೌರವಿಸಿದೆ.

ಕನಕದಾಸರು (1508 – 1606)

– ಪ್ರೊ. ಬಿ. ಕೃಷ್ಣಪ್ಪ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಕನಕದಾಸರ ನಳಚರಿತ್ರೆ ಕಥನಕಾವ್ಯದ ವಿವರಣೆ ಮುಂದುವರಿದಿದೆ....

ಕಥೆ ಎಲ್ಲಿಯೂ ನೀರಸವಿಲ್ಲದೆ ಸ್ಫುಟವಾಗಿ ಮುಂದುವರಿಯುತ್ತದೆ. ಈ ಕೃತಿಯಲ್ಲಿ ನಳ-ದಮಯಂತಿಯರ ಉದಾತ್ತ ಪಾತ್ರಗಳು ಎದು ನಿಲ್ಲುತ್ತವೆ. ಸಜೀವವಾಗಿ ಚಿತ್ರಿತವಾಗಿವೆ. ರಾಜ್ಯವನ್ನು ಕಳೆದುಕೊಂಡು ಹಲವಾರು ಕೋಟಲೆಗಳಿಗೆ ಸಿಲುಕಿದ ಆ ದಂಪತಿಗಳ ಕರುಣ ಚಿತ್ರವು ಹೃದಯಸ್ಪರ್ಶಿಯಾಗಿದೆ. ಮಾನವೀಯತೆಯ ವಿವಿಧ ಭಾವನೆಗಳನ್ನು ಕವಿ ಹೃದಯ ತುಂಬಿ ನಿರೂಪಿಸಿದ್ದಾನೆ. ಇಂತಹ ಕಡೆಗಳಲ್ಲಿ ಕನಕದಾಸರ ಕಾವ್ಯ ಶಕ್ತಿಯ ಹೆಚ್ಚಳಿಕೆ ಎದ್ದು ಕಾಣುತ್ತದೆ. ಕುಮಾರವ್ಯಾಸ-ಕುಮಾರ ವಾಲ್ಮೀಕಿಯರ ಪ್ರಭಾವವು ಕವಿಯ ಈ ಕೃತಿಯ ಮೇಲೆ ಆಗಿದೆ. ವಿಶೇಷವಾಗಿ ಕುಮಾರವ್ಯಾಸನ ವರ್ಣನಾಮಿತಿ ಕಲ್ಪಕತೆಯ ಬೆಡಗು, ಶೈಲಿಯ ಪ್ರಸನ್ನತೆ ಅಲ್ಲಲ್ಲಿ ಕಾಣಬರುತ್ತವೆ. ಕನಕದಾಸರ ಭಾಷಾಶೈಲಿಯಲ್ಲಿ ಆಡಂಬರವಿಲ್ಲದ, ಸಂಸ್ಕೃತವು ತಿಳಿಯಾದ ತಿರುಳ್ಗನ್ನಡದೊಂದಿಗೆ ಹೊಂದಿ ಸಮರಸವಾಗಿದೆ.

ಮೋಹನ ತರಂಗಿಣಿ

ಈ ಕೃತಿ ಸುಮಾರು 2700 ಪದ್ಯಗಳನ್ನು ಒಳಗೊಂಡ ಸಾಂಗತ್ಯ ಗ್ರಂಥ. ಕವಿ ಭಾರತ-ಭಾಗವತಗಳಿಲ್ಲ ಬಂದಿರುವ ಕಾಮದಹನ, 'ಪುನಾಥನ ಪುರ್ನಜನನ, ಶಂಬಾರಾಸುರನ ವಧೆ, ಉಷಾ ಅನಿರುದ್ಧರ ಪ್ರೇಮಲೀಲೆ, ಬಾಣಾಸುರ ವಿಜಯ ಕಥೆಯನ್ನು ಬಿತ್ತರಿಸಿದ್ದಾನೆ. ಈ ಕೃತಿಯಲ್ಲಿ ವಿಜಯನಗರ ಕಾಲದ ವಿವಿಧ ಜನ ಜೀವನವು ಪರ್ಯಾಯವಾಗಿ ವರ್ಣಿತವಾಗಿರುವುದರಿಂದ, ಕವಿ ಭಾಗವತ ಧರ್ಮದ ಪ್ರಚಾರಕ್ಕಾಗಿ ಈ ಕೃತಿಯನ್ನು ಆರಿಸಿಕೊಂಡಿದ್ದರೂ ರಾಜಕೀಯ ಉದ್ಧೇಶವನ್ನು ಇಟ್ಟುಕೊಂಡಿರಬೇಕು. 'ಕೃಷ್ಣಚರಿತೆ' ಎಂದು ಕರೆದು "ಕೃಷ್ಣದೇವರಾಯನ ಚರಿತೆ" ಎಂಬ ಸೂಚಾರ್ಥವನ್ನು ಅಪೇಕ್ಷಿಸಿರಬಹುದೆಂದು ರಂ.ಶ್ರೀ.ಮುಗಳಿ ಅವರು ಅಭಿಪ್ರಾಯಪಡುತ್ತಾರೆ. ಇದರ ಕಥಾನಕವು ದೀರ್ಘ ವರ್ಣನೆಗಳಿಂದ ಕಿಕ್ಕಿರಿದು ತಡೆತಡೆದು ಸಾಗುತ್ತದೆ. ಅಸಾಧ್ಯ-ಅದ್ಭುತ ಸನ್ನಿವೇಶಗಳು ಹೆಚ್ಚಾಗಿವೆ. ಕೆಲವು ಕರುಣ ಮತ್ತು ವೀರರಸದ ಪ್ರಸಂಗಗಳು ಚಿತ್ತವೇಧಕವಾಗಿವೆ. ಕಥಾನಕ ಹಾಗೂ ಪಾತ್ರಗಳಲ್ಲಿ ಮಾನವತೆಯ ಗಾಢ ಸಂಪರ್ಕವಿಲ್ಲ. ಕವಿ ಕಾವ್ಯ ಮಾರ್ಗದ ಹದಿನೆಂಟು ವರ್ಣನೆಗಳನ್ನೂ, ಹಲವು ರಸಗಳನ್ನು ಸಾಂಗತ್ಯ ಧಾಟಿಯಲ್ಲಿ ತಂದಿದ್ದಾನೆ. ತನ್ನ ಕವಿತಾ ಶಕ್ತಿಯ ಮೇಲ್ಸ್ತರವನ್ನು ತೋರಿದ್ದಾನೆ. ಅವನ ಶೈಲಿ "ಕೇಳ್ವರಿಗಿದು ತನಿಬೆಲ್ಲದಚ್ಚು", "ಜೇನುತುಪ್ಪದ ತೊರೆ"ಯಾಗಿದೆ.



ಮೋಹನ ತರಂಗಿಣಿಯ ಮುಖ್ಯ ಮೋಹನವೆಂದರೆ ವಿವಿಧ ವರ್ಣನೆಗಳ ಸ್ವಭಾವೋಕ್ತಿ ಮತ್ತು ಕಲ್ಪಕತೆ. ಒಟ್ಟಿನಲ್ಲಿ ಪೌರಾಣಿಕ ಕಥೆಯ ಮೂಲಕ ತತ್ಕಾಲೀನ ಜೀವನವನ್ನು ಚಿತ್ರಿಸಿ ಚಿರಂತನವಾದ ಭಕ್ತಿ ಸಂದೇಶವನ್ನು ಬೀರಿ ಈ ಕೃತಿ ಸಫಲವಾಗಿದೆ. ರಾಜಕೀಯ ಧ್ವನಿ ಮತ್ತು ತತ್ಕಾಲೀನ ಚಿತ್ರವುಳ್ಳ ಪೌರಾಣಿಕ ಕಾವ್ಯಕ್ಕೊಂದು ಸ್ಥಾನವಿದೆ.

ಕನಕದಾಸರ 'ಭಕ್ತಿ ತರಂಗಿಣಿ' ಕೀರ್ತನೆಗಳಲ್ಲಿ ಹೊರಸೂಸಿ ಹರಿದಿದ್ದಾಳೆ. ಆತ ಮುಖ್ಯವಾಗಿ ಭಾಗವತ, ಹರಿಭಕ್ತಿಯ ಮತ್ತು ಸರ್ವಾರ್ಪಣದ ಪ್ರತಿಪಾದಕನಾಗಿದ್ದಾನೆ. ಮಾಧ್ವ ಮತ್ತು ರಾಮಾನುಜ ಇವುಗಳ ಮತಸಾರವನ್ನು ಒಪ್ಪಿಕೊಂಡಿದ್ದರೂ, ಯಾವುದೊಂದು ನಿರ್ಧಿಷ್ಟ ಮತಪ್ರಚಾರದ ಗೊಡವೆಗೆ ಹೋಗಿಲ್ಲ. ಆತನ ಕೀರ್ತನೆಗಳಲ್ಲಿ ಏಕಾಂತಭಕ್ತಿ, ನೀತಿ, ಧರ್ಮ ಬೋಧನೆ ಇದೆ. ಡಂಭಾಚಾರ-ಸಂಕುಚಿತ ಮನೋವೃತ್ತಿಗಳನ್ನು ಆತ ತೀವ್ರವಾಗಿ ಖಂಡಿಸಿದ್ದಾನೆ. ದಾಸಕೂಟದ ಸಾಮಾನ್ಯ ಕ್ರಮದಂತೆ ದೇವತಾಸ್ತುತಿ, ನಾಮಸ್ಮರಣೆಯ ಹಾಡುಗಳು ಇದ್ದರೂ ಅವುಗಳ ಸಂಖ್ಯೆಯಲ್ಲಿ ಕಡಿಮೆ. ಇದ್ದವುಗಳಲ್ಲಿ ಕೆಲವು ಸುಂದರವಾಗಿವೆ. ನೀತಿ-ತತ್ವ ಇವುಗಳಿಗೆ ಸಂಬಂಧಪಟ್ಟ ಕೀರ್ತನೆಗಳು ಕನಕದಾಸರಲ್ಲಿ ಹೇರಳವಾಗಿವೆ. ಪುರಂದರ ದಾಸರಂತೆ ಕನಕದಾಸರಲ್ಲಿಯೂ ಬೋಧಕನ ಆವೇಶ ಕಂಡುಬರುತ್ತದೆ. ಕನಕದಾಸರಲ್ಲಿ ವಿಚಾರ ಸ್ವಾತಂತ್ರ್ಯ ಹೆಚ್ಚು. ಜನಜೀವನದ, ಜನಭಾಷೆಯ ಅರಿವು ಅತ್ಯುತ್ಕಟವಾಗಿದೆ. "ಬೋಧನಪರ ಕೀರ್ತನೆಗಳಲ್ಲಿ, ಉಚಿತವಾದ ಉಪಮೆ ರೂಪಕಗಳಿಂದ ತತ್ವ ನೀತಿಗಳಿಗೆ ಕವಿತ್ವದ ಪರಿವೇಷಕಟ್ಟಿದ ಸೊಗಸುಗಾರಿಕೆ ಇದೆ. ಒಮ್ಮೊಮ್ಮೆ ಇಡೀ ಕೀರ್ತನೆಯೇ ರೂಪಕ ವಿಸ್ತಾರವಾಗಿ ಸೊಗಸಾಗಿದೆ. ಜಾನಪದ ಧಾಟಿಯಲ್ಲಿ ಕನಕದಾಸರು "ಸಾರಿದೂರಿ ಹೇಳುತ್ತೇನೆ", "ಏನೂ ಇಲ್ಲದ ಎರಡು ದಿನದ ಸಂಸಾರ", "ಡಿಂಬದಲ್ಲಿರುವ ಜೀವ" ಇಂತಹ ಗೀತೆಗಳನ್ನು ಸೊಗಸಾಗಿ ಹೆಣೆದಿದ್ದಾರೆ. "ಬೆಳ್ಳಿ ಬಂಗಾರಿಟ್ಟುಕೊಂಡು, ಒಳ್ಳೆ ವಸ್ತ್ರ ಹೊದ್ದುಕೊಂಡು ಚಳ್ಳಪಿಳ್ಳಿ ಗೊಂಬೆಯಂತೆ ಆಡಿಹೋಯಿತು. ಹರಿದು ಹಳ್ಳ ಹೋಗುವಾಗ, ಗುಳ್ಳೆ ಬಂದು ಒಡೆಯುವಂತೆ, ಉಳ್ಳೆ ಪೊರೆಯಂತೆ ನೋಡೊ ಸಂಸಾರದಾಟವೊ" ಎಂಬ ನುಡಿ ರಮ್ಯವಾಗಿದೆ.

ಮುಂದುವರಿಯುವುದು...



ಹೆಮ್ಮೆಯ ಕನ್ನಡಿಗ : ದ.ರಾ. ಬೇಂದ್ರೆ 125 (31.01.1896 – 26.10.1981)

– ಡಾ. ಎಸ್. ರಾಮಲಿಂಗೇಶ್ವರ (ಸಿಸಿರಾ)

ಕನ್ನಡ ನಾಡು ನುಡಿಯನ್ನು ವಿಶ್ವವಿಖ್ಯಾತಗೊಳಿಸಿದ ದಿಗ್ಗಜರುಗಳ ಕಿರು ಪರಿಚಯವೇ ಈ ಅಂಕಣ



ಎದೆಯದನಿಯಾಗಿ ಜನಮನದಲ್ಲಿ ಅನುರಣಿಸುತ್ತಿರುವ ವರಕವಿ ದ.ರಾ. ಬೇಂದ್ರೆ. ಹುಸಿನಗುತ ಬಂದವರು, ನಸುನಗುತ ಬಾಳಿದೋರು, ಬಡನೂರ ವರುಷನಾ ಹರುಷಾದಿ ಕಳೆದವರು. ಯಾಕಾರ ಕೇಳೋಣ ಎಂದವರು. ಕನ್ನಡದ ಬನ, ಭಾವ, ಬದುಕು, ಭಾಷೆಯ ಇಂಪು, ಕಂಪು ತಂಪು ತಾಪಗಳನ್ನು ಕಾವ್ಯ ಕುಸುರಿಯಲ್ಲಿ ಕಡೆದವರು–ಅಂಬಿಕಾತನಯದತ್ತ ಅವರಾಗಿದ್ದಾರೆ. ಈ ಭಾಷಾ ಬ್ರಹ್ಮನ ನಾಲಿಗೆ ಮೇಲೆ ಪದಗಳು ನಲಿದು ನರ್ತಿಸಿತೆ; ಕುಣಿದು ಕುಪ್ಪಳಿಸಿವೆ; ದುಮ್ಮಿಕ್ಕಿ, ಬೋರ್ಗ–ರೆದು ಹರಿದಿವೆ. ಕಾಡು–ನಾಡು–ಮೇಡು, ಗುಡಿ ಗೋಪುರ, ಕೆರೆಕಟ್ಟೆಗಳಲಿ ಇಳಿದು, ಭುವಿ–ಭಾನಗಳನ್ನು ಸುತ್ತಿವೆ. ಬಡವ ಬಲ್ಲಿದ, ತಾಯಿ, ಹೆಣ್ಣು, ಮಾನಿನಿ, ಮಕ್ಕಳು, ಬಾಣಂತಿ, ವಿಧವೆ, ವಿದುರರ ಮನದ ತಂತಿಯ ಮೀಟಿವೆ. ಒಲವೇ ನಮ್ಮ ಬದುಕು ಎಂದು ಎದೆ ತಣಿಸುವ ದೇವಗಂಗೆಯನ್ನು ಹರಿಸಿವೆ. ಬೇಂದ್ರೆ ತಾವು ಪಂಚಮಾತೆಯರ ಪುತ್ರರೆಂದು ಪರಿಭಾವಿಸುತ್ತಿದ್ದರು. ತಾನು ಹೆತ್ತ ತಾಯಿ, ಕನ್ನಡ ತಾಯಿ, ಭಾರತಮಾತೆ, ಭೂಮಿತಾಯಿ, ವಿಶ್ವಮಾತೆಯ ವಾತ್ಸಲ್ಯದ ಶಕ್ತಿಯಲ್ಲಿ ಮಿಂದೆದ್ದು ಬಂದವನೆಂದು ಬಣ್ಣಿಸುತ್ತಿದ್ದರು.

ಬೇಂದ್ರೆ ಅವರು ಧಾರವಾಡದ ವೈದಿಕ ಕುಟುಂಬದ ರಾಮಚಂದ್ರ ಭಟ್ಟ ಮತ್ತು ಅಂಬಿಕೆ ದಂಪತಿಗಳ ಮಗನಾಗಿ ಜನಿಸಿದರು. ಹನ್ನೊಂದನೇ ವಯಸ್ಸಿಗೆ ತಂದೆಯನ್ನು ಕಳೆದುಕೊಂಡು ತಾಯಿ ಮತ್ತು ಅಜ್ಜಿಯ ಅಕ್ಕರೆಯ ಮಗನಾಗಿ ಬೆಳೆದರು. ಪುಣೆಯ ಕಾಲೇಜಿನಲ್ಲಿ ಬಿ.ಎ.ಪದವಿ ನಂತರ ಅಧ್ಯಾಪಕ ವೃತ್ತಿ. ತದನಂತರ ಎಂ.ಎ. ಪದವಿ, ಸೊಲ್ಲಾಪುರದ ಡಿ.ಎ.ವಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾದರು. 1919ರಲ್ಲಿ ಇವರು ಹುಬ್ಬಳ್ಳಿಯ ಲಕ್ಷ್ಮೀಬಾಯಿ ಅವರೊಂದಿಗೆ ವಿವಾಹವಾದರು; ಇವರ ಪ್ರಥಮ ಕವನ ಸಂಕಲನ "ಕೃಷ್ಣ ಕುಮಾರಿ" ಅದಾಗಲೇ ಪ್ರಕಟವಾಗಿತ್ತು. "ಕುಣಿಯೋಣು ಬಾರಾ ಕುಣಿಯೋಣು ಬಾ", "ಇಳಿದು ಬಾ ತಾಯಿ ಇಳಿದು ಬಾ", "ನಾನು ಬಡವಿ ಆತ ಬಡವ ಒಲವೆ ನಮ್ಮ ಬದುಕು", 'ನಾರಿ ನಿನ್ನ ಮಾರಿಮ್ಯಾಗ' ಕವನಗಳನ್ನು ಕೇಳದ ಕನ್ನಡಿಗನಿಲ್ಲ. ಬೇಂದ್ರೆ 'ರಸವೆ ಜನನ, ವಿರಸವೆ ಮರಣ, ಸಮರಸವೆ ಜೀವನ'ವೆಂಬ ಜೀವನ ಸಿದ್ಧಾಂತವನ್ನು ಸರಳಭಾಷೆಯಲ್ಲಿ ಕೊಟ್ಟವರು. ಸಾಧನಕೇರಿಯ "ಧಾರವಾಡದ ಅಜ್ಜ" ಅವರ ಮಕ್ಕಳ ಕವಿತೆಗಳು, ಕತೆಗಳು ಮಕ್ಕಳ ಮನಸ್ಸನ್ನು ಪರಿವರ್ತಿಸುತ್ತವೆ. ಕಾಲೇಜಿನಲ್ಲಿ ಓದುತ್ತಿದ್ದಾಗಲೇ ಕವಿತೆಗಳನ್ನು ಕಟ್ಟಿದರು. 1918ರಲ್ಲಿ ಅವರ ಮೊದಲ ಕವನ "ಪ್ರಭಾತ" ಎಂಬ ಪತ್ರಿಕೆಯಲ್ಲಿ ಪ್ರಕಟವಾಯಿತು. ಅಲ್ಲಿಂದಾಚೆಗೆ ಅವರ ಕಾವ್ಯ ಲಹರಿ, 1981ರ ವರೆಗೂ ಜುಳುಜುಳು ಹರಿಯುತ್ತಲೇ ಇತ್ತು. "ಗರಿ", "ಕಾಮಕಸ್ತೂರಿ", "ಸೂರ್ಯಪಾನ", "ನಾದಲೀಲೆ", "ನಾಕುತಂತಿ" ಮೊದಲಾದ ಕವನ ಸಂಕಲನಗಳನ್ನು ಪ್ರಕಟಿಸಿದರು. ಇವರ ನಾಕುತಂತಿ ಕೃತಿಗೆ 1973ರಲ್ಲಿ ಜ್ಞಾನಪೀಠ ಪ್ರಶಸ್ತಿ ಸಂದಿದೆ. ಕವಿತೆಗಳನ್ನಲ್ಲದೆ ನಾಟಕಗಳು, ಸಂಶೋಧನಾತ್ಮಕ ಲೇಖನಗಳು, ವಿಮರ್ಶೆಗಳನ್ನು ಬೇಂದ್ರೆ ಅವರು ರಚಿಸಿದ್ದಾರೆ. 1921ರಲ್ಲಿ ಧಾರವಾಡದಲ್ಲಿ ಅವರು ಕಟ್ಟಿದ "ಗೆಳೆಯರ ಗುಂಪು" ಸಂಸ್ಥೆ ಅವರ ಸಾಹಿತ್ಯ ಚಟುವಟಿಕೆಗಳಿಗೆ ಇಂಬು ನೀಡಿತು. ಆಗಿನ್ನೂ ಸ್ವಾತಂತ್ರ್ಯ ಚಳುವಳಿ ಬಿಸಿ ಏರಿದ್ದ ಸಮಯ. ಬೇಂದ್ರೆ ಅವರ "ಗರಿ" ಕವನ ಸಂಕಲನದಲ್ಲಿನ "ನರಬಲಿ" ಎಂಬ ಕವನವು ಆಗಿನ ಬ್ರಿಟಿಷ್ ಸರ್ಕಾರದ ಕೋಪಕ್ಕೆ ಕಾರಣವಾಯಿತು. ಇದರಿಂದಾಗಿ ಚಳುವಳಿಯಲ್ಲಿ ಭಾಗವಹಿಸಿ ಕೆಲಕಾಲ ಸೆರೆಮನೆವಾಸ ಅನುಭವಿಸಿದರು. ಅವರು 1954ರಲ್ಲಿ ವಿಚಿತ್ರ ಪ್ರಪಂಚ ಎಂಬ ಚಿತ್ರ ಸಾಹಿತ್ಯ ಹಾಗೂ ಗೀತೆಗಳನ್ನು ರಚಿಸಿದ್ದರೆಂದು ಆ ವರ್ಷದ ನವೆಂಬರ್ ತಿಂಗಳ ಚಂದಮಾಮ ಪತ್ರಿಕೆಯ ಜಾಹೀರಾತೊಂದು ತಿಳಿಸುತ್ತದೆ.

ವಾಗ್ಮಿಗಳಾಗಿದ್ದ ಬೇಂದ್ರೆ ಅವರ ಉಪನ್ಯಾಸ ಕೇಳುವುದೆಂದರೆ ಜನರಿಗೆ ಎಗ್ಗಿಲ್ಲದ ಹಿಗ್ಗು. ಅವರ ಮಾತೆಲ್ಲ ಕವನಗಳೋಪಾದಿಯಲ್ಲಿ ಹೊರಹೊಮ್ಮುತ್ತಿದ್ದವು. ಕನ್ನಡದಲ್ಲಿಯೇ ಅಲ್ಲದೆ ಮರಾಠಿ ಭಾಷೆಯಲ್ಲೂ ಬೇಂದ್ರೆ ಅವರು ಕೆಲವು ಕೃತಿಗಳನ್ನು ರಚಿಸಿದ್ದರು. ಆಧ್ಯಾತ್ಮದ ಒಲವಿನಿಂದಾಗಿ ಮಹರ್ಷಿ ಅರವಿಂದರ ಕೃತಿಗಳನ್ನು ಇಂಗ್ಲೀಷಿನಿಂದ ಕನ್ನಡಕ್ಕೆ ಭಾಷಾಂತರ ಮಾಡಿದರು. ಇವರ "ಪಾತರಗಿತ್ತಿ ಪಕ್ಕ ನೋಡಿದೇನ ಅಕ್ಕ" ಇಂದಿಗೂ ಚಿಣ್ಣರ ಅತ್ಯಂತ ಪ್ರೀತಿಪಾತ್ರ ಕವನವಾಗಿದೆ. ಗಣಿತದ ಲೆಕ್ಕಾಚಾರ ಮಾಡುತ್ತ ಬಾಳೆಹಣ್ಣಿನ ಗೊನೆಯಲ್ಲಿ, ಹಲಸಿನ ಹಣ್ಣಿನ ಮುಳ್ಳುಗಳಲ್ಲಿ, ಜೇನುಗೂಡಿನಲ್ಲಿ, ನಿಮ್ಮ ಕಿರುಬೆರಳಿನ ಅಂಚಿಗಿಂತ ಚಿಕ್ಕದಾಗಿರುವ ಹೂವುಗಳಲ್ಲಿ, ಎಲ್ಲೆಲ್ಲೂ ಲೆಕ್ಕಾಚಾರವಿದೆ ಅನ್ನುತ್ತಾ ಕೊನೆಗೆಬೇಂದ್ರೆಯವರು ಗಣಿತದ ಲೆಕ್ಕಾಚಾರದಲ್ಲೇ ಮುಳುಗಿದ್ದರು. ಇವರನ್ನು "ಕನ್ನಡದ ಠಾಗೋರ್" ಎಂದು ಕರೆಯಲಾಗುತ್ತದೆ. "ನಮನ" ಬೇಂದ್ರೆಯವರಿಗೆ ಸಂಖ್ಯೆಗಳ ಹೊಸ ಲೋಕವೊಂದನ್ನು ತೆರೆದಿತ್ತು. ಬೇಂದ್ರೆ ಮನಸಿಗೆ 441 ಹಾಗೂ ಹೃದಯಕ್ಕೆ 881 ಎಂದು ಸಂಖ್ಯೆ ನೀಡಿದ್ದರು.ಇವರ ಮೊದಲ ಕವನ 'ಬೆಳಗು', 'ಗರಿ' ಕವನ ಸಂಕಲನದ ಮೊದಲ ಕವನವಾಗಿತ್ತು. ಅವರ "ಮೂಡಲ ಮನೆಯಾ ಮುತ್ತಿನ ನೀರಿನ ಎರಕಾವ ಹೊಯ್ದಾ ನುಣ್ಣನೆ ಎರಕಾವಾ ಹೊಯ್ದಾ" ಕವನವು ಚಲನಚಿತ್ರದಲ್ಲಿ ಪ್ರಸಿದ್ಧ ಗೀತೆಯಾಗಿ ಮೂಡಿ ಬಂದಿದೆ. ಅವರಿಗೆ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮೈಸೂರು ದಸರಾ ಕಾರ್ಯಕ್ರಮದಲ್ಲಿ ಸನ್ಮಾನ, ಕೇಳ್ಕರ್ ಬಹುಮಾನ, 'ಪದ್ಮಶ್ರೀ', 'ಜ್ಞಾನಪೀಠ ಪ್ರಶಸ್ತಿ,' 'ಕಾಶಿ ವಿದ್ಯಾಪೀಠ,' ವಾರಣಾಸಿ, ಮೈಸೂರು ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯಗಳ ಗೌರವ ಡಾಕ್ಟರೇಟ್, ಕೇಂದ್ರ ಸಾಹಿತ್ಯ ಅಕಾಡೆಮಿಯ ಫೆಲೋಶಿಪ್ ಗೌರವಗಳು ಸಂದಿವೆ.

ಕಸ್ತೂರ್‌ಬಾ ಗಾಂಧಿ

ಮಿಸ್ ಹೆಲಿಮನ್ – ಸರಳಾದೇವಿ

ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿಯು ಹಿಂದಿಯಲ್ಲಿ ಪ್ರಕಟಿಸಿದ ಕಸ್ತೂರ್‌ಬಾ ಕೃತಿಯನ್ನು ಹೊದಿಕೆ ಮಾಸ್ತರರಿಂದ ಕನ್ನಡಕ್ಕೆ ಅನುವಾದ ಮಾಡಿಸಿ ಅಂದಿನ ಅಧ್ಯಕ್ಷರಾದ ಕೆ.ಎಸ್. ನಾರಾಯಣಸ್ವಾಮಿ ಅವರು 1974ರಲ್ಲಿ ಪ್ರಕಟಿಸಿದ ಕಸ್ತೂರ್‌ಬಾ ಗಾಂಧಿ ಕೃತಿಯ ಭಾಗ ನಿಯಮಿತವಾಗಿ ಬರಲಿದೆ.

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)


ಅಹಿಂಸಕ ಕ್ರಾಂತಿಯ ಯಾವತ್ತೂ ಪ್ರತಿಕ್ರಿಯೆಗಳಲ್ಲಿ ಮಹಿಳೆಯರ ಪಾತ್ರವು ತುಂಬಾ ಮಹತ್ವದ್ದಿರುತ್ತದೆ. ಆದ್ದರಿಂದಲೇ "ಅತ್ಯಂತ ಅಪಾಯವಿರುವಲ್ಲೆಲ್ಲ ನಮ್ಮ ಸರ್ವಶ್ರೇಷ್ಠ ಅಹಿಂಸಕ ಶಕ್ತಿಯೇ ಬೇಕಾಗುತ್ತದೆ. ಮತ್ತು ಅಂಥ ಅಹಿಂಸಕ ಶಕ್ತಿಯು ಭಗಿನಿಯರಲ್ಲೇ ಇರುತ್ತದೆ" ಎಂದು ಗಾಂಧಿ ಅವರು ಹೇಳುತ್ತಿದ್ದರು. ಬಾಲ್ಯದಲ್ಲಿ ಅಶಿಕ್ಷಿತಳೂ, ಅಲ್ಪವಯಸ್ಸಿನಲ್ಲಿ ವಿವಾಹಿತಳೂ ಆಗಿದ್ದು ಪರದೆಯ ಒಳಗೆ ಇರುತ್ತಿದ್ದ ಕಸ್ತೂರ್‌ಬಾ ಅವರು ಗಾಂಧಿ ಅವರ ಸಂಗಡ ಜೀವನ ಪರಿವರ್ತನೆಯ ಪ್ರಯೋಗಗಳಲ್ಲಿ ಕೂಡಿಕೊಂಡು, ನಮ್ಮ "ರಾಷ್ಟ್ರಮಾತೆ"ಯ ಸ್ಥಾನಕ್ಕೆ ಮುಟ್ಟಿದ್ದಾರೆ. ಈ ಚಿಕ್ಕ ಪುಸ್ತಕ ಓದಿ ಭಗಿನಿಯರಿಗೊಂದು ಪ್ರೇರಣೆ ಸಿಕ್ಕೀತು. ಎಂದು ನನಗೆ ವಿಶ್ವಾಸವೆನಿಸುತ್ತದೆ. ಸ್ತ್ರೀ ಜೀವನದಲ್ಲಿ ಎಷ್ಟೊಂದು ಪರಿವರ್ತನೆ ಆಗಬಲ್ಲದು, ಎಷ್ಟೊಂದು ವಿಶಾಲವಾಗಿ ಹೃದಯದ ವಿಕಾಸವಾಗಬಲ್ಲದು, ತಮ್ಮ ಕುಟುಂಬದ ನಾಲ್ಕು ಗೋಡೆಗಳ ಪರಮಿತಕ್ಷೇತ್ರದಿಂದ ಹೊರಬಿದ್ದು ದೊಡ್ಡದೊಂದು ಸಾಮಾಜಿಕ ಪರಿವಾರದ ತಾಯಿಯಾಗುವುದರಿಂದ ಜೀವನವು ಎಷ್ಟೊಂದು ಸಫಲವೂ, ಸಮೃದ್ಧವೂ ಆಗಬಲ್ಲದು ಎಂಬುದು ಇದರ ಮೇಲಿಂದ ತಿಳಿದುಬರುತ್ತದೆ. ಗಾಂಧಿ ಅವರಿಗೆ ಕಸ್ತೂರ್‌ಬಾ ಸಿಕ್ಕಿರದಿದ್ದರೆ ಇಲ್ಲವೇ ಕಸ್ತೂರ್‌ಬಾ ಅವರಿಗೆ ಗಾಂಧಿ ಅವರು ಸಿಕ್ಕಿರದಿದ್ದರೆ ಇಬ್ಬರ ಜೀವನ ವಿಕಾಸದಲ್ಲಿಯೂ ವ್ಯತ್ಯಾಸವಾಗುತ್ತಿತ್ತು. ಎಂಬುದು ನಿಸ್ಸಂಶಯ. ಅದೇ ಹೊತ್ತಿಗೆ ಇಂದು ನಮ್ಮ ನಗರಗಳಲ್ಲಿ ಹಳ್ಳಿಗಳಲ್ಲಿ ನೂರಾರು ಕಸ್ತೂರ್‌ಬಾರಂಥವರು ಅಜ್ಞಾತ ಅವಸ್ಥೆಯಲ್ಲಿ ಉಳಿದಿರಬಹುದು. ಅವರಲ್ಲಿ ತಮ್ಮ ಮಾತೃಶಕ್ತಿಯನ್ನು ವಿಶಾಲಗೊಳಿಸುವ ಶಕ್ತಿ ಇರಬಹುದು. ಆದರೆ ಸಮಾಜದ ಇಂದಿನ ಸಂಕುಚಿತ ಕಾರ್ಯಕ್ಷೇತ್ರ ಹಾಗೂ ದೃಷ್ಟಿಯಿಂದಾಗಿ ಸಮಾಜಕ್ಕೆ ಅವರ ಶಕ್ತಿಯ ಉಪಯೋಗವಾಗುತ್ತಿರಲಿಲ್ಲ ಎಂದು ಅನಿಸುತ್ತದೆ.



ಬಾಲ್ಯವಿವಾಹ, ವರದಕ್ಷಿಣೆ, ಕನ್ಯಾವಿಕ್ರಯ, ಶಾರೀರಿಕ ಶೃಂಗಾರ ಹಾಗೂ ಇನ್ನಿತರ ಪ್ರಚಲಿತ ಸಮಾಜಪ್ರಾಪ್ರ ಪದ್ಧತಿಗಳಿಂದಾಗಿ ಪ್ರತಿ ವರುಷ ಭಾರತದಲ್ಲಿ ಸಾವಿರಾರು ಹುಡುಗಿಯರು ಒತ್ತಾಯದಿಂದ ತಮ್ಮ ಇಚ್ಛೆಯ ವಿರುದ್ಧ ಒಂದು ಸಂಕುಚಿತ ಹಾಗೂ ಅನಿಷ್ಟ ಜೀವನದ ಪಾಲಾಗಿದ್ದಾರೆ. ಆದರೆ ಮುಂದೆ ಅವರು ತಮ್ಮ ಇಂಥ ದುಃಖ ಜೀವನವನ್ನು ಹೇಗೆ ಕಳೆಯಬೇಕು. ಈ ವಿಷಯದಲ್ಲಿ ತನ್ನ ಜವಾಬ್ದಾರಿ ಇದೆ ಎಂದು ಸಮಾಜವು ತಿಳಿಯುವುದೇ ಇಲ್ಲ. ಈ ಸಂಗತಿಗಳಲ್ಲಿಯೂ ಸಹ ಭಗಿನಿಯರು ಇಂಥ ಅನಿಷ್ಟ ರೂಢಿಗಳ ವಿರುದ್ಧ ಸಮಾಜದಲ್ಲಿ ಸಕ್ರಿಯ ಸಾಮೂಹಿಕ ಜಾಗೃತಿ ಉಂಟು ಮಾಡುವುದು ಅತ್ಯಂತ ಅವಶ್ಯವಿರುತ್ತದೆ.

ಮುಂದುವರಿಯುವುದು.

ಸಂಗ್ರಹ : ವಿ.ಎನ್. ತಿಪ್ಪನಗೌಡ
ಉಪಾಧ್ಯಕ್ಷರು, ಗಾಂಧಿ ಭವನ



ಅಬ್ರಹಾಂ ಲಿಂಕನ್ : (12.02.1809 – 15.04.1865)

ಅಮೇರಿಕ ಸಂಯುಕ್ತ ಸಂಸ್ಥಾನದ ಕೆಂಟಕಿಯ ಬಡ ಕುಟುಂಬದಲ್ಲಿ ಅಬ್ರಹಾಂ ಲಿಂಕನ್ ಜನಿಸಿದರು. ಗುಲಾಮಗಿರಿಯನ್ನು ಬುಡಸಹಿತ ಕಿತ್ತು ಹಾಕುವ ನಿಟ್ಟಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಅಮೇರಿಕಾದ ಅಭಿವೃದ್ಧಿಗಾಗಿ ಬ್ಯಾಂಕ್‌ಗಳು, ಕಾಲುವೆಗಳು, ರೈಲು ಮಾರ್ಗ ಹಾಗು ಕಾರ್ಖಾನೆಗಳ ನಿರ್ಮಾಣವನ್ನು ಪ್ರೋತ್ಸಾಹಿಸಿದರು. ಅಮೇರಿಕದ ಅಧ್ಯಕ್ಷರಾಗಿ ಎರಡು ಅವಧಿಯಲ್ಲಿ ಸೇವೆಸಲ್ಲಿಸಿದವರಾಗಿದ್ದಾರೆ. ಇವರು 1863ರಲ್ಲಿ ಗೆಟ್ಟಿಸ್ಬರ್ಗ್ ಅಡ್ರೆಸ್ನಲ್ಲಿ ಮಾಡಿದ ಭಾಷಣಗಳು ರಾಷ್ಟ್ರೀಯತೆ, ಪ್ರಜಾಪ್ರಭುತ್ವ, ಸಮಾನ ಹಕ್ಕುಗಳು, ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ತತ್ವಗಳಿಗೆ ಪೂರಕವಾಗಿದ್ದವು. ಲಿಂಕನ್ನರು ಮತ್ತು ರಿಪಬ್ಲಿಕನ್ ನಾಯಕರು 1865ರಲ್ಲಿ ಅಮೇರಿಕಾದ ಸಂವಿಧಾನಕ್ಕೆ ತಂದ 13ನೇ ತಿದ್ದುಪಡಿಯಿಂದ ಗುಲಾಮಗಿರಿಯ ಅಂತ್ಯವಾಯಿತು. ಆರಂಭದಿಂದಲೂ ನೈತಿಕ ನೆಲೆಗಟ್ಟಿನಲ್ಲಿ ಗುಲಾಮಗಿರಿಯನ್ನು ವಿರೋಧಿಸುತ್ತಿದ್ದ ಲಿಂಕನ್, ಸ್ಪಷ್ಟ ರಾಜಕೀಯ ನಿಲುವು ತಳೆಯುವ ಜರೂರಿತ್ತು. ಲಿಂಕನ್ ಅವರು 'ನಾನು ಪ್ರಾಣಾರ್ಪಣೆಗೆ ಸಿದ್ಧನಾಗುತ್ತೇನೆಯೇ ಹೊರತು, ವ್ಯಕ್ತಿ ಸ್ವಾತಂತ್ರ್ಯದ ಪರವಾದ ನನ್ನ ಚಿಂತನೆಗಳನ್ನು ಬಿಟ್ಟುಕೊಡುವುದಿಲ್ಲ' ಎಂದಿದ್ದರು. 1863ರ ಹೊತ್ತಿಗೆ, ಅಂತರ್ಯುದ್ಧದ ರಣತಂತ್ರದ ಭಾಗವಾಗಿ, ಸಂವಿಧಾನದ ಅನ್ವಯ ಪಡೆದಿದ್ದ ಪರಮಾಧಿಕಾರದಿಂದ ಗುಲಾಮಗಿರಿಯನ್ನು ಸಂಪೂರ್ಣವಾಗಿ ಅಳಿಸಿ ಹಾಕುವ ಐತಿಹಾಸಿಕ 'ಗುಲಾಮಗಿರಿ ವಿಮೋಚನಾ ಮಸೂದೆ'ಯನ್ನು ಸಂಸತ್ತಿನಲ್ಲಿ ಮಂಡಿಸಿದರು. "ಈ ಮಸೂದೆ ಅಸಂಖ್ಯ ಗುಲಾಮರ ಭವಿಷ್ಯವನ್ನಷ್ಟೇ ಅಲ್ಲ, ಮುಂದಿನ ಪೀಳಿಗೆಯ ಭವಿಷ್ಯವನ್ನೂ ನಿರ್ಧರಿಸುತ್ತದೆ" ಎಂದು ಮಸೂದೆ ಸಹಮತದಿಂದ ಅಂಗೀಕಾರವಾಯಿತು. ಲಿಂಕನ್ ಅವರ ಈ ದಿಟ್ಟ ನಿಲುವಿನಿಂದ ಗುಲಾಮಗಿರಿ ಅಂತ್ಯವಾಯಿತು. ಇದರಿಂದ ಸುಮಾರು 40 ಲಕ್ಷ ಮಂದಿ ಗುಲಾಮಗಿರಿಯಿಂದ ಮುಕ್ತರಾದರು. ಅವರೆಲ್ಲರ ಪ್ರೀತಿ ಲಿಂಕನ್ ಪಾಲಾಯಿತು. ಜೊತೆಗೆ ಕೆಲವರ ದ್ವೇಷವನ್ನೂ ಲಿಂಕನ್ ಕಟ್ಟಿಕೊಂಡರು. 1865, ಏಪ್ರಿಲ್ 14ರ ಸಂಜೆ ಲಿಂಕನ್‌ರಿಗೆ ಜಾನ್‌ವಿಲ್ಕೆಸ್ ಬೂತ್ ಗುಂಡಿಟ್ಟನು. ಈ ದುಃಖದಾಯಕ ಸುದ್ದಿಯನ್ನು ಪ್ರಕಟಿಸುತ್ತಾ, ಲಂಡನ್ ಟೈಮ್ಸ್ ಪತ್ರಿಕೆ 'ವಿದ್ಯಾರ್ಹತೆ, ಮೈಕಟ್ಟು, ನಾಜೂಕುಗಳಷ್ಟೇ ನಾಯಕತ್ವವನ್ನು ಅಳೆಯುವ ಮಾನದಂಡಗಳಲ್ಲ. ಜನರ ಹಿತಕ್ಕಾಗಿ ಕಠಿಣ ನಿರ್ಧಾರಗಳನ್ನು ತಳೆಯಬಲ್ಲವನು ಮಾತ್ರ ಮಹಾನ್ ನಾಯಕನಾಗುತ್ತಾನೆ, ಇತಿಹಾಸದಲ್ಲಿ ಖಾಯಂ ಸ್ಥಾನ ಪಡೆಯುತ್ತಾನೆ' ಎಂದು ಬರೆಯಿತು.

ಸಂಗ್ರಹ : ಅಖಿಲಾ ವಿದ್ಯಾಸಂದ್ರ

ನೇತಾಜಿ ಸುಭಾಷ್ ಚಂದ್ರ ಬೋಸ್ : 125 : (ಜನವರಿ 23, 1897)

ಪ್ರೊ. ಲೀಲಾ ವಾಸುದೇವ್

ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಮ್ಮದೇ ಧ್ಯೇಯ, ದಿಟ್ಟ ಮನೋಭಾವದಿಂದ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ವಿಶಿಷ್ಟ ಛಾಪು ಮೂಡಿಸಿ, ಭಾರತೀಯರನ್ನು ಬ್ರಿಟಿಷರ ವಿರುದ್ಧ ಒಗ್ಗೂಡಿಸಿ ಶ್ರಮಿಸಿದ ಜೈ ಹಿಂದ್ ಘೋಷಣೆಯ ರೂವಾರಿ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರನ್ನು ಗಾಂಧಿ ಭವನ ಗೌರವಪೂರ್ವಕವಾಗಿ ಸ್ಮರಿಸುತ್ತದೆ.

ನೇತಾಜಿ ಎಂದೇ ಪ್ರಸಿದ್ಧರಾದ ಸ್ವಾತಂತ್ರ್ಯ ಸಂಗ್ರಾಮದ ಪ್ರಮುಖ ಜನನಾಯಕ ಸುಭಾಷ್‌ಚಂದ್ರ ಬೋಸ್ ಅವರು 1897ರ ಜನವರಿ 23ರಂದು ಒಡಿಶಾದ ಕಟಕ್‌ನಲ್ಲಿ ಜನಿಸಿದರು. ತಂದೆ ಜಾನಕೀನಾಥ ಬೋಸ್, ತಾಯಿ ಪ್ರಭಾವತಿ. ಸ್ವಾಮಿ ವಿವೇಕಾನಂದರ ವಿಚಾರಗಳಿಂದ ಪ್ರಭಾವಿತರಾದ ಇವರು ಭಾರತ ಸ್ವಾತಂತ್ರ ಹೋರಾಟದಲ್ಲಿ ವಿಶಿಷ್ಟ ಪಾತ್ರವಹಿಸಿದರು. ಬ್ರಿಟಿಷರ ವಿರುದ್ಧ ಹೋರಾಡಲು ಜರ್ಮನಿ, ಜಪಾನ್, ರಷ್ಯಾಗಳಂತಹ ದೇಶಗಳ ಸಹಾಯ ಪಡೆಯಲು ಶ್ರಮಿಸಿದರು. ತತ್ವಶಾಸ್ತ್ರದಲ್ಲಿ ಬಿ.ಎ. ಪದವಿ, ನಂತರ ಇಂಗ್ಲೆಂಡಿನಲ್ಲಿ ಐ.ಸಿ.ಎಸ್‌ನಲ್ಲಿ 4ನೇ ಸ್ಥಾನ ಪಡೆದರು. ವಿದೇಶೀ ನೌಕರಿ ಒಲ್ಲೆ ಎಂದು ಗಳಿಸಿದ್ದ ಐ.ಸಿ.ಎಸ್. ಪದವಿಯನ್ನು ಬ್ರಿಟಿಷ್ ಸರ್ಕಾರದ ಭಾರತ ವ್ಯವಹಾರ ಸಚಿವ ಎಡ್ವಿನ್ ಮಾಂಟೆಗುಗೆ ಪತ್ರವೊಂದನ್ನು ಬರೆದು ಮರಳಿಸಿದ್ದರು ಬೋಸ್. ಮುಂಬಯಿಗೆ ಮರಳಿದ ಬೋಸ್ ಅವರು ಗಾಂಧೀಜಿ ಅವರನ್ನು ಭೇಟಿ ಮಾಡಿದರು. ನಂತರ ಚಿತ್ತರಂಜನ್‌ದಾಸ್‌ರ ಮಾರ್ಗದರ್ಶನದಲ್ಲಿ ಯುವ ಸಂಘಟನೆಯಲ್ಲಿ ತೊಡಗಿದರು. ರಾಷ್ಟ್ರ ನಿರ್ಮಾಣದ ಜವಾಬ್ದಾರಿಯಲ್ಲಿ, ರಾಷ್ಟ್ರಹಿತಕ್ಕೆ ಧಕ್ಕೆಯಾಗುವ ವಿಷಯಗಳಲ್ಲಿ ದುರ್ಬಲ ನೀತಿ ಹೊಂದಿರಬಾರದೆಂಬುದು ಸುಭಾಷ್‌ರ ದಿಟ್ಟ ನಿಲುವಾಗಿತ್ತು. ಆಸ್ಟ್ರಿಯಾ, ಇಂಗ್ಲೆಂಡ್, ಜರ್ಮನಿ, ಜಪಾನ್ ಸೇರಿದಂತೆ ಹತ್ತಾರು ರಾಷ್ಟ್ರಗಳಲ್ಲಿ ಮಿಂಚಿನ ಓಡಾಟ ನಡೆಸಿ ಭಾರತದ ಸ್ವರಾಜ್ಯ ಹೋರಾಟದ ದನಿಗೆ ತೀವ್ರತೆ ತಂದಿದ್ದರು ಬೋಸರು.

ತಾನು ನಂಬಿದ್ದ ಕ್ರಾಂತಿಪಥದಲ್ಲಿ ಎಂದೂ ರಾಜಿಮಾಡಿಕೊಂಡವರಲ್ಲ. ಶೀಘ್ರ ಸ್ವಾತಂತ್ರ್ಯಪ್ರಾಪ್ತಿಗಾಗಿ ಶ್ರಮಿಸಬೇಕಾದ ತ್ವರಿತ ಸಿದ್ಧತೆಗಳ ಕುರಿತು ಬೋಸ್‌ರವರು ಮೊದಲಬಾರಿಗೆ ಬಹಿರಂಗವಾಗಿ ಎಚ್ಚರಿಸಿದರೂ ಮಂದಗಾಮಿಗಳಿಗೆ ಕೇಳಿಸಲಿಲ್ಲ. ಈ ಪರಿಗೆ ಬೇಸತ್ತು ಚಿತ್ತರಂಜನ್‌ದಾಸ್‌ರೊಂದಿಗೆ 'ಸ್ವರಾಜ್ಯಪಕ್ಷ ಸ್ಥಾಪನೆ. ಬೋಸ್‌ರು ದಾಸ್‌ರ ಜೊತೆಗೇ ಚಟುವಟಿಕೆಗಳಲ್ಲಿ ಭಾಗಿಯಾದರು. ಹತ್ತಾರು ಚಳುವಳಿಯ ನೇತೃತ್ವ, ಅಖಿಲಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ಅಧ್ಯಕ್ಷರಾಗಿ ಆಯ್ಕೆ. ಯೂರೋಪಿನಲ್ಲಿ ಭಾರತದ ಸ್ವಾತಂತ್ರ್ಯ ಹೋರಾಟಪರ ಅಭಿಯಾನ. ಇಂಗ್ಲೆಂಡ್, ಆಸ್ಟ್ರಿಯಾ, ಇಟಲಿ ವಿಯೆನ್ನಾಗಳ ಭೇಟಿ, ತ್ವರಿತಗತಿಯ ಪ್ರವಾಸ, ಮಿಂಚಿನ ಓಡಾಟ. ಸ್ವಿಟ್ಜರ್ಲೆಂಡ್, ಚೆಕೋಸ್ಲೋವಾಕಿಯಾ, ಪೋಲೆಂಡ್, ಜರ್ಮನಿಗಳಲ್ಲಿ ಭಾರತದ ಪರ ಪ್ರಚಾರ. ಇಟಲಿ ಪ್ರಧಾನಿ ಬೆನಿತೋ ಮುಸ್ಸೋಲಿನಿ ಜತೆ ಚರ್ಚೆ. 1936 ಏಪ್ರಿಲ್ 8ರಂದು ಮರಳಿ ಭಾರತಕ್ಕೆ ಬಂದಾಕ್ಷಣವೇ ಅವರ ಬಂಧನವಾಯಿತು. ಹರಿಪುರದಲ್ಲಿ ನಡೆದ ಕಾಂಗ್ರೆಸ್‌ನ ಅಖಿಲ ಭಾರತ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದರು. ವಿದೇಶಗಳ ಓಡಾಟದಿಂದ ಪಡೆದ ರಾಜಕೀಯ ಅನುಭವದಿಂದ ಬ್ರಿಟಿಷರ ಒಡೆದು ಆಳುವ ನೀತಿ ಕುರಿತು 1938ರ ಫೆಬ್ರವರಿ 19ರ ಐತಿಹಾಸಿಕ ಭಾಷಣದಲ್ಲಿ ಬ್ರಿಟಿಷರ ತಂತ್ರದ ಸೂಚನೆಗಳನ್ನು ಮಂಡಿಸಿದ್ದರು. ಮುಂದಿನ 9 ವರ್ಷದಲ್ಲೇ ಬೋಸ್‌ರ ಭವಿಷ್ಯವಾಣಿ. ಸತ್ಯವಾಯಿತು ಕಾಬೂಲ್ ಮೂಲಕ ಬರ್ಲಿನ್ ಸೇರಿದ ಬೋಸ್‌ರಿಂದ ಸೈನಿಕ ಕಾರ್ಯಾಚರಣೆ. 'ಫ್ರೀ ಇಂಡಿಯಾ ಸೆಂಟರ್' 1941, ನವೆಂಬರ್ 2ರಲ್ಲಿ ಉದ್ಘಾಟನೆ, 'ಆಜಾದ್ ಹಿಂದ್' ಲಾಂಛನ, 'ಜೈಹಿಂದ್' ಘೋಷಣೆ, ಬೋಸರಿಗೆ 'ನೇತಾಜಿ' ಬಿರುದು. ಜರ್ಮನ್ ಸೇನಾ ಕೇಂದ್ರಗಳಿಗೆ ಸೈನಿಕ ತರಬೇತಿ, ಬರ್ಲಿನ್ ರೇಡಿಯೋದಲ್ಲಿ ಆಗಾಗ ಭಾಷಣ, ಹಿಟ್ಲರ್ ಜತೆ ಭೇಟಿ. ಜಪಾನ್‌ಗೆ ತೆರಳಿ ಅಲ್ಲಿಂದ ಪೂರ್ವಾಂಚಲ ಭಾರತದ ಗಡಿಗಳಲ್ಲಿ ಸೈನ್ಯ ಸಜ್ಜು ಮಾಡಲು ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್ ಮೂಲಕ ಅವಿರತವಾಗಿ ಶ್ರಮಿಸಿದರು.



ಬಲಿಷ್ಠಗೊಂಡ ಆಜಾದ್ ಹಿಂದ್ ಸೇನೆಗೆ ನಿವೃತ್ತ ಯುದ್ಧ ಕೈದಿಗಳು ದೌಡಾಯಿಸುತ್ತಿದ್ದರು. ನಂತರದ ದಿನಗಳಲ್ಲಿ ಪಕ್ವ ಸೈನ್ಯವಾಗಿ ರೂಪುಗೊಂಡಿದ್ದೇ (ಐ.ಎನ್.ಎ). ಪಾದರಸದಂತೆ ಪೂರ್ವ ಏಷ್ಯಾ ರಾಷ್ಟ್ರಗಳಲ್ಲಿ ಓಡಾಡಿ ಸ್ವರಾಜ್ಯ ಹೋರಾಟಕ್ಕೆ ಅಗಾಧ ಬೆಂಬಲ ಪಡೆದರು. ಬೋಸ್‌ರಿಂದ ಆರ್ಜೀ–ಹುಕುಮಂತ್–ಎ–ಆಜಾದ್ ಹಿಂದ್ (ಸ್ವತಂತ್ರ ಭಾರತದ ಹಂಗಾಮಿ ಸರ್ಕಾರ) ಸ್ಥಾಪನೆಯಾಯಿತು. ಅವರೇ ಐಎನ್‌ಎಯ ಕಮಾಂಡರ್ ಇನ್ ಚೀಫ್ ಆಗಿದ್ದರು. ಆದರೆ ದುರಂತವೆಂದರೆ 1945ರ ಆಗಸ್ಟ್ 18ರಂದು ದಕ್ಷಿಣ ವಿಯೆಟ್ನಾಂನ ಸೈಗಾನ್‌ನಲ್ಲಿ ವಿಮಾನಹತ್ತಿದ ಸುಭಾಷ್, ವಿಮಾನ ಸ್ಫೋಟದಿಂದಾಗಿ ನಿಧನರಾದರು ಎಂಬ ಸುದ್ದಿ ಹರಡಿತ್ತು. ಈ ವಿಷಯದಲ್ಲಿ ಸ್ಪಷ್ಟಗೊಳ್ಳದ ಅನೇಕ ವಿವಾದಗಳು ಇಂದಿಗೂ ಇವೆ. ಅನ್ವೇಷಣಾ ಸಮಿತಿ ನೇಮಿಸಿದರೂ, ಸಾವನ್ನೊಪ್ಪದ ಅನೇಕ ಮಂದಿ ಬಹಳವರ್ಷ ನೇತಾಜಿ ಬದುಕಿದ್ದಾರೆಂದೇ, ತಿಳಿದಿದ್ದರು. ಇವರ ನಿಧನ ಇಂದಿಗೂ ನೇರವಾಗಿ, ಸಹಜವಾಗಿ, ಒಪ್ಪಲಾಗದಂಥ ಸ್ಪಷ್ಟ ಆಧಾರವಿಲ್ಲದ ಘಟನೆಯಾಗಿದೆ. ಬೋಸರು ಆಗಾಗ ಹೇಳುತ್ತಿದ್ದರು "ನೀವು ನಿಮ್ಮ ರಕ್ತ ಕೊಡಿ ನಾನು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತೇನೆ" ಸ್ವಾತಂತ್ರ್ಯವೆಂಬುದು ಯಾರೂ ಕೊಡುವಂಥ ಸರಕಲ್ಲ ಅದು ನಾವು ಪಡೆದುಕೊಳ್ಳಬೇಕಾದದ್ದು" ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ನೇತಾಜಿ ಅವರು ಭಾರತೀಯ ರಾಷ್ಟ್ರೀಯ ಸೇನೆಯನ್ನು ಸ್ಥಾಪಿಸಿದ್ದರು. ಇದು ಸ್ವತಂತ್ರ ಭಾರತದಲ್ಲಿ ವಾಯು, ಜಲ ಮತ್ತು ಪದಾತಿ ಸೈನಿಕದಳಗಳನ್ನು ರಚಿಸಲು ಬುನಾದಿಯಾಯಿತು.

ಕರ್ನಾಟಕ ಕಟ್ಟಿದ ಕೃಷ್ಣರಾಜ

ಇಂದಿರಾ ಕೃಷ್ಣಪ್ಪ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)



ಮಹಿಳಾಭಿವೃದ್ಧಿ

ಶ್ರೀ ಕೃಷ್ಣರಾಜ ಒಡೆಯರ್ ಅವರು ಮೈಸೂರು ಪ್ರಾಂತ್ಯದ ಮುಜರಾಯಿ ದೇವಸ್ಥಾನಗಳಲ್ಲಿದ್ದ "ಗೆಜ್ಜೆಪೂಜೆ" - ಪದ್ಧತಿಯನ್ನು ನಿಷೇಧಿಸಿ ಸರ್ಕಾರಿ ಆಜ್ಞೆ ಹೊರಡಿಸಿದರು. ಹಾಗೂ ದೇವಾಲಯುಗಳಲ್ಲಿನ ನರ್ತನ ಪದ್ಧತಿ, ದೇವದಾಸಿ ಪದ್ಧತಿ ಹಾಗು ದೇವದಾಸಿಯರಿಗೆ ಜಮೀನು ಇನಾಂ ಕೊಡುವ ಪದ್ಧತಿಗಳನ್ನು ನಿಷೇಧಿಸಿದರು. ಹಿಂದೂ ಮಹಿಳೆಯರಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಹಕ್ಕು ಕಾಯ್ದೆ 1938ನ್ನೂ, ಕಾರ್ಖಾನೆಗಳಲ್ಲಿ ದುಡಿಯುವ ಮಹಿಳೆಯರಿಗಾಗಿ, "ದಿ ಮೈಸೂರು ಮೆಟರ್ನಿಟಿ ಬೆನಿಫಿಟ್ ಆಕ್ಟ್ - 1937ನ್ನೂ, ವಿಧವಾ ವಿವಾಹ ಕಾನೂನು - 1938ನ್ನೂ ಜಾರಿಗೆ ತಂದರು ಶಾಲೆಗಳಲ್ಲಿ ಹೆಣ್ಣು ಮಕ್ಕಳಿಗಾಗಿ ಪ್ರತ್ಯೇಕ ವಿಭಾಗ, ಪ್ರತ್ಯೇಕ ಶಾಲೆಗಳನ್ನು, ಶೌಚಾಲಯಗಳನ್ನು ನಿರ್ಮಿಸಲು ಕ್ರಮ ವಹಿಸಿದ್ದರು.

ಶೈಕ್ಷಣಾಭಿವೃದ್ಧಿ


ಒಡೆಯರ್ ಅವರು 1913ರಲ್ಲಿ ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾಯ್ದೆ ಜಾರಿಗೊಳಿಸಿದ್ದರು.ಮಾಧ್ಯಮಿಕ ಶಾಲಾ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ, ದ್ವಿಭಾಷಾ ಸೂತ್ರ ಅಳವಡಿಸಿದ್ದರು. ಬೆಂಗಳೂರಿನಲ್ಲಿ, ವಾಣಿಜ್ಯ ಶಾಲೆ, ಕೃಷಿ ವಿಶ್ವವಿದ್ಯಾಲಯ, ಸೆಂಟ್ರಲ್ ಕಾಲೇಜು, ಮೈಸೂರಿನಲ್ಲಿ ಮೈಸೂರು ವಿಶ್ವವಿದ್ಯಾಲಯ, ಪಾಲಿಟೆಕ್ನಿಕ್, ಅಂಧ ಮತ್ತು ಮೂಗ ಮಕ್ಕಳಿಗೆ ಶಾಲೆ, ಮಹಾರಾಜ ಕಾಲೇಜು, ಮಹಾರಾಣಿ ಕಾಲೇಜು, ವೈದ್ಯಕೀಯ ಕಾಲೇಜು, ರೇಷ್ಮೆ ಕೈಗಾರಿಕಾ ಕಾಲೇಜು, ಕೈಗಾರಿಕಾ ತರಬೇತಿ ಶಾಲೆಗಳನ್ನು, ಸಂಸ್ಕೃತ ಕಾಲೇಜು, ವೃತ್ತಿ ಶಿಕ್ಷಣ ಶಾಲೆಗಳನ್ನು ಪ್ರಾರಂಭಿಸಿದರು. ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷಾ ಕ್ರಮ, ವಿದೇಶ ವ್ಯಾಸಂಗಕ್ಕಾಗಿ ಸಹಾಯ ಧನ, ಇತ್ಯಾದಿ, ನೂತನ ಯೋಜನೆಗಳನ್ನೂ ಆರಂಭಿಸಿದರು. ಮೈಸೂರು ವಿಶ್ವವಿದ್ಯಾಲಯದಲ್ಲಿ ನಡೆದ ಪ್ರಥಮ ಘಟಿಕೋತ್ಸವದಲ್ಲಿ ಪಾಲ್ಗೊಂಡು ಮಾತನಾಡುತ್ತಾ "ಇಂದು ನಮ್ಮೊಂದಿಗೆ ಮಹಿಳಾ ಪಧವೀಧರರೊಬ್ಬರಿಲ್ಲ, ಹತ್ತು ಹೆಣ್ಣು ಮಕ್ಕಳಾದರೂ ಪದವೀಧರರಾಗಬೇಕಿತ್ತೆಂಬುದು ನಮ್ಮ ಆಶಯ. ನಮ್ಮ ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿ ಪದವೀಧರ ಉಪಾಧ್ಯಾಯಿನಿಯರಿರಬೇಕೆಂಬುದು ನಮ್ಮ ಆಕಾಂಕ್ಷೆ" ಎಂದಿದ್ದರು. ಮುಂದುವರೆದು ಪದವೀಧರರಿಗೆ ಪದವಿ ಪ್ರಧಾನ ಮಾಡುತ್ತಾ "ಮೈಸೂರು ರಾಜ್ಯದ ಅಭಿವೃದ್ಧಿಗೆ ನೀವು ಹೊಣೆಗಾರರು. ನೀವು ಉತ್ತಮ ಪದವಿಗಳಿಸಿ, ಚೆನ್ನಾಗಿ ಹಣ ಸಂಪಾದಿಸಿದರೆ ಮಾತ್ರ ಸಾಲದು. ನೀವು ನಿಮಗಿಂತಲೂ ಕೆಳಗಿರುವ ಜನರನ್ನು ಕೈಹಿಡಿದೆತ್ತುವ ಕೆಲಸ ಮಾಡಬೇಕು" ಎಂದಿದ್ದರು. ಈ ಮಾತುಗಳು ಇಂದಿನ ಅಧಿಕಾರಸ್ಥರಿಗೂ, ವಿದ್ಯಾವಂತರಿಗೂ ಮಾರ್ಗ ಸೂಚಕವಾಗಿದೆ. ಸ್ವಾಮಿ ವಿವೇಕಾನಂದರ ಸಲಹೆಯಂತೆ ಬೆಂಗಳೂರಿನಲ್ಲಿ ಟಾಟಾ ಇನ್ಸ್ಟಿಟ್ಯೂಟ್ ಸ್ಥಾಪಿಸಲು ಉಚಿತ ಸ್ಥಳಾವಕಾಶ ಹಾಗೂ ಐದು ಲಕ್ಷ ಸಹಾಯಧನ ತಕ್ಷಣ ಬಿಡುಗಡೆ ಮಾಡಿದ್ದರು.

ಕೃಷಿ, ಕೈಗಾರಿಕೆ ಮತ್ತು ನೀರಾವರಿ ಯೋಜನೆಗಳು

ಕೃಷಿ ಮತ್ತು ರೇಷ್ಮೆ ಅಭಿವೃದ್ಧಿಗಾಗಿ ಪ್ರತ್ಯೇಕ ಇಲಾಖೆಗಳನ್ನು ಆರಂಭಿಸಿ ಕೃಷಿಗೆ ಆದ್ಯತೆ ಒದಗಿಸಿದರು. ಇಂದು ಪ್ರಖ್ಯಾತವಾಗಿರುವ "ಮೈಸೂರು ರೇಷ್ಮೆ ಸೀರೆ"ಗೆ, ಅಂದು ನಾಲ್ವಡಿಯವರು ರೇಷ್ಮೆ ತಜ್ಞರನ್ನು ಇಟಲಿಯಿಂದ ಕರೆಯಿಸಿ, ರೇಷ್ಮೆ ಕೃಷಿಗೆ ಆದ್ಯತೆ, ಧನ ಸಹಾಯ, ಉತ್ತೇಜನ ನೀಡಿದ್ದು ಪ್ರಮುಖ ಕಾರಣವಾಗಿದೆ. ಕೆರೆಕಟ್ಟೆಗಳ ಮೇಲ್ವಿಚಾರಣೆಗಾಗಿ ಟ್ಯಾಂಕ್ ಪಂಚಾಯತ್ ಆಕ್ಟ್‌ನ್ನು 1911ರಲ್ಲಿ ಜಾರಿಗೆ ತಂದರು. ಕಬ್ಬು ಬೆಳೆಗೆ ನೀಡಿದ ಪ್ರೋತ್ಸಾಹದಿಂದ ಮಂಡ್ಯದಲ್ಲಿ ಸಕ್ಕರೆ ಕಾರ್ಖಾನೆ ಸ್ಥಾಪನೆಗೆ ಕಾರಣವಾಯಿತು. ಮೈಸೂರು ಸ್ಯಾಂಡಲ್ ಸೋಪು ಕಾರ್ಖಾನೆ ಸ್ಥಾಪಿಸಿದರು. ಕೃಷಿಕರಿಗೆ ಸುಲಭ ಸಾಲ ಯೋಜನೆಗಾಗಿ ಸಹಕಾರ ಸಂಘಗಳು, ಅಪೆಕ್ಸ್ ಬ್ಯಾಂಕ್, ಭೂ ಅಭಿವೃದ್ಧಿ ಬ್ಯಾಂಕ್‌ಗಳು ಆರಂಭವಾದವು. "ಮೈಸೂರು ಅಗ್ರಿಕಲ್ಚರ್ ಅಂಡ್ ಎಕ್ಸ್‌ಪೆರಿಮೆಂಟಲ್ ಯೂನಿಯನ್" ಎಂಬ ತ್ರೈಮಾಸಿಕ ಪತ್ರಿಕೆಯನ್ನೂ ಪ್ರಕಟಿಸಲಾಗುತ್ತಿತ್ತು. ಒಡೆಯರ್ ಅವರು ಕಟ್ಟಿಸಿದ ಕೆ.ಆರ್.ಎಸ್. ಅಣೆಕಟ್ಟು, ಹಾಗೂ ಬೃಂದಾವನ ಮೈಸೂರಿನ ಪ್ರಖ್ಯಾತಿಗೆ ಕಾರಣವಾಗಿದೆ. ಕನ್ನಾಂಬಾಡಿ ಅಣೆಕಟ್ಟು, ಮಾರ್ಕೋನಹಳ್ಳಿ, ಅಂಜನಾಪುರ, ಗೋಪಾಲ ತಿಪ್ಪಗೊಂಡನಹಳ್ಳಿ ಜಲಾಶಯಗಳನ್ನು ನಿರ್ಮಾಣ ಮಾಡುವುದರ ಮೂಲಕ ಸಾವಿರಾರು ಹೆಕ್ಟೇರುಗಳ ವ್ಯವಸಾಯಕ್ಕೆ ನೀರಾವರಿ ಮೂಲವನ್ನು ಒದಗಿಸಿಕೊಟ್ಟರು. ಬರಪರಿಹಾರ ನಿಧಿ, ಬರಪರಿಹಾರ ಯೋಜನೆಗಳನ್ನು 1908 - 1909ರಲ್ಲೆ ಜಾರಿಗೊಳಿಸಿದ್ದರು. ಭದ್ರಾವತಿಯಲ್ಲಿ ಮೈಸೂರು ಪೇಪರ್ ಮಿಲ್ಸ್ ಹಾಗೂ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ, ಬೆಂಗಳೂರಿನಲ್ಲಿ ಸಾಬೂನು ಮತ್ತು ಗಂಧದ ಎಣ್ಣೆ ಕಾರ್ಖಾನೆಗಳು, ಸಿಮೆಂಟ್ ಕಾರ್ಖಾನೆಗಳು, ವಿಮಾನ ತಯಾರಿಕಾ ಕಾರ್ಖಾನೆ ಇವರ ಆಡಳಿತಾವಧಿಯಲ್ಲಿ ಸ್ಥಾಪಿತವಾದವು. ಇದರೊಂದಿಗೆ ಖಾಸಗಿ ಕೈಗಾರಿಕೆಗಳೂ ಬೆಳೆಯಲಾರಂಭಿಸಿದವು. ವ್ಯವಸಾಯ ವಾಣಿಜ್ಯ ಕ್ಷೇತ್ರದಲ್ಲಿ ವ್ಯವಹರಿಸಲು, ಲಂಡನ್‌ನಲ್ಲಿ "ಟ್ರೇಡ್ ಕಮೀಷನರ್" ಹುದ್ದೆಯನ್ನು ಸೃಜಿಸಿ ಅಧಿಕಾರಿಯನ್ನು ನೇಮಿಸಿದರು. ಮೈಸೂರಿನಲ್ಲಿ ಪ್ರತಿ ವರ್ಷ ನಡೆಯುವ ದಸರಾ ವಸ್ತು ಪ್ರದರ್ಶನ ವಿಶ್ವವಿಖ್ಯಾತವಾದುದಾಗಿದೆ. ಇದೇ ರೀತಿ ಲಂಡನ್‌ನಲ್ಲಿಯೂ 1924ರಲ್ಲಿ ವಸ್ತು ಪ್ರದರ್ಶನವನ್ನು ಒಡೆಯರ್ ಅವರು ಏರ್ಪಡಿಸಿದ್ದರು. ಇಲ್ಲಿನ ವಸ್ತು ಪ್ರದರ್ಶನ ವ್ಯವಸ್ಥೆಗೆ ಹಾಗು ವಸ್ತುಗಳಿಗೆ ಪಾರಿತೋಷಕಗಳು, ಪ್ರಶಸ್ತಿಗಳು ದೊರಕಿದ್ದವು.

ಮುಂದುವರಿಯುವುದು...

ಸೌಜನ್ಯ : ಕ.ಆ.ಸೇ. ಸಂಘದ
2013-14ರ 'ಅನುಷ್ಠಾನ' ಸಂಚಿಕೆ



ಮಹಾತ್ಮ ಗಾಂಧಿ ಮತ್ತು ಆಧ್ಯಾತ್ಮಿಕ ರಾಜಕಾರಣ

ಡಾ. ವೂಡೇ ಪಿ. ಕೃಷ್ಣ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಆಧ್ಯಾತ್ಮೀಕರಣ

ಸಕಲರ ಕಲ್ಯಾಣವನ್ನೂ ಒಳಗೊಂಡಿದ್ದ ಸರ್ವೋದಯ ತತ್ವದ ಬಗ್ಗೆ ಗಾಢ ಆಸಕ್ತಿ ಹೊಂದಿದ್ದ ಅವರು, ಅದರ ಮೂರು ಪ್ರಾಥಮಿಕ ಅಂಶಗಳನ್ನು ಹೀಗೆ ಹೇಳಿದ್ದಾರೆ.

* ಸಮಷ್ಟಿಯ (ಎಲ್ಲರ) ಒಳಿತಿನಲ್ಲೇ ವ್ಯಷ್ಟಿಯ (ಒಬ್ಬ ವ್ಯಕ್ತಿಯ) ಒಳಿತು ಅಡಗಿದೆ.
* ತಮ್ಮ ಕಾಯಕದಿಂದ ತಮ್ಮ ಜೀವನೋಪಾಯಕ್ಕೆ ಬೇಕಿರುವಷ್ಟು ಸಂಪಾದನೆ ಮಾಡುವ ಹಕ್ಕು ಎಲ್ಲರಿಗೂ ಇದೆ.
* ಕಾಯಕದ ಶ್ರಮದಿಂದ ಕೂಡಿರುವ ಜೀವನವೇ ಶ್ರೇಷ್ಠ.

ಗಾಂಧೀಜಿ ಅವರು ಹಲವು ಮತಧರ್ಮಗಳ ಸೌಹಾರ್ದದಲ್ಲಿ ನಂಬಿಕೆ ಇಟ್ಟುಕೊಂಡಿದ್ದರು. ಹೀಗಾಗಿ, ಅವರು ಸಕಲರನ್ನೂ ಒಂದೇ ದೃಷ್ಟಿಯಿಂದ ಕಾಣುತ್ತಿದ್ದರು. ಅವರ ಪ್ರಕಾರ, ಕೋಮುಗಲಭೆಗಳು ಹೇಡಿಗಳು ಮಾಡುವ ಕೆಲಸವಾಗಿತ್ತು. ಅಲ್ಲದೆ, ಯಾವ ಧರ್ಮದಲ್ಲೂ ಗೂಂಡಾಗಿರಿಗೆ ಆಸ್ಪದವಿಲ್ಲ ಎಂದು ಹೇಳುತ್ತಿದ್ದ ಅವರು, ಪ್ರತೀ ಧರ್ಮವನ್ನೂ ಗೌರವಿಸಬೇಕೆಂಬ ನಂಬಿಕೆಯನ್ನು ರೂಢಿಸಿಕೊಂಡಿದ್ದರು. ಅವರ ಪ್ರಕಾರ, ಮತಧರ್ಮಗಳ ಹೆಸರಿನ ಸಂಕುಚಿತವಾದಕ್ಕಿಂತ ದೇಶವನ್ನು ಪ್ರೀತಿಸುವ ರಾಷ್ಟ್ರೀಯತೆ ಮುಖ್ಯವಾಗಿತ್ತು. ಹೀಗಾಗಿ ಅವರು, "ಮೊದಲಿಗೆ ನಾವೆಲ್ಲರೂ ಭಾರತೀಯರು; ಆಮೇಲಷ್ಟೆ ಹಿಂದೂಗಳು, ಮುಸ್ಲಿಮರು," ಎಂದು ಪ್ರತಿಪಾದಿಸುತ್ತಿದ್ದರು. ಅವರು, ಅಲ್ಪಸಂಖ್ಯಾತರು ಕೂಡ ಸುರಕ್ಷಿತವಾಗಿ ಬದುಕುವಂಥ ಸಮಾನ ಪೌರತ್ವದ ಕಲ್ಪನೆಯನ್ನು ನಮಗೆ ನೀಡಿದ್ದಾರೆ. ಗಾಂಧೀಜಿ ಅವರು ನಡೆಸುತ್ತಿದ್ದ ಪ್ರತಿಯೊಂದು ರಾಜಕೀಯ ಸಭೆಯಲ್ಲೂ ಆಶ್ರಮದ ಭಜನೆ ನಡೆಯುತ್ತಿತ್ತು. ಈ ಭಜನೆಗಳು 'ಸಬ್ ಕೋ ಸನ್ಮತಿ ದೇ ಭಗವಾನ್' ಎನ್ನುವ ಉದಾತ್ತ ಆಲೋಚನೆಯಿಂದ ಕೂಡಿರುತ್ತಿದ್ದವು.

ಸಬ್ ಕೋ ಸನ್ಮತಿ

ಗಾಂಧೀಜಿ ಅವರು, ಸಾಧಿಸಲು ತುಂಬಾ ಕಷ್ಟಕರವಾದ, ಆದರೆ ತಾವು ಮಾತ್ರ ಯಶಸ್ವಿಯಾಗಿ ಮಾಡಿ ತೋರಿಸಿದ ಐದು ಅಂಶಗಳಿಗೆ ಜಗತ್ತಿನೆಲ್ಲೆಡೆ ಮನೆಮಾತಾಗಿದ್ದಾರೆ. ಅವು ಯಾವುವೆಂದರೆ–

* ದ್ವೇಷಕ್ಕೆ ಪ್ರತಿಯಾಗಿ ಪ್ರೀತಿಯನ್ನು ತೋರಿಸುವುದು.
* ಈ ಸಮಾಜವು ಯಾರನ್ನು ಹೊರಗಿಟ್ಟಿದೆಯೋ ಅವರನ್ನು ಸೇರಿಸಿಕೊಳ್ಳುವುದು.
* ಬೇರೆ ಯಾರಾದರೂ ತಪ್ಪು ಮಾಡಿದರೆ ಅದನ್ನು ಉದಾರವಾಗಿ ಮರೆತುಬಿಡುವುದು.
* ನಾವು ಮಾಡಿದ ತಪ್ಪನ್ನು ಒಪ್ಪಿಕೊಳ್ಳುವುದು.
* ಡಾಂಭಿಕತೆಯನ್ನು ಬಿಟ್ಟು ಸರಳವಾಗಿರುವುದು.

ಗಾಂಧೀಜಿ ಅವರು ಆಧ್ಯಾತ್ಮಿಕತೆಗೂ ಮೌಲಿಕವಾದ ಕೊಡುಗೆಯನ್ನು ನೀಡಿದ್ದು, ಆ ಅಂಶಗಳು ಕೆಳಕಂಡಂತಿವೆ–

* ಸತ್ಯ ಮತ್ತು ಅಹಿಂಸೆ.
* ಕೇಡು / ಕೆಡುಕಿನೊಂದಿಗೆ ಅಸಹಕಾರ.
* ಶಾಂತಿಗಾಗಿ ಯಾವುದೇ ನೋವನ್ನು ಅನುಭವಿಸುವುದು/ ಪ್ರಾಣತ್ಯಾಗವನ್ನಾದರೂ ಮಾಡುವುದು.
* ಶಾಂತಿ ಮತ್ತು ನ್ಯಾಯದ ಪ್ರತಿಪಾದನೆಯಲ್ಲಿ ನಂಬಿಕೆ.
* ಪ್ರಾರ್ಥನೆ ಮತ್ತು ಧ್ಯಾನದಲ್ಲಿ ನಂಬಿಕೆ.
* ಆಧ್ಯಾತ್ಮಿಕ ಶ್ರೇಯಸ್ಸನ್ನು ಗಳಿಸಲು ವ್ಯಕ್ತಿಗತ ಪ್ರಾಮಾಣಿಕತೆ ಅತ್ಯಗತ್ಯ ಎಂಬುದರ ಅರಿವು.
* ಸಮಾಜದ ಬಡವರು ಮತ್ತು ದುರ್ಬಲರೊಂದಿಗೆ ಒಂದಾಗುವುದು.
* ಕೆಲಸವನ್ನು ಮಾಡು. ಆದರೆ, ಅದರ ಫಲದ ಬಗ್ಗೆ ಯೋಚಿಸಬೇಡ ಎಂಬ ಭಗವದ್ಗೀತೆಯ ಮಾತಿನಲ್ಲಿ ನಂಬಿಕೆ.
* ಪ್ರತಿಯೊಂದು ಧರ್ಮವೂ ಸತ್ಯದಿಂದ ಕೂಡಿದ್ದು, ಗೌರವಕ್ಕೆ ಅರ್ಹವಾಗಿದೆ.
* ರಾಜಕಾರಣ ಮತ್ತು ಸಾಮಾಜಿಕ ಜೀವನದಲ್ಲಿ ನಿರ್ಭೀತವಾಗಿ ಸತ್ಯದ ಅನುಸರಣೆ ಮಾಡುವುದು.

ಮುಂದುವರಿಯುವುದು...

ಸಾದರ ಸ್ವೀಕಾರ

BOOK TITLE	PUBLICATION	AUTHOR
1. Mohandas A True of a man his people & an Empire	Penguven - 2006	Raj Mohan Gandhi
2. My Life is My Message (4 Volume)	Orient Black Swam - 2009	Narayana Desai
3. Gandhi's Before India	Penguven - 2013	Ramachandra Guha
4. Gandhi the years that changed the world - 1914-18	Penguven - 2018	Ramachandra Guha
5. Great Soul-Mahatma Gnadhi & his struggle with India	Hoper Colin	Joseph Leliveld
6. The Man Before the Mahatma MK Gnadhi attorney at law	Random House-2012	Charles Dislavour
7. Gandhi's Printing Press Experiment in slow reading	Harvard University press-2013	Isabela Half Mayor
8. The South African Gandhi Strecher Bearer of Empire	Stanford university press-2015	Ashwin Desai & Gulem Vahed
9. Khadi Gandhis mega symbol of subvertion	Sage - 2012	Peter Gonsalvense

Collection by Naveenkumar, Gandhi Bhavana

ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಮಾದಕ ವಸ್ತುಗಳ ಮಾಯಾಜಾಲ

– ಡಾ. ಸಿ.ಆರ್. ಚಂದ್ರಶೇಖರ್

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಹೀಗೆ ಈ ದಿನಗಳಲ್ಲಿ ಬ್ರೌನ್‌ಶುಗರ್ ಎನ್ನಿ, ಹೆರಾಯಿನ್ ಎನ್ನಿ, ಟಿಡಿಜೆಸಿಕ್ ಎನ್ನಿ, ಅಫೀಮು ಎನ್ನಿ, ಬೀದಿಯಲ್ಲಾಡುವ ಹುಡಗರಿಗೂ ಇವು ಅಮಲು ಬರಿಸುವ ಮಾದಕ ವಸ್ತುಗಳು ಎಂದು ಗೊತ್ತು ಅಫೀಮೇನೋ ಮುಂಚಿನಿಂದಲೂ ಇದೆ. ಈ ಬ್ರೌನ್ ಶುಗರ್, ಹೆರಾಯಿನ್ ಟಿಡಿಜೆಸಿಕ್ ಹೊಸ ಬಗೆಯ ವಸ್ತುಗಳೇ ಎಂದು ಕೇಳುತ್ತೀರಿ. ಅವು ಹೊಸವಲ್ಲ! ಪುರಾತನ ಕಾಲದಿಂದಲೂ ಮನುಷ್ಯನ ಚಪಲದ ಬೆನ್ನು ಬಿದ್ದಿರುವ ಅಫೀಮಿನ ಹೊಸ ಅವತಾರಗಳು ಅಷ್ಟೇ. ನಾಗರಿಕ ಪ್ರಪಂಚದಲ್ಲಿ ನವ ನಾಮಧೇಯಗಳನ್ನು ಪಡೆದಿವೆ, ಬೇರೇನಲ್ಲ, ಟಿಡಿಜೆಸಿಕ್ (ಬ್ಯುಫೆರೋ ನಾಪ್ರೋನ್) ಒಂದು ಕೃತಕ ಅಫೀಮು, ನೋವು ನಿವಾರಕ. ಪಪ್ಪಿ ಗಿಡ ನಮ್ಮ ದೇಶದಲ್ಲಿ, ಚೀನಾದಲ್ಲಿ, ಕೆಲವು ದಕ್ಷಿಣ ಏಶಿಯಾ ರಾಷ್ಟ್ರಗಳಲ್ಲಿ ಬೆಳೆಯುತ್ತದೆ. ಸರ್ಕಾರದ ಅನುಮತಿ ಪಡೆದೇ ಈ ಗಿಡದ ವ್ಯವಸಾಯ ನಡೆಯುತ್ತದೆ. ಇಂದಿಗೂ ಅತಿ ಸಮರ್ಥಶಾಲೀ ನೋವು ನಿವಾರಕ ಮಾರ್ಫಿನ್ ಸೂಜಿಮದ್ದನ್ನು ಈ ಗಿಡದಿಂದ ತಯಾರಿಸಲಾಗುತ್ತದೆ. ಆದರೆ ಗಿಡದ ಬಲಿಯದ ಬೀಜಗಳಿಂದ ಒಸರುವ ಹಾಲಿನಂತಹ ವಸ್ತು – ಅಫೀಮು ಕಳ್ಳತನದಿಂದ ಇಡೀ ವಿಶ್ವದ ಕಳ್ಳ– ಭೂಗತ ಮಾರುಕಟ್ಟೆಗೆ ಸಾಗುತ್ತದೆ. ಈ ಹಾಲಿನಂತಹ ಕಚ್ಚಾ ವಸ್ತುವಿನಿಂದ ನೋವು ನಿವಾರಕ ಹಾಗೂ ಮತ್ತು ಬರಿಸುವ ವಸ್ತುವನ್ನು ಬೇರ್ಪಡಿಸಿ ಶುದ್ಧ ರೂಪದಲ್ಲಿ ಪರಿಷ್ಕರಿಸಿದಾಗ 'ಹೆರಾಯಿನ್' ಆಗುತ್ತದೆ. ಸಹಜವಾಗಿ ಹೆರಾಯಿನ್ ತುಟ್ಟಿ. ಅದಕ್ಕೆ ಇತರ ವಸ್ತುಗಳನ್ನು ಬೆರೆಸಿ, ಲಾಭ ಮಾಡುವ ಉದ್ದೇಶದಿಂಧ ಅದನ್ನು ಹಿಗ್ಗಿಸಿದಾಗ ಅದು ಕಂದು ಬಣ್ಣದ ಮರಳಿನಂತಾಗುತ್ತದೆ. ಬ್ರೌನ್‌ಶುಗರ್ ಎನಿಸಿಕೊಳ್ಳುತ್ತದೆ. ಇಂದು ಅಫೀಮು ಹೆರಾಯಿನ್– ಬ್ರೌನ್‌ಶುಗರ್ ವ್ಯವಹಾರ, ಚಿನ್ನ–ವಜ್ರದ ವ್ಯವಹಾರಕ್ಕಿಂತಲೂ ದುಬಾರಿಯಾಗಿದೆ. 2500 ರೂಪಾಯಿಗಳಿಗೆ ಸಿಗುವ 10 ಕಿಲೋಗ್ರಾಂ ಪಪ್ಪಿ ಗಿಡಗಳು ಅಮೆರಿಕೆಯಲ್ಲಿ 40 ಲಕ್ಷ ರೂಪಾಯಿ ಬೆಲೆ ಬಾಳುತ್ತವೆ. ಅದು ವಿಶ್ವದ ಸಮಾನಾಂತರ ಹಣಕಾಸಿನ ವ್ಯವಸ್ಥೆಯಾಗಿ ಮಾರ್ಪಾಡಾಗಿದೆ. ರಾಷ್ಟ್ರಗಳ ಸರಕಾರಗಳನ್ನೇ ಕೊಂಡುಕೊಳ್ಳಬಲ್ಲ ಹಾಗೂ ಅಪರಾಧ ಜಗತ್ತಿನ ಕೀಲಿ ಕೈಯಾಗಿ ರೂಪುಗೊಂಡಿದೆ. ಆಲ್ಕೋಹಾಲ್, ಗಾಂಜಾ ಇನ್ನಿತರ ಮಾದಕ ವಸ್ತುಗಳು ವ್ಯಕ್ತಿಯಲ್ಲಿ ಚಟ ಬೆಳೆಸಲು ಕೆಲವಾರು ತಿಂಗಳುಗಳು ಮತ್ತು ವರ್ಷಗಳನ್ನು ತೆಗೆದುಕೊಂಡರೆ, ಹೆರಾಯಿನ್–ಬ್ರೌನ್‌ಶುಗರ್‌ಗೆ ಈ ಕೆಲಸ ಮಾಡಲು ಮೂರು ದಿವಸಗಳು ಸಾಕು. ಮೊದಲು ಮೂರು ದಿನ ವ್ಯಕ್ತಿಗೆ ಉಚಿತವಾಗಿ ಅಥವಾ ಕಡಿಮೆ ದರದಲ್ಲಿ ಇದನ್ನು ಪೂರೈಸಿದರೆ, ನಾಲ್ಕನೇ ದಿನ ಆತ ಅದಕ್ಕೆ ಗುಲಾಮನಾಗುತ್ತಾನೆ.

ಮುಂದುವರಿಯುವುದು...

ಪ್ರಾಕೃತಿಕ ಆಹಾರದ ಮಹತ್ವ

ಡಾ. ವಸುಂಧರಾ ಭೂಪತಿ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಆಹಾರವೇ ಚಿಕಿತ್ಸೆ

ಬಸವಣ್ಣನವರ ಧೋರಣೆಯಂತೂ ನಮಗೆ ಚಿರಪರಿಚಿತ
"ಹುತ್ತವ ಬಡಿದಡೆ ಹಾವು ಸಾಯಬಲ್ಲದೇ ಅಯ್ಯಾ?
ಎನ್ನ ತನುವಿಂಗೆ ನೀನೊಡೆಯ"
ತನು, ಮನಗಳಲ್ಲಿರುವ ನಿಕಟ ಸಂಬಂಧವನ್ನು
ಅವರು ಹೀಗೆ ಹಾಡಿದ್ದಾರೆ.
"ತನು ದೊರೆಕೊಂಡಡೆ ಮನ ದೊರೆಕೊಳ್ಳದು"

ನಾವು ಸೇವಿಸುವ ಆಹಾರವೇ ನಮಗೆ ಚಿಕಿತ್ಸೆಯಾಗುವ ರೀತಿಯಲ್ಲಿ ನಮ್ಮ ನಿತ್ಯದ ಜೀವನವನ್ನು ಬದಲಾಯಿಸುವುದು ನಮ್ಮ ಕೈಯಲ್ಲಿಯೇ ಇದೆ. ಸಾಮಾನ್ಯವಾಗಿ ನಾವೆಲ್ಲರೂ ಹೊಟ್ಟೆ ಹಸಿವೆಗಾಗಿ ತಿನ್ನುತ್ತೇವೆ ಎಂದುಕೊಳ್ಳುವುದಿದೆ. ಆದರೆ ನಾವು ಹಸಿವೆಗಾಗಿ ತಿನ್ನುವುದಕ್ಕಿಂತ ಬಾಯಿ ಚಪಲಕ್ಕಾಗಿ ಆಹಾರವನ್ನು ಸೇವಿಸುವುದೇ ಅಧಿಕವಾಗಿದೆ. ಆಹಾರವನ್ನು ಚಿಕಿತ್ಸೆಯಾಗಿ ನೋಡಿದಲ್ಲಿ ನಾವು ಬಾಯಿ ಚಪಲಕ್ಕಾಗಿ ಸಿಕ್ಕಿದ್ದನ್ನೆಲ್ಲಾ ತಿನ್ನುವುದನ್ನು ಬಿಟ್ಟು ಬಿಡಬಹುದು.

ಆಹಾರವನ್ನು ಚಿಕಿತ್ಸೆಯಾಗಿ ನೋಡುವುದು ಹೊಸತೇನಲ್ಲ. ತಲೆ ತಲಾಂತರದಿಂದ ನಮ್ಮ ಆಹಾರ ಪದ್ಧತಿ ಹಲವಾರು ರೋಗಗಳ ಉಪಶಮನಕ್ಕಾಗಿಯೆಂದೇ ರೂಪಿತವಾಗಿದ್ದವು. ಆದರೆ ನಾವು ಆ ವೈಜ್ಞಾನಿಕ ಆಹಾರ ಪದ್ಧತಿಯನ್ನು ನಿಧಾನವಾಗಿ ತೊರೆಯುತ್ತಾ ಈಗ ಸಂಸ್ಕರಿತ ಆಹಾರಗಳ ಯುಗದಲ್ಲಿ ನೆಲೆಸಿದ್ದೇವೆ. ಪುರಾತನ ಕಾಲ 2000 ವರ್ಷಗಳ ಹಿಂದೆ ಗ್ರೀಕ್‌ನಲ್ಲಿ ಹಿಪೋಕ್ರೇಟ್ಸ್ ಜೀವನ ಶೈಲಿ ಬದಲಾವಣೆ ಮೂಲಕ ಉತ್ತಮ ಆಹಾರವನ್ನು ಸೇವಿಸಿ ರೋಗಗಳಿಂದ ದೂರವಿರುವ ಬಗೆಯನ್ನು ವಿವರಿಸಿದ್ದ. ಆತ ಕೆಲವು ನಿರ್ಧಿಷ್ಟ ರೋಗಗಳಿಗೆ ವಿವಿಧ ರೀತಿಯ ಆಹಾರ ಪಥ್ಯಗಳನ್ನು ನೀಡಿದ್ದ ಎನ್ನಲಾಗಿದೆ. ಔಷಧಿಯೇ ಆಹಾರವಾಗಲಿ ಮತ್ತು ಆಹಾರವೇ ಔಷಧಿಯಾಗಲಿ ಎನ್ನುವುದು ಆತ ನೀಡಿರುವ ಜನಪ್ರಿಯ ನಾಣ್ಣುಡಿಯಾಗಿದೆ. ಈಗಲೂ ಆಹಾರದ ಪಥ್ಯ ಹಲವಾರು ರೋಗಗಳಿಗೆ ಚಿಕಿತ್ಸೆಯಾಗಿ ಸೂಚಿಸಲಾಗುತ್ತದೆ. ನೀವು ವಾಯು (ಗ್ಯಾಸ್ಟ್ರಿಕ್) ಸಮಸ್ಯೆಯಿಂದ ಕಷ್ಟ ಪಡುತ್ತಾ ವೈದ್ಯರ ಬಳಿಗೆ ಹೋದರೆ ಅವರು ಆಲೂಗಡ್ಡೆ ಸೇರಿದಂತೆ ಹಲವು ವಾಯು ಸಮಸ್ಯೆ ತರುವ ತರಕಾರಿಗಳನ್ನು ತೊರೆಯುವಂತೆ ಹೇಳುತ್ತಾರೆ. ಹಾಗೆಯೇ ಕಿಡ್ನಿಯಲ್ಲಿ ಕಲ್ಲಾಗಿದೆ ಎಂದರೆ ಟೊಮ್ಯಾಟೋ ವರ್ಜ್ಯವಾಗುತ್ತದೆ. ಹೀಗೆ ಔಷಧಿಯಾಗಿ ಆಹಾರವನ್ನು ಆಯುರ್ವೇದ ಪದ್ಧತಿಯಲ್ಲಿ ಮಾತ್ರವಲ್ಲ, ಅಲೋಪತಿಯಲ್ಲೂ ಇಂದಿಗೂ ಬಳಸಲಾಗುತ್ತಿದೆ.

ಮುಂದುವರಿಯುವುದು...



ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಸಿದ್ಧಾಂತಿ ಮಹಾತ್ಮ ಗಾಂಧೀಜಿ

– ಡಾ. ಸಂದೀಪ್ : 'ಆರೋಗ್ಯ ಧಾಮ" ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕೇಂದ್ರಗಳು

ಗಾಂಧೀಜಿ ಅವರ ಹತ್ತು ಹಲವಾರು ರಚನಾತ್ಮಕ ಕಾರ್ಯಕ್ರಮಗಳಲ್ಲಿ. ಸ್ವಾವಲಂಬನೆ ಮತ್ತು ಆರೋಗ್ಯ ಬಹಳ ಪ್ರಮುಖವಾದುದಾಗಿದೆ. ಪುಸ್ತಕ ಪ್ರಿಯರಾದ ಗಾಂಧೀಜಿ ಅವರು ದಕ್ಷಿಣ ಆಫ್ರಿಕಾದಲ್ಲಿದ್ದಾಗ ಪುಸ್ತಕಗಳನ್ನು ಹುಡುಕಿಕೊಂಡು ಓದುತ್ತಿದ್ದರು. ಆ ಪುಸ್ತಕಗಳಲ್ಲಿ ಒಂದಾದ 'ನ್ಯಾಚುರಲ್ ಹೆಲ್ತ್' ಅನ್ನೋದರ ಬಗ್ಗೆ ಬಹಳ ಒಳ್ಳೆ ವಿಚಾರಗಳನ್ನು ಮನನ ಮಾಡಿಕೊಂಡಿದ್ದರು. ನಾವು ಸಹಜವಾಗಿ ಆರೋಗ್ಯದಿಂದ ಇರಬೇಕೆಂದರೆ ನೈಸರ್ಗಿಕವಾಗಿ ಸಿಗುವ ಸೂರ್ಯನ ಬಿಸಿಲು, ಗಾಳಿ, ಜಲ ಮತ್ತು ಪೃಥ್ವಿ ಅಥವಾ ಮಣ್ಣನ್ನು ಉಪಯೋಗಿಸಿ ಆರೋಗ್ಯವನ್ನು ನೈಸರ್ಗಿಕವಾಗಿ ಕಾಪಾಡಿಕೊಳ್ಳಬಹುದು ಎಂದುಕೊಂಡರು. ಇದನ್ನು ತಿಳಿದ ಗಾಂಧೀಜಿ ಅವರು ತುಲನಾತ್ಮಕ ಅಧ್ಯಯನವನ್ನು ಮಾಡಿದರು. ಮೂಲತಃ ಭಾರತ ಹಳ್ಳಿಗಳಿಂದ ಒಗ್ಗೂಡಿದ್ದು ಪ್ರಾಕೃತಿಕ ಶ್ರೀಮಂತಿಕೆಯ ದೇಶವಾಗಿದೆ. ನಮ್ಮ ದೇಶದ ಬೆಟ್ಟ ಗುಡ್ಡ ಕಣಿವೆಗಳು ನೈಸರ್ಗಿಕ ಸಂಪನ್ಮೂಲಗಳು ಪ್ರತಿಯೊಬ್ಬ ಪ್ರಜೆಯು ಆರೋಗ್ಯ ಸ್ವಾವಲಂಬನೆಯನ್ನು ಪ್ರಕೃತಿ ಚಿಕಿತ್ಸಾ ವಿಧಾನದಿಂದ ಮಾಡಬಹುದೆಂದು ಮನಗಂಡರು.

ಅಷ್ಟೊತ್ತಿಗಾಗಲೇ ಭಾರತದಲ್ಲಿ ಡಾ ದಿನ್‌ಷಾ ಮೆಹ್ತಾ, ಆಚಾರ್ಯ ಲಕ್ಷ್ಮಣಶರ್ಮಾ, ಪುಚ್ಚ ವೆಂಕಟರಾವ್ ಮುಂತಾದವರು ಪ್ರಕೃತಿ ಚಿಕಿತ್ಸೆ ಅಥವಾ ಪಂಚಭೌತಿಕ ಚಿಕಿತ್ಸೆಯಲ್ಲಿ ಹೆಸರುವಾಸಿಯಾಗಿದ್ದರು. ಸ್ವತಃ ಗಾಂಧೀಜಿ ಅವರು ಡಾ. ದಿನ್‌ಷಾ ಮೆಹ್ತಾ ಅವರನ್ನು ಭೇಟಿ ಮಾಡಿ ಅವರಿಂದ 2 ಬಾರಿ ಪ್ರಕೃತಿ ಚಿಕಿತ್ಸೆಯನ್ನು ಪಡೆದುಕೊಂಡಿದ್ದರು. ಪ್ರಕೃತಿ ಚಿಕಿತ್ಸೆ ಉಪವಾಸ ಚಿಕಿತ್ಸೆ, ಮಣ್ಣಿನ ಚಿಕಿತ್ಸೆ, ಸೂರ್ಯ ಚಿಕಿತ್ಸೆ, ಆಹಾರ ಚಿಕಿತ್ಸೆ, ಶುದ್ಧಿ ಕ್ರಿಯೆಗಳನ್ನು ಅನುಭವಿಸಿ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವ ಸರಳ ಸೂತ್ರಗಳನ್ನು ಅಭ್ಯಾಸ ಮಾಡಿಕೊಂಡರು. ತದನಂತರ ತಮ್ಮ ಆಶ್ರಮದಲ್ಲಿ ಆರೋಗ್ಯ ಅರಸಿ ಬಂದವರಿಗೆ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಸಿದ್ಧಾಂತವನ್ನು ಪ್ರಾಯೋಗಿಕವಾಗಿ ತಿಳಿಸಿ ಹೇಳುತ್ತಿದ್ದರು. ಚಿಕಿತ್ಸೆಯೇ ಬೇಕಾದ ಕೆಲವರನ್ನು ಡಾ. ದಿನಷಾ ಮೆಹ್ತಾರ ಬಳಿ ಕಳುಹಿಸುತ್ತಿದ್ದರು. ಕೇಂದ್ರ ಸರ್ಕಾರವು, ಮಹಾತ್ಮ ಗಾಂಧಿ ಅವರು ಪ್ರಕೃತಿ ಚಿಕಿತ್ಸೆ ಪಡೆದ ಮಹಾರಾಷ್ಟ್ರದ ಪೂನಾವನ್ನು ಗುರ್ತಿಸಿ ಅಲ್ಲಿ "ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ನ್ಯಾಚುರೋಪತಿ ಸಂಸ್ಥೆಯನ್ನು ಸ್ಥಾಪಿಸಿದೆ. ಇದು ಕೇಂದ್ರ ಸರಕಾರದ ಆಯುಷ್ ವಿಭಾಗದ ರಾಷ್ಟ್ರೀಯ ಪ್ರಕೃತಿ ಚಿಕಿತ್ಸಾ ಸಂಸ್ಥೆ ಆಗಿದೆ.

ಈ ಸಂಸ್ಥೆಯ ನೇತೃತ್ವದಲ್ಲಿ ಪ್ರಕೃತಿಚಿಕಿತ್ಸಾ ಆಸ್ಪತ್ರೆಯು ನಡೆಯುತ್ತಿದ್ದು ಹತ್ತು ಹಲವು ಪ್ರಕೃತಿ ಚಿಕಿತ್ಸಾ ಕಾರ್ಯಕ್ರಮಗಳನ್ನು ದೇಶದಾದ್ಯಂತ ಯಶಸ್ವಿಯಾಗಿ ನಡೆಸುತ್ತಿದೆ. ಈ ಸಂಸ್ಥೆಯು ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಪದವಿ ಕಾಲೇಜನ್ನು ಶೀಘ್ರದಲ್ಲೇ ಪ್ರಾರಂಭಿಸಲಿದೆ. ಇನ್ನೊಂದು ಸಂಸ್ಥೆ ಅಂದರೆ ಗಾಂಧೀಜಿ ಅವರೇ ಸ್ವತಃ ಕಟ್ಟಿದ ಸಂಸ್ಥೆ "ಉರುಳಿ ಕಾಂಚನದ ನಿಸರ್ಗೋಪಚಾರ ಕೇಂದ್ರ". ಈ ಸಂಸ್ಥೆಯು ಇಂದಿಗೂ ಸುಮಾರು ಇನ್ನೂರು ಹಾಸಿಗೆಯುಳ್ಳ ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕೇಂದ್ರವನ್ನು ಯಶಸ್ವಿಯಾಗಿ ನಡೆಸಲಾಗುತ್ತಿದೆ. ಸ್ವಪ್ರೇರಣೆಯಿಂದ ಗಾಂಧೀಜಿ ಅವರು ಪ್ರಕೃತಿ ಚಿಕಿತ್ಸೆ ಸಂಬಂಧಿತ ಪುಸ್ತಕಗಳನ್ನು ಸಹ ಬರೆದಿರುತ್ತಾರೆ. ಅವುಗಳು **"Key To health", "Rama nama", "Diet and dietary reforms", "Nature cure"**

ಈ ಕೃತಿಗಳಲ್ಲಿ ನೈಸರ್ಗಿಕವಾಗಿ ಆರೋಗ್ಯವನ್ನು ಕಾಪಾಡಿಕೊಳ್ಳುವ, ಸರಳ ಮತ್ತು ಪ್ರಾಕೃತಿಕ ಚಿಕಿತ್ಸಾ ವಿಧಾನಗಳನ್ನು ಗಾಂಧೀಜಿ ಅವರು ತಿಳಿಸಿರುತ್ತಾರೆ.

ಮುಂದುವರಿಯುವುದು...

ಆಚಾರ್ಯಾತ್ ಪಾದಮಾದತ್ತೇ ಪಾದಂ ಶಿಷ್ಯಃ ಸ್ವಮೇಧಯಾ ।
ಕಾಲೇನ ಪಾದ ಪಾದತ್ತೇ ಪಾದಂ ಸಬ್ರಹ್ಮಚಾರಿಭಿಃ ॥

ಶಿಷ್ಯನು ಆಚಾರ್ಯನಿಂದ ವಿದ್ಯೆಯ ಕಾಲು ಭಾಗವನ್ನು ಗ್ರಹಿಸುತ್ತಾನೆ. ಕಾಲುಭಾಗವನ್ನು ತನ್ನ ಬುದ್ಧಿ ಶಕ್ತಿಯಿಂದಲೂ, ಕಾಲು ಪರಿಪಕ್ವದಿಂದಲೂ, ಕಲಿತರೆ ತನ್ನ ಜೊತೆಯ ವಿದ್ಯಾರ್ಥಿಗಳಿಂದ ಉಳಿದ ಕಾಲು ಭಾಗದ ವಿದ್ಯೆಯನ್ನು ಕಲಿಯುತ್ತಾನೆ.

ಯಸ್ಯ ಸ್ಮರಣ ಮಾತ್ರೇಣ ಜ್ಞಾನ ಮಾತ್ಪದ್ಯತೇ ಸ್ವಯಮ್ ।
ಸ ಏವ ಸರ್ವಸಂಪತ್ತಿಃ ತಸ್ಮೈ ಶ್ರೀಗುರವೇ ನಮಃ ॥

ಯಾರ ಸ್ಮರಣೆ ಮಾತ್ರದಿಂದಲೇ ತಾನಾಗಿಯೇ ತನ್ನರಿವು ಉದಯಿಸುತ್ತದೆಯೋ, ಅವನೇ ಸರ್ವ ಐಶ್ವರ್ಯವಂತನೂ ಆಗಿರುವನು, ಅಂತಹ ಶ್ರೀಗುರುವಿಗೆ ನಮಸ್ಕಾರಗಳು

– ಸಂಗ್ರಹ : ಪ್ರೊ. ಲೀಲಾ ವಾಸುದೇವ್

FEVER!

Condensed form of 'Fever Book" - 1974 & Published by Hart Davis Macgibbos, P.O. - 9 St Albans, England : by John Fuller

continued from the previous edition...

Today the threat of plague seems unreal. Yet In January 1969 an unknown killer struck in Nigeria virus of such overwhelming power that in this age of jet travel it could trigger global calamity. In a dangerous race against time, a team of resetirchers risked their lives to track the virus to its source and find a vaccine that would be able to conquer it. This is the story of that quest, one of the most fascinating and Inspiring medical revelations of our time

On the following day, Sonja Buckley saw him sitting in his laboratory with both a thick grey jersey and a tweed jacket under his white lab coat. To her, his face looked almost as grey as his jersey; and he was shivering. "What's the matter with you?" she asked."I've got cold," Casals replied. Buckley told him to go home to bed until it cleared up. Casals said he would think about it. Six days later, racked with excruciating pains in his thighs, burning with fever, he was taken by ambulance to the Isolation Unit of Columbia-Presbyterian Hospital.

"We Were Very Frightened"

THAT evening, John Frame and his wife, Veronica, were celebrating her birthday with family and friends at their home on Long Island. The phone rang. It was WilDowns."John," Downs said, "I'm at Columbia-Presbyterian. Jordi Casals is in Isolation." He quickly summarized Casals' clinical picture. It was ominously like that of the three mission nurses. He did not need to give his diagnosis; it was too obvious. "Do you know where Penny Pinnco is?" he asked.Frame thought she was with her sister. He managed to reach her by phone the next morning. She was shocked at the news. Frame asked whether she would consider letting them take blood serum from her to give Jordi Casals.And was she up to the trip? "Try and stop me," she replied. By mid-afternoon she was on board a jet enroute to New York.At the Yale Arbovirus Laboratory, Jordi Casals' colleagues gathered to try to conjure up some kind of solution to the dilemma they faced. One by one, the dangers of giving Casals the anti-serum were considered. They were serious. Yet if they did nothing, they might just be sitting back and letting their friend sink into a crisis that would kill him.They now knew that Casals symptoms were following an all too-familiar pattern: dehydration; low white-blood-cell count; signs of internal haemorrhage. They were all convinced that Jordi had Lassa fever, and the speed with which the virus moved did not allow much time for vacillation. Charlotte Shaw had died on the eleventh day of illness. Casals, they reckoned, had the virus for seven.

The next day, Casals sank lower. While Downs was with him, Jordi's wife, Lynn, was permitted to don a mask, gown and gloves to see her husband. Appalled, she was on the verge of tears. Automatically, she moved towards her husband and leant down to kiss him through her mask. Downs grabbed her away. Lassa fever did not allow any margin for affection.On Wednesday morning, with the news that Jordi Casals was going rapidly downhill, another meeting was held at Yale. colleagues were troubled by the fact that they had no real proof that Jordi had Lassa fever; giving him Penny's serum might infect him with a fatal disease that he did not have. Before the meeting, Downs telephoned a leading international virologist, Dr Karl Jhonson, who was working the deadly Bolivian haemorrhagic fever, one of the South American diseases which so closely resembled Lassa fever. Johnosn listened attentively as Downs spelt out the clinical course of Jordi Casals' illness.

To be continuted...

ಪುಸ್ತಕ ಪರಿಚಯ : ವನಸುಮ (ಬದುಕು-ಬರಹ)

ಡಾ. ಎಸ್.ರಾಮಲಿಂಗೇಶ್ವರ (ಸಿಸಿರಾ), ಕೃತಿಕಾರರು : ಡಾ. ವಿದ್ಯಾವಾಚಸ್ಪತಿ ಕವಿತಾ ಕೃಷ್ಣ (ಶ್ರೀ ಸಿ.ಎಸ್. ಭಾಸ್ಕರಪ್ಪ ಅವರ ಜೀವನ ಚಿತ್ರಣ) ಸರಳ ನಡೆ, ನುಡಿ, ಕಲೆ-ಸಾಹಿತ್ಯ, ಪತ್ರಿಕೋದ್ಯಮ, ರಾಜಕಾರಣ ಹಾಗೂ ಸಾಮಾಜಿಕ ಸ್ಥರಗಳಲ್ಲಿ ಕ್ರಿಯಾಶೀಲವಾಗಿ ತೊಡಗಿಸಿಕೊಂಡಿದ್ದ ಸಜ್ಜನ ರಾಜಕಾರಣಿ, ಮಾಜಿ ಶಾಸಕರು, ಸಂಸದರೂ ಆಗಿದ್ದ ಸನ್ಮಾನ್ಯ ಚಿಕ್ಕನಾಯಕನಹಳ್ಳಿ ನಂಜಯ್ಯ ಭಾಸ್ಕರಪ್ಪ ಅವರ ಬದುಕು-ಬರಹ, ಜೀವನ-ಸಾಧನೆಗಳನ್ನು ಕುರಿತಾದ ಗ್ರಂಥವೇ 'ವನಸುಮ'. ಶ್ರೀಯುತ ಭಾಸ್ಕರಪ್ಪ ಅವರ ಅಭಿನಂದನಾ ರೂಪದ ಗ್ರಂಥವನ್ನು ಬರೆದು ಸಾಹಿತ್ಯ ಕ್ಷೇತ್ರಕ್ಕೆ ಉಣಬಡಿಸಿದವರು ನಾಡಿನ ಹಿರಿಯ ಸಾಹಿತಿ ಶ್ರೀಯುತ ವಿದ್ಯಾವಾಚಸ್ಪತಿ ಡಾ. ಕವಿತಾ ಕೃಷ್ಣ ಅವರು. ಭಾಷೆ, ಸಾಹಿತ್ಯ, ರಂಗಭೂಮಿ, ಸಂಘಟನೆ, ಶಿಕ್ಷಣ ಸಮಾಜದ ವಿವಿಧ ಆಯಾಮಗಳಲ್ಲಿ ಭಾಸ್ಕರಪ್ಪ ಅವರು ಸಲ್ಲಿಸಿರುವ ಗಣನೀಯ ಸೇವೆಯನ್ನು ಜನ ಸಾಮಾನ್ಯರಲ್ಲಿ ಭಿತ್ತರಿಸುವ ಕಾರ್ಯವನ್ನು ಪ್ರಾಮಾಣಿಕವಾಗಿ ದಾಖಲಿಸಿದ್ದಾರೆ. ಜಾತಿ-ಕುಲ, ಗೋತ್ರ, ಮಡಿ-ಮೈಲಿಗೆ, ಬಡತನ-ಸಿರಿತನದ ಎಲ್ಲೆ ಮೀರಿ ಮಾನವತಾ ವಾದಿಯಾಗಿ ತುಮಕೂರಿನ ಪುರಸಭೆ ಸದಸ್ಯರಾಗಿ, ವಿಧಾನಸಭೆ ಮತ್ತು ಲೋಕಸಭೆ ಸದಸ್ಯರಾಗಿ ತುಮಕೂರು ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಭಾಸ್ಕರಪ್ಪ ಅವರ ಸೇವೆಯನ್ನು ದಾಖಲು ಮಾಡುವಲ್ಲಿ ಕೃತಿ ಸಾರ್ಥಕ್ಯ ಕಂಡಿದೆ. ಸರಳ ಸೌಜನ್ಯದ ವ್ಯಕ್ತಿಯಾಗಿ ಎಲ್ಲರೊಡಗೂಡಿ ಶ್ರೀಸಾಮಾನ್ಯರಂತಿದ್ದ ಭಾಸ್ಕರಪ್ಪ ಅವರ ತಂದೆಯ ಕುಟುಂಬ ಬಹಳ ದೊಡ್ಡದು. 11 ಮಂದಿ ಮಕ್ಕಳು. ಇಂಥ ಕುಟುಂಬದಲ್ಲಿ ಬೆಳೆದ ಭಾಸ್ಕರಪ್ಪ ಅವರು ಸಹೋದರರು, ಸಹೋದರಿಯರ ಜೊತೆಗೂಡಿ ಸುಖ-ದುಃಖಗಳಲ್ಲಿ ಭಾಗಿಯಾಗಿ ಬಾಳಿದ ಶ್ರೀಯುತರು ಸಮಾಜದ ಮುಖ್ಯವಾಹಿನಿಯಲ್ಲಿ ಅಷ್ಟಾಗಿ ಗುರ್ತಿಸಿಕೊಳ್ಳದೆ ಸಮಾಜದ ಶ್ರೇಯಸ್ಸನ್ನೇ ಉಸಿರಾಗಿಸಿಕೊಂಡು ಎಲೆ ಮರೆಯ ಕಾಯಿಯಂತಿದ್ದವರ ಜೀವನ ಚಿತ್ರಣ ಎಲ್ಲರೂ ಓದಬೇಕಾಗಿದೆ.

ಪತ್ರ ವಿಭಾಗ : ಓದುಗರ ಪ್ರತಿಸ್ಪಂದನ

2021ರ ಹೊಸ ಹೊತ್ತಿಗೆ 'ಬಾಪು ಪ್ರಪಂಚ' ಮಾಸಿಕವು ತುಂಬಾ ಸೊಗಸಾಗಿ ಮೂಡಿಬಂದಿದೆ. ನಮ್ಮನ್ನಗಲಿದ ಪ್ರಣಬ್ ಮುಖರ್ಜಿ, ಅರುಣ್ ಜೇಟ್ಲಿ, ಸುಷ್ಮಾ ಸ್ವರಾಜ್, ಎಸ್.ಪಿ. ಬಾಲಸುಬ್ರಹ್ಮಣ್ಯಂ ಮುಂತಾದ ಗಣ್ಯಮಾನ್ಯರನ್ನು ನೆನಪಿಸುವ ಅವತರಣಿಕೆ ನೋಡಲು ಸುಂದರ ಮುಖ ಪುಟದೊಂದಿಗೆ ಸೊಗಸಾಗಿದೆ. ಸಂಪಾದಕ ಮಂಡಳಿಗೆ ಅಭಿನಂದನೆಗಳು.

ಮೊಹಮ್ಮದ್ ಹೆಚ್. ಮುನಾಫ್

ಗಾಂಧೀಜಿ ಅವರು ಹುತಾತ್ಮರಾದ ದಿನ ಜನವರಿ 30 ಸರ್ವೋದಯ ದಿನ ಸ್ಮರಣೆಗಾಗಿ ದೇಶದಾದ್ಯಂತ ಆಚರಿಸಲ್ಪಡುವ 'ಹುತಾತ್ಮರ ದಿನಾಚರಣೆ'ಯನ್ನು ಜಗತ್ತಿನ 15 ರಾಷ್ಟ್ರಗಳು ನೆನಪಿಸಿಕೊಂಡು ಮಹಾತ್ಮಾಜಿ ಅವರನ್ನು ನೆನಪಿಸಿಕೊಳ್ಳುವ ಮಾಹಿತಿ ನೀಡಿರುವುದು ಸ್ಮರಣೀಯವಾದದ್ದು. ಕುವೆಂಪು ಅವರ ಶ್ರೀಸಾಮಾನ್ಯರ ದೀಕ್ಷಾಗೀತೆ 'ಕೊನೆಗೊಂಡಿತೊ ಓರೋರ್ವರ ಗರ್ವದ ಕಾಲ...' ಕವಿತೆಯಂತೂ ಪ್ರಸಕ್ತ ದೌರ್ಜನ್ಯಗಳಿಗಿಡಿದ ಕನ್ನಡಿಯಾಗಿದೆ.

ಡಾ. ನಮನ ಚಂದ್ರು, ಕನಕಪುರ

ಕನ್ನಡ ಕನ್ನಡಿಗ ಕರ್ನಾಟಕ ಹೆಸರಿನಲ್ಲಿ ಎನ್. ಎಸ್.ಎಸ್.ನ ಡಾ. ಗಣನಾಥಶೆಟ್ಟಿ ಎಕ್ಕಾರು ಅವರು ಬರೆದಿರುವ ಮಹಾಕವಿ ಕುವೆಂಪು ಕುರಿತಾದ ಲೇಖನವು ಒಳ್ಳೆಯ ಮಾಹಿತಿಯ ಆಗರವಾಗಿದೆ. ಅಂಬೇಡ್ಕರ್ ಮತ್ತು ಸಂವಿಧಾನ ಕುರಿತಾದ ಸಂಪಾದಕರಾದ ಶ್ರೀಮತಿ ಇಂದಿರಾ ಕೃಷ್ಣಪ್ಪ ಅವರ ಲೇಖನವು ಅಂಬೇಡ್ಕರ್ ಅವರ ಹೋರಾಟದ ದಿನಗಳನ್ನು ಮತ್ತು ಸ್ವಾತಂತ್ರ್ಯ ಹೋರಾಟದ ಸಂದರ್ಭಗಳು ಇಲ್ಲಿ ದಾಖಲಾಗಿರುವುದು ಸುತ್ತ್ಯಾರ್ಹ.

ಎನ್. ಕೃಷ್ಣಮೂರ್ತಿ, ಕೆಂಗೇರಿ

ಗಾಂಧಿ ಭವನದಿಂದ ಪ್ರಕಟಗೊಳ್ಳುತ್ತಿರುವ ಬಾಪು ಪ್ರಪಂಚ ಮಾಸಿಕವು ಓದುಗರಿಗೆ ಅತ್ಯಮೂಲ್ಯ ವಿಷಯಗಳನ್ನೊಳಗೊಂಡ ಲೇಖನಗಳೊಂದಿಗೆ ಮೂಡಿಬರುತ್ತಿದೆ. ಸಂಕೀರ್ಣ ವಿಷಯಾಧಾರಿತ ಲೇಖನಗಳು ಮಾಸಿಕವನ್ನು ವಿಶಿಷ್ಟವಾಗಿಸಿವೆ. ಸ್ವಾತಂತ್ರ್ಯೋತ್ತರ, ನಂತರದ ವಿದ್ಯಮಾನಗಳ ಜೊತೆಗೆ ದೇಶದ ಒಳಿತಿಗಾಗಿ ತಮ್ಮನ್ನೇ ಅರ್ಪಿಸಿಕೊಂಡ ಮಹನೀಯರ ಪರಿಚಯಗಳು, ಆರೋಗ್ಯದ ಕುರಿತಾದ ಮಾಹಿತಿಗಳು ಸಂಚಿಕೆಯನ್ನು ಅರ್ಥಪೂರ್ಣವಾಗಿಸಿವೆ.

ಡಾ. ವಿ.ಎಸ್. ಪಾರ್ವತಿ

ಇಂದಿನ ಕರೋನಾ ವೈರಸ್ ಸಮಯದಲ್ಲಿ ನಮಗೆ ಬಾಪು ಪ್ರಪಂಚದ ಮೂಲಕ "ಫೀವರ್" ಕಥಾನಕ ಓದಿಸುತ್ತಾ ನೈಜೀರಿಯಾ ಮತ್ತಿತರ ಕಡೆಯಲ್ಲಿ ಹಬ್ಬಿದ ವೈರಸ್ ಮತ್ತು ಹರಡಿದ ಜ್ವರ–ಸೋಂಕು, ಶುಶ್ರೂಷೆ ಮತ್ತು ಅಂದಿನ ಮಿತಿಯಾದ ವೈದ್ಯಕೀಯ ಉಪಕರಣಗಳ ನಡುವೆ ಭೀತಿಯಿಂದ ವೈದ್ಯರು ನಡೆಸಿದ ಆರೋಗ್ಯ ಹೋರಾಟದ ವಿವರಗಳು ಕುತೂಹಲ, ದುಃಖ, ನೋವುಗಳನ್ನು ನಮ್ಮಲ್ಲಿ ಒತ್ತರಿಸಿಬರುವಂತೆ ಮಾಡಿದೆ.

ಮಹಾಂತೇಶ್ ಉಜ್ಜನಿಕೊಪ್ಪ

ಮಹಾತ್ಮ ಗಾಂಧಿ ಮತ್ತು ಆಧ್ಯಾತ್ಮಿಕ ರಾಜಕಾರಣ ಕುರಿತಾದ ನಾಡೋಜ ವೂಡೇ ಪಿ. ಕೃಷ್ಣ ಅವರ ಲೇಖನ ಮತ್ತು ಡಾ. ಸಂದೀಪ್ ಅವರ ಅರೆತಲೆನೋವಿನ ಆರೈಕೆಗಳು ಲೇಖನ ಹಾಗೂ ಡಾ. ವಸುಂಧರಾ ಭೂಪತಿ ಅವರ ವಿಶೇಷ ಬರಹ ವಚನಗಳಲ್ಲಿ ಆರೋಗ್ಯ, ಒಳ್ಳೆಯ ಬರಹಗಳು, ಈ ಲೇಖಕರೆಲ್ಲರಿಗೂ ಅಭಿನಂದನೆಗಳು.

ಡಾ. ಸಿ.ಜಿ. ಹಳ್ಳಿ ಮೂರ್ತಿ, ಸಾಹಿತಿಗಳು

ಬಾಪು ಪ್ರಪಂಚ ಜನವರಿ ಸಂಚಿಕೆ 2020ರ ಹಿನ್ನೋಟದೊಂದಿಗೆ ಮಹತ್ವದ ಲೇಖನಗಳೊಂದಿಗೆ ವಿಷಯಗರ್ಭಿತವಾಗಿ ಮೂಡಿಬಂದಿದೆ. ಮಹಾತ್ಮ ಗಾಂಧಿ ಅವರ ಚಿಂತನೆಗಳಾಧಾರಿತ, ಪ್ರಸ್ತುತ ವಿದ್ಯಮಾನಗಳಿಗೆ ಪೂರಕವಾದ ಪರಿಚಯಗಳು, ಕನ್ನಡ ನಾಡು ನುಡಿ ನೆಲ ಜಲದ ಮಹತ್ವವನ್ನು ಸಾರುವ ಹಲವು ಲೇಖನಗಳು, ಕನಕದಾಸರ ಬಗೆಗಿನ ಲೇಖನದಲ್ಲಿ ಪ್ರೊ. ಬಿ. ಕೃಷ್ಣಪ್ಪನವರು ಬಳಸಿರುವ ಉತ್ಕೃಷ್ಟವಾದ ಪರಿಶುದ್ಧ ಕನ್ನಡ ಪದಬಳಕೆ ಮನಸೂರೆಗೊಳ್ಳುತ್ತದೆ. ಕೋವಿಡ್ ಸಂದರ್ಭದಲ್ಲಿಯೂ ಗಾಂಧಿ ಭವನವು ಸಕ್ರಿಯವಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಜೊತೆಗೆ ಇಂತಹ ಮಾಸಿಕವನ್ನು ಪ್ರಕಟಿಸುತ್ತಿರುವುದು ಓದುಗರಿಗೆ ಹೆಮ್ಮೆಯ ವಿಷಯ.

ಮಹೇಶ್, ಬೆಂಗಳೂರು

ಬಾಪು ಪ್ರಪಂಚ ಸಂಚಿಕೆಯಲ್ಲಿ ಬರುತ್ತಿರುವ 'Roots' ಕಥಾನಕವು ಕುಂಟಾ ಕಿಂಡೆ ಆಫ್ರಿಕಾದ ಕಪ್ಪುವರ್ಣೀಯ ಬಾಲಕನನ್ನು ಗುಲಾಮಿತನಕ್ಕಾಗಿ ಹಿಡಿದು 'slave ship' ನಿಂದ ಅಗೋಚರ–ಕ್ರೂರ, ಅಮೇರಿಕಾದ ಕಪ್ಪು ವರ್ಣೀಯರ ಕಾಲೋನಿಗೆ ಕರೆದೊಯ್ದು ಅವಮಾನವೀಯ ಕತೆ ಎದೆ ನಡುಗಿಸುತ್ತದೆ.

ಸುಧಾ ಮತ್ತು ಶ್ಯಾಮಲ

ಬಾಪು ಪ್ರಪಂಚ ಸಂಚಿಕೆಯು ಕನ್ನಡ ಭಾಷೆಯನ್ನು ಉಳಿಸುವ ಬೆಳಸುವ ಕಾರ್ಯ ಮಾಡುತ್ತಿರುವುದಕ್ಕೆ ಅಭಿನಂದನೆಗಳು.

ವನಜಾಕ್ಷಿ, ಬೆಂಗಳೂರು







ದಿ. 26–01–2021 ರಂದು ಗಾಂಧಿ ಭವನದಲ್ಲಿ ನಡೆದ ಗಣರಾಜ್ಯೋತ್ಸವ ಸಂದರ್ಭದಲ್ಲಿ ಇಂದಿರಾ ಕೃಷ್ಣಪ್ಪ, ಸೇವಾದಳ ಸಂಸ್ಥೆಯ ಅಧ್ಯಕ್ಷರು, ದಳಪತಿ ಅವರು ಮತ್ತು ಪದಾಧಿಕಾರಿಗಳು, ಮತ್ತು ಗಾಂಧಿ ಭವನದ ಸಿಬ್ಬಂದಿ ವರ್ಗದವರು, ಸ್ಯಾಮ್‌ಸಂಗ್ ಸಂಸ್ಥೆಯ ಪದಾಧಿಕಾರಿಗಳು ಮತ್ತು ಸೇವಾದಳ ಶಾಲೆಯ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕ ವೃಂದ ಭಾಗವಹಿಸಿದ್ದರು.

ಸಂಗ್ರಹ : ಡಾ. ವಿ. ಪ್ರಶಾಂತ್

ಗಾಂಧಿ ಭವನದ ಕಾರ್ಯಕ್ರಮಗಳು

ದಿ. 27-01-2021 ರಂದು ಗಾಂಧಿ ಭವನದಲ್ಲಿ ನಡೆದ ಡಾ. ಹೊ. ಶ್ರೀನಿವಾಸಯ್ಯ ಅವರ ದತ್ತಿ ಉಪನ್ಯಾಸ "ಪ್ರಕೃತಿ ಚಿಕಿತ್ಸೆ ಮತ್ತು ಆಯುರ್ವೇದ ಆಹಾರ ಆರೋಗ್ಯ ಮತ್ತು ಅರಿವು ಮತ್ತು ಮನೆ ಮದ್ದು" ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ನಾಡೋಜ ಡಾ. ವೂಡೇ ಪಿ. ಕೃಷ್ಣ, ಅಧ್ಯಕ್ಷರು, ಡಾ. ಗಣನಾಥಶೆಟ್ಟಿ ಎಕ್ಕಾರು ರಾಸೇಯೋ, ಶ್ರೀ ಹೆಚ್.ಬಿ ದಿನೇಶ್, ಶ್ರೀಮತಿ. ಶಶಿಕೃಷ್ಣ, ಶ್ರೀಮತಿ ಇಂದಿರಾ ಕೃಷ್ಣಪ್ಪ, ವಿಶುಕುಮಾರ್, ವಿ.ಎನ್. ತಿಪ್ಪನಗೌಡ, ಪ್ರೊ. ಜಿ.ಬಿ. ಶಿವರಾಜು, ಡಾ. ಸಂದೀಪ್, ಡಾ. ವಸುಂಧರಾ ಭೂಪತಿ, ಡಾ. ಹೆಚ್.ಎಸ್. ನರೇಂದ್ರ ಚಿತ್ರದಲ್ಲಿದ್ದಾರೆ.




ಗಾಂಧಿ ಭವನದಲ್ಲಿ ದಿ. 30-01-2021 ರಂದು ನಡೆದ ಸರ್ವೋದಯ ದಿನಾಚರಣೆಯಲ್ಲಿ ಸೈಕಲ್ ಜಾಥಾಕ್ಕೆ ಪೋಲಿಸ್ ಆರಕ್ಷಕ ನಿರೀಕ್ಷಕರಾದ ಗೋಪಾಲ್ ಅವರು ಚಾಲನೆ ನೀಡಿದರು. ಕರೋನಾ ವಾರಿಯರ್ಸ್ ರವರುಗಳಿಗೆ ಗೌರವ ಪುರಸ್ಕಾರ ಹಾಗೂ ಪುಸ್ತಕ ಬಿಡುಗಡೆ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ನಾಡೋಜ ಡಾ. ವೂಡೇ ಪಿ. ಕೃಷ್ಣ, ಅಧ್ಯಕ್ಷರು, ಕ.ಗಾಂ.ಸ್ಮಾ.ನಿಧಿ, ಸುಶ್ರೀ ಚೆನ್ನಮ್ಮ ಹಳ್ಳಿಕೇರಿ, ಗಾಂಧಿ ಶಾಂತಿ ಪ್ರತಿಷ್ಠಾನದ ಜೇರಿಗೆ ಲೋಕೇಶ್, ಇಂದಿರಾ ಕೃಷ್ಣಪ್ಪ, ಕಾರ್ಯದರ್ಶಿ, ಹೆಚ್. ಹನುಮಂತಪ್ಪ, ರಾಜ್ಯಸಭಾ ಮಾಜಿ ಸದಸ್ಯರು ಡಾ.ಹೆಚ್.ಎಸ್. ದೊರೆಸ್ವಾಮಿ, ಎಸ್.ಜಿ. ಸುಶೀಲಮ್ಮ ಡಾ. ಪೂರ್ಣಿಮಾ ಜೋಗಿ, ಡಾ.ವಿ. ಪ್ರಶಾಂತ ಚಿತ್ರದಲ್ಲಿದ್ದಾರೆ.




ದಿ. 05.02.2021ರಂದು ಗಾಂಧಿ ಭವನದಲ್ಲಿ ಸ್ವಾಮಿ ವಿವೇಕಾನಂದರ 158ನೇ ಜನ್ಮದಿನೋತ್ಸವದ ಯುವ ಸಮ್ಮೇಳನದ ಜಯಶ್ರೀ ರಾಜು ಅವರ ಕೃತಿ "ಮೊಗ ಹೊತ್ತ ಭಾವ" ಕೃತಿ ಲೋಕಾರ್ಪಣೆ ಹಿರಿಯ ಸಾಹಿತಿಗಳಾದ ನಾಡೋಜ ಡಾ. ಹಂಪನಾ, ಕಮಲಾ ಹಂಪನಾ, ನಾಡೋಜ ಡಾ. ವೂಡೇ ಪಿ. ಕೃಷ್ಣ, ಸವಿತಾ ರಾಮು, ಪ್ರೊ. ಜಿ.ಬಿ. ಶಿವರಾಜು, ಡಾ. ಗಣನಾಥಶೆಟ್ಟಿ ಎಕ್ಕಾರು, ಜಯಶ್ರೀ ರಾಜು, ಇಂದಿರಾ ಕೃಷ್ಣಪ್ಪ, ಕಾರ್ಯದರ್ಶಿ, ಡಾ. ಪಾನ್ಯಂ ನಟರಾಜ್, ಡಾ. ರಾಮಲಿಂಗೇಶ್ವರ (ಸಿಸಿರಾ) ಮತ್ತು ವಿವಿಧ ಕ್ಷೇತ್ರದ ಸನ್ಮಾನಿತ ಸಾಧಕರು ಚಿತ್ರದಲ್ಲಿದ್ದಾರೆ.




ತ್ರಿಪುರಾದ ಎನ್ ವೈ ಪಿ ಸದಸ್ಯರು ಸದ್ಭಾವನಾ ಪಾದಯಾತ್ರೆ, ದೇಶ ಪರ್ಯಟನಾ ಅಂಗವಾಗಿ ವಿವಿಧ ರಾಜ್ಯ ಸಂಚರಿಸಿ ಬೆಂಗಳೂರು ಮಾರ್ಗವಾಗಿ ಗಾಂಧೀಭವನಕ್ಕೆ ದಿ. 06.02.2021ರಲ್ಲಿ ಭೇಟಿ ನೀಡಿದ ಸಂದರ್ಭದಲ್ಲಿ ಇಂದಿರಾ ಕೃಷ್ಣಪ್ಪ ಮತ್ತು ಡಾ. ವಿ. ಪ್ರಶಾಂತ್, ಮತ್ತು ಗಾಂಧಿ ಭವನದ ಸಿಬ್ಬಂದಿ ಅವರಿಂದ ಸ್ವಾಗತ ಮತ್ತು ಧ್ವಜವಂದನೆ ಸಾಂಸ್ಕೃತಿಕ ವಿಚಾರ ವಿನಿಮಯ ನಡೆದ ಸಾಂದರ್ಭಿಕ ಚಿತ್ರ ಮತ್ತು ನಾಡೋಜ ಡಾ. ವೂಡೇ ಪಿ. ಕೃಷ್ಣ, ಅಧ್ಯಕ್ಷರು, ಕ.ಗಾಂ.ಸ್ಮಾ.ನಿಧಿ ಅವರು ಸದ್ಭಾವನಾ ಪಾದಯಾತ್ರಿಕರನ್ನು ಆಹ್ವಾನಿಸಿದ ಸಾಂದರ್ಭಿಕ ಚಿತ್ರಗಳು.





ರಾಷ್ಟ್ರೀಯ ಯುವ ಯೋಜನೆ ಗಾಂಧಿ ಶಾಂತಿ ಪ್ರತಿಷ್ಠಾನ ನವದೆಹಲಿ ಇವರು ಬೆಂಗಳೂರಿನ ಗಾಂಧಿ ಭವನದಲ್ಲಿ ದಿ.07.02.2021ರಂದು ಆಯೋಜಿಸಲಾದ ದೇಶದ ಹಿರಿಯ ಗಾಂಧಿವಾದಿ ಡಾ. ಎಸ್.ಎನ್. ಸುಬ್ಬರಾವ್ ಅವರ 93ನೇ ವರ್ಷದ ಹುಟ್ಟುಹಬ್ಬ ಹಾಗೂ ಸದ್ಭಾವನಾ ದಿನಾಚರಣೆ ಆಚರಿಸಲಾಯಿತು. ಈ ಸಂದರ್ಭದಲ್ಲಿವಿಜಯಪುರ, ಪ್ರಗತಿ ಪ್ರಥಮ ದರ್ಜೆ ಕಾಲೇಜಿನ 18 ಮಂದಿ ರಾಷ್ಟ್ರೀಯ ಸೇವಾ ಯೋಜನೆ ಸ್ವಯಂ ಸೇವಕರು ನಡೆಸಿಕೊಟ್ಟ ವಿಭಿನ್ನ ಭಾಷೆ ಹಾಗೂ ಸಾಂಸ್ಕೃತಿಕ ಉಡುಗೆ-ತೊಡುಗೆಗಳ ನೃತ್ಯ ರೂಪಕ ವಿಶೇಷ ಭಾರತ ದರ್ಶನ "ಭಾರತ್ ಕೀ ಸಂತಾನ್" ಪ್ರಶಸ್ತಿ ಪ್ರಧಾನಿಸಲಾಯಿತು. ಚಿತ್ರದಲ್ಲಿ ಗಾಂಧಿ ಶಾಂತಿ ಪ್ರಶಸ್ತಿ ಪುರಸ್ಕೃತೆ ಚೆನ್ನಮ್ಮ ಹಳ್ಳಿಕೇರಿ, ಕ.ಗಾಂ.ಸ್ಮಾ. ನಿಧಿ ಅಧ್ಯಕ್ಷ ನಾಡೋಜ ಡಾ.ವೊಡೇ.ಪಿ. ಕೃಷ್ಣ, ತಿಪ್ಪನಗೌಡ, ಶಿವರಾಜು, ಇಂದಿರಾ ಕೃಷ್ಣಪ್ಪ, ರಾಜ್ಯಸಭಾ ಮಾಜಿ ಸದಸ್ಯ ಹನುಮಂತಪ್ಪ, ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಮಠದ್ ರಾ.ಸೇ.ಯೋಜನೆಯ ಡಾ.ಗಣನಾಥ ಶೆಟ್ಟಿ ಎಕ್ಕಾರು, ಡಾ. ಪೂರ್ಣಿಮಾ ಜೋಗಿ, ಕಾಲೇಜಿನ ಪ್ರಾಂಶುಪಾಲ ಡಾ.ಎನ್ ನಾಗರಾಜ, ಗಾಂಧಿ ಅಧ್ಯಯನ ಕೇಂದ್ರದ ಸಂಚಾಲಕ ಮಂಜುನಾಥ್, ಉಪನ್ಯಾಸಕಿ ಸುಧಾ ಹಾಗೂ ವಿವಿಧ ರಾಜ್ಯಗಳ ಎನ್.ವೈ.ಪಿ.ಕಾರ್ಯಕರ್ತರು, ಡಾ.ವಿ. ಪ್ರಶಾಂತ ಚಿತ್ರದಲ್ಲಿದ್ದಾರೆ.




ಗಾಂಧಿ ಭವನದಲ್ಲಿ ದಿ. 01-02-2021 ರಂದು ನಾಡೋಜ ಡಾ. ವೂಡೇ ಪಿ. ಕೃಷ್ಣ, ಅಧ್ಯಕ್ಷರು, ಕ.ಗಾಂ.ಸ್ಮಾ.ನಿಧಿ, ಅವರ ಜನ್ಮದಿನಾಚರಣೆಯಂದು ಸಿಬ್ಬಂದಿ ವರ್ಗದವರು ಶುಭಾಶಯ ಕೋರಿದ ಶುಭ ಸಂದರ್ಭದ ಚಿತ್ರ.



ಗಾಂಧಿ ಭವನದಲ್ಲಿ ದಿ.12.02.2021ರಂದು ಮಲ್ಲೇಶ್ವರಂ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿ ತಂಡದೊಂದಿಗೆ ಪ್ರಾಧ್ಯಾಪಕರಾದ ಶ್ರೀಮತಿ.... ಮತ್ತು ಪುಟ್ಟಸ್ವಾಮಿ ಅವರು ಸಂದರ್ಶಿಸಿದ ಸಂದರ್ಭದಲ್ಲಿ ಶ್ರೀಮತಿ ಚೆನ್ನಮ್ಮ ಹಳ್ಳಿಕೇರಿ ಮತ್ತು ಶ್ರೀಮತಿ ಇಂದಿರಾ ಕೃಷ್ಣಪ್ಪ ಅವರ ಉಪನ್ಯಾಸ, ಗಾಂಧಿ ಭವನ ವೀಕ್ಷಣೆ ಪುಸ್ತಕ ವಿತರಣೆ, ಗಾಂಧಿ ಚಲನ ಚಿತ್ರ ವೀಕ್ಷಣೆಯ ಸಾಂಧರ್ಭಿಕ ಚಿತ್ರ



ದೇವನಹಳ್ಳಿಯ ಪ್ರಗತಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕೋವಿಡ್-19 ಲಾಕೌನ್ ನಂತರ ಸುರಕ್ಷತಾ ಕ್ರಮಗಳ ಬಗ್ಗೆ ಒಂದು ದಿನದ ಕಾರ್ಯಾಗಾರವನ್ನು ಕಾಲೇಜುಗಳ ಉಪನ್ಯಾಸಕರಿಗಾಗಿ ಆಯೋಜನೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಕರೋನಾ ವಾರಿಯರ್ ಪ್ರಶಸ್ತಿಗಳನ್ನು ಗೌರವ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ವಿತರಿಸಿದರು, ಚಿತ್ರದಲ್ಲಿ ಡಾ. ನಾಗರಾಜ, ಕಾಲೇಜಿನ ಉಪನ್ಯಾಸಕ ವೃಂದ ಹಾಗು ಡಾ.ವಿ. ಪ್ರಶಾಂತ ಅವರಿದ್ದಾರೆ.



ದಿ. 17/01/2021ರಂದು ದೇವನಹಳ್ಳಿಯ ಪ್ರಗತಿ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಷ್ಟ್ರೀಯ ಯುವ ದಿನಾಚರಣೆ ಮತ್ತು ಗಾಂಧಿ ಅಧ್ಯಯನ ಕೇಂದ್ರವನ್ನು ಪ್ರಾರಂಭಿಸಲಾಯಿತು. ಚಿತ್ರದಲ್ಲಿ ಇಂದಿರಾ ಕೃಷ್ಣಪ್ಪ, ಡಾ.ಎನ್. ನಾಗರಾಜ,ಡಾ.ವಿ. ಪ್ರಶಾಂತ, ಅಕ್ಷಯ್.ವಿ.ಆರ್.ಶೆಟ್ಟಿ ನಾಯಕ್, ಪ್ರವೀಣ್ ಕುಮಾರ್ ಹಾಗೂ ಭಾನುಶ್ರೀ ಇದ್ದರು.



ದಿ. 18-01-2021 ರಂದು ನಾಡೋಜ ಡ. ವೂಡೇ ಪಿ. ಕೃಷ್ಣ ಅವರಿಗೆ ಉದಯಭಾನು ಕಲಾಸಂಘದ ಗೌರವ ಸದಸ್ಯತ್ವ ಪ್ರಧಾನ ಮಾಡಿದ ಸಾಂದರ್ಭಿಕ ಚಿತ್ರಣ



ದಿ. 07/02/2021ರಂದು ಉದಯಭಾನು ಕಲಾಸಂಘದಲ್ಲಿ ಕನ್ನಡ ಸಂಘರ್ಷ ಸಮಿತಿಯ ಸಮಾರಂಭದಲ್ಲಿ ಪ್ರೊ. ಎಂ.ಎಚ್. ಕೃಷ್ಣಯ್ಯ, ಇಂದಿರಾ ಕೃಷ್ಣಪ್ಪ, ಶಿವರಾಜ್ ಮುತ್ತುಮುರುವಣಿ ಅವರಿಗೆ ಪ್ರಶಸ್ತಿ ಪ್ರಧಾನ ಮಾಡಲಾಯಿತು. ಚಿತ್ರದಲ್ಲಿ ನಾಡೋಜ ಹಂಪನಾ, ನಾಡೋಜ ಕಮಲಾ ಹಂಪನಾ, ಕೋ.ವೆಂ. ರಾಮಕೃಷ್ಣೇಗೌಡ, ರಾಮಣ್ಣ ಕೋಡಿ ಹೊಸಳ್ಳಿ ಮತ್ತಿತರರು ಇದ್ದಾರೆ.



ಪತ್ರಿಕಾ ವರದಿಗಳು

ಸಂವಿಧಾನದಲ್ಲಿಲ್ಲ ರಾಷ್ಟ್ರಭಾಷೆ ಪ್ರಸ್ತಾಪ

ಸಂಯುಕ್ತ ಕರ್ನಾಟಕ

ಪ್ರಾ. ವೂಡೇ ಪಿ. ಕೃಷ್ಣರಿಗೆ ಉದಯಭಾನು ಗೌರವ

ಈ ಸಂಜೆ

ಪ್ರಜಾವಾಣಿ

ವಿವೇಕಾನಂದರ ಆದರ್ಶ ಪಾಲಿಸಿ

ಉದಯಭಾನು

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಗೌರವ ಕಾರ್ಯದರ್ಶಿ ಇಂದಿರಾ ಕೃಷ್ಣಪ್ಪ ಉದ್ಘಾಟನೆ

ಪ್ರಗತಿ ಕಾಲೇಜಿನಲ್ಲಿ ಗಾಂಧಿ ಅಧ್ಯಯನ ಕೇಂದ್ರ

Yerawada jail to welcome tourists from January 26

MRITYUNJAY BOSE
MUMBAI, DHNS

The Maharashtra government will launch a 'jail tourism' project from Pune's historic [Ye]rawada prison, coinciding with [Re]public Day festivities.

"This will mark the first phase of [th]e project," state Home Minister [A]nil Deshmukh told reporters in [N]agpur on Saturday. Subsequently, [ot]her prisons like Nagpur, Nashik [an]d Thane will also be thrown open [to] the public.

The 500-acre Yerawada Central [Ja]il is one of the largest prisons not [o]nly in India but also in South [A]sia. It was built by the British in ... when Yerawada was outside the city limits of Pune.

The jail has a capacity to lodge nearly 5,000 prisoners. It also has a 'faansi yard' for capital punishment. There is also an attached 'open jail' within the campus which houses life-sentence prisoners who have completed five years in the central jail.

The Yerawada prison in Pune

Tourist fee

"We shall levy a small fee of Rs 5 for school students, Rs 10 for college students and Rs 50 for general tourists," Deshmukh said.

Chief Minister Uddhav Thackeray and Deputy Chief Minister Ajit Pawar, who is the guardian minister of Pune district, will launch the project on January 26.

Some of the prominent leaders who were imprisoned at Yerawada jail include Mahatma Gandhi, Motilal Nehru, Jawaharlal Nehru, Sardar Vallabhbhai Patel, Subhas Chandra Bose, Sarojini Naidu, Bal Gangadhar Tilak, Joachim Alva and Veer Savarkar. The Poon[a Pact of] 1932 was agreed betwe[en Baba]heb Ambedkar and Ga[ndhi in the] jail.

During the Emergen[cy ...] prime minister Atal Bi[hari ...] political activist Pramil[a ...] and RSS leader Balasa[heb ...] were jailed here.

In the recent times, [Sanjay] Dutt, scamster Abdul ... and gangster Arun Ga[wli were in]carcerated in the Yera[wada] prison.

Where Kasab was ...

Mohammed Ajmal ... Pakistani terrorist ... ing the 26/11 attacks ... the prison complex.

Tri-service band pays homage to Mahatma Gandhi at Rajghat on Martyrs' Day, in New Delhi on Saturday - PTI, DH Report

A Model of Vaccine made in honour of corona warriors at the parade ground, DH Photo /B.H. Shivakumar



ಪುಸ್ತಕ ವಿಭಾಗ

(ಪ್ರಸಿದ್ಧ ಕೃತಿಗಳ ಸಂಕ್ಷಿಪ್ತ ಭಾಗ ನಿಯತವಾಗಿ ಬರಲಿವೆ)

ROOTS : Sold Into Slavery

Condensed form of the story by Alex Harley

Continued from previous edition...

More than a decade ago, Alex Haley began a long and arduous attempt to discover his ancestral roots. Like most black Americans, he had little to go on at first-only a few meagre clues, given to him in childhood. But as he pursued his search, the pieces of his ancient family puzzle began to fall into place. The story that finally emerged portrays not merely the agony of one man but, in a very real sense, the epic journey of the American Negro. In "By Slave Ship to America,' the first part of 'Roots, which appeared last month, Haley re-created the boyhood of his African ancestor, Kunta Kinte, Kunta's capture in 1767 by slavers and the ordeal of his passage across the Atlantic on a slave ship. 'Sold into Slavery' brings the young Kunta to the alien and cruel world of colonial America.

When Bell brought his breakfast the next morning, his glance caught the quick pleasure on her face at the marks the sticks had made on the earth floor Kunta glowered at her. He refused to touch the food until she left. But then he ate it hungrily, wanting its strength. Within a few days, he was hobbling freely about the hut.

THE FIDDLER : IN THE evening on this farm the black ones gathered at the last hut in the row. It was occupied by a sasso borro-a man of about 50 rains who had brown skin, indicating that his father had been white. Listening intently from within his own door way, Kunta could hear the brown one talking almost continuously Sometimes the others burst into laughter. At intervals, they barragged him with questions. Who was he, Kunta wondered. One day, as Kunta passed on his crutches, the brown one beckoned him to take a stool by his hut. Kunta sat down opposite the man. "I been hearin' 'bout you so mad," the brown one said. "You lucky dey ain't kilt you! Law say anybody catch you escapin' can kill you: law say cut your ear off if white folks say you lied. Law gainst teachin any nigger to read or write: law against nigger beatin' any drums -any of dat African stuff.

Somehow it did not matter that Kunta could not understand. An exhilaration gripped him that some one was actually talking to him directly. And the man simply loved to talk. If he had lived in Africa, Kunta thought, he would be a wandering griot, one who told the history of ancient kings and family clans.

Late that night, sleepless, his mind tumbling with inner conflicts, Kunta recalled something his father had once said when he had refused to let go of a mango so that his little brother Lamin could gave a bite. "When you clench your fist," said Omoro, "no man can put anything in your hand." Yet he also knew his father would not want him to become like the other black people. "Look here!" the brown one said abruptly one afternoon. "You- you Toby!" Kunta's face flushed with anger. "Kunta Kinte!" he blurted aloud, astonished at himself. It was his first utterance to anyone in the year and more that he had been in the toubob land.

To be continued...

Chronology of events of personal & Public life of Mahatma Gandhi

(year wise - from 1869)

March 26. Became an associate member of London Theosophical Society Enrolled as an associate member of the Blavatsky Lodge for six months.

June 10. Called to the Bar.

June 11. Enrolled in the High Court.

June 12. Sailed for home by S.S. Oceania

July 5-6. Reached Bombay by S.S. Assam in which all the passengers of Oceania had boarded at Aden. Landed at the jetty in pelting rain. The news of the death of his mother shocked him.

July 6. Mohandas was introduced to Raychandbhai whom he regarded as one who influenced him most profoundly. November 16. Applied for enrolment in the Bombay High Court.

1892 May 24. Permission to start practice as Barrister was announced in the Gazette. Came to Bombay to start practice in the High Court. The first case he took up was of one Manibhai in the Small Causes Court for which he charged Rs. 30 as his fees. He was to cross-examine the plaintiff's witnesses but failed to conduct the case, asked his client to engage another lawyer and hastened out from the court. In fact he did not go to court again until he went to South Africa. After six months, Gandhi closed his establishment in Bombay and returned to Rajkot, where he was able, by drafting memorials and petitions, to earn about Rs. 300 a month His brother Lakshmidas asked Mohandas to see the Political Agent, E.C.K. afterwards Sir Charles) Ollivant, to refute a charge of intrigue against Lakshmidas. Mohandas found the official arrogant and was pushed out of the room,

December. Appointed companion tutor of the minor Rana Porbandar.

1893 Dada Abdulla and Company, a Memon firm of Porbandar that had built up an extensive business in South Africa, needed a barrister for a year to sort out a complicated case. The fee would be £105 with free first class fare both ways and all expenses paid during his stay abroad. Gandhi accepted the offer

to be continued...

Courtesy : Mahatma Gandhi A Chronology
Published by : Ministry of Information & Broadcasting, Govt. of India, Collection by : Dr. Poornima Jogi, N.S.S.

ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಪ್ರಕಟಣೆಗಳು

1. ಆರೋಗ್ಯ ರಹಸ್ಯ 10-00
2. ಕರ್ನಾಟಕದಲ್ಲಿ ಗಾಂಧೀ 5-00
3. ರಾಮನಾಮ 6-00
4. ಗಾಂಧೀ ಬಳಗದ ವಿದೇಶಿಯರು 40-00
5. ಆರೋಗ್ಯ 8-00
6. ಪ್ರಾರ್ಥನೆ 40-00
7. ಸತ್ಯಾಗ್ರಹ 8-00
8. ಮಹಿಳೆಯರಿಗಾಗಿ 8-00
9. ಪಂಚಾಯತ್ ರಾಜ್ 12-00
10. ಆದರ್ಶಗಳು 12-00
11. ನಮ್ಮ ಗಾಂಧೀ ತಾತ 22-00
12. ದೇವನಗರಿಯಲ್ಲಿ ಗಾಂಧೀ ಧ್ವನಿ 2-00
13. ನಮ್ಮ ಗಾಂಧೀ ತಾತ 15-00
14. ಹೋರಾಟ ಶ್ರೀ 40-00
15. ಮಹಾತ್ಮ ಗಾಂಧೀಜಿ ಅವರ ಜೀವನ ಮೈಲಿಗಲ್ಲುಗಳು 3-00
16. ಗಾಂಧೀಜಿ ಜೀವನ ಚರಿತ್ರೆ 25-00
17. ಕುವೆಂಪು ಕಂಡ ಗಾಂಧೀ 25-00
18. ಉಪ್ಪಿನ ಸತ್ಯಾಗ್ರಹ 5-00
19. ಹಿಂದ್ ಸ್ವರಾಜ್ 50-00
20. ಗಾಂಧೀ ಮತ್ತು ಆಧ್ಯಾತ್ಮಿಕ ಜೀವನ 25-00
21. ನನ್ನ ಕನಸಿನ ಭಾರತ 30-00
22. ಹಿಂದೂ ಧರ್ಮ 25-00
23. ಮಹಿಳೆಯರು 63-00
24. ಸ್ವಾತಂತ್ರ್ಯ 42-00
25. ಅಸ್ಪೃಶ್ಯತೆ 45-00
26. ಒಳ್ಳೆಯ ಜೀವನ 60-00
27. ಗಾಂಧೀ ಮತ್ತು ಕರ್ನಾಟಕ 200-00
28. ಸತ್ಯ 38-00
29. ವಿದ್ಯಾರ್ಥಿಗಳಿಗಾಗಿ 30-00
30. ಸರ್ವೋದಯ 30-00
31. ಖಾದಿ ಗ್ರಾಮೋದ್ಯೋಗ 58-00
32. ನನ್ನ ಬಾಲ್ಯದ ನೆನಪುಗಳು 52-00
33. ಗ್ರಾಮರಾಜ್ಯ ಆಡಳಿತ 5-00
34. ನನ್ನ ಕನಸಿನ ಸ್ವರಾಜ್ಯ 42-00
35. ಹಾಸ್ಯ ಮತ್ತು ಗಾಂಧೀ 44-00
36. ನನ್ನ ಆದರ್ಶಗ್ರಾಮ 5-00
37. ಮಹಾತ್ಮ ಗಾಂಧೀ ವಿಚಾರಗಳು ಹಾಗೂ ವ್ಯವಸ್ಥಾಪನ ಪದ್ಧತಿ 48-00
38. ಸತ್ಯಾಗ್ರಹಿ 40-00
39. ಗ್ರಾಮದಾನ ಗ್ರಾಮ ಸ್ವರಾಜ್ಯ 25-00
40. ಗಾಂಧೀಜಿಯವರ ಪ್ರಾತ: ಸಾಯಂ ಪ್ರಾರ್ಥನೆ ಮತ್ತು ಭಜನೆ
41. ಉಪ್ಪಿನ ಸತ್ಯಾಗ್ರಹ ಮತ್ತು ಮೈಲಾರ ಮಹಾದೇವ 5-00
42. ಸತ್ಯಾಗ್ರಹ 5-00
43. ಹಿಂದ್ ಸ್ವರಾಜ್ 5-00
44. ಆರೋಗ್ಯ 5-00
45. ಮಹಾತ್ಮ ಗಾಂಧಿ ಪ್ರಸ್ತುತತೆ 10-00
46. ಬಹುರೂಪಿ ಗಾಂಧಿ 35-00
47. ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ 30-00
48. ಕೃತಯುಗಿ ವಿನೋಬಾ ಭಾವೆ 15-00
49. ಮೋಹನ ತರಂಗ 40-00
50. ನಮ್ಮ ಗಾಂಧಿ ತಾತ 22-00
51. ಗೀತಾ ಪ್ರವಚನ 80-00
52. ಜೆ.ಪಿ. ಜೀವನ ಹಾದಿ 45-00
53. ಗಣ್ಯರು ಕಂಡಂತೆ ಗಾಂಧಿ 20.0
54. ಗೀತಾಮಾತೆ 80.00
55. ಲೋಕ ಚಿಂತಕರು 145.00
56. ಕರ್ನಾಟಕದ ಕಸ್ತೂರ್‌ಬಾ ಯಶೋಧರಮ್ಮ ದಾಸಪ್ಪ 38.00
57. ಮಹದೇವ ದೇಸಾಯಿ 63.00
58. ಸಮಾಜವಾದ : ಗಾಂಧೀ ದೃಷ್ಟಿಕೋನ 15.00
59. ಮಹಾತ್ಮ ಗಾಂಧಿ ಮತ್ತು ಆಧ್ಯಾತ್ಮಿಕ ರಾಜಕಾರಣ 28.00
60. ಗಾಂಧೀ ಬಳಗದ ವಿದೇಶಿಯರು 89.00
61. ಮಹಾತ್ಮ ಗಾಂಧೀ ಮತ್ತು ಸ್ವಚ್ಛ ಭಾರತ 33.00
62. ಮಹಾತ್ಮ ಗಂಧೀಜಿ ಅವರ ಶೈಕ್ಷಣಿಕ ಸಿದ್ಧಾಂತ 80.00
63. ಹುಕ್ಕೇರಿಕರ ರಾಮರಾಯರು 110.00
64. ಮಹಿಳೆಯರು 63.00
65. ನನ್ನ ಬಾಲ್ಯದ ನೆನಪುಗಳು 52.00
66. ನಯೀ ತಾಲೀಂ 58
67. Nayi Talim 58.00
68. Temple & Mosque 10-00
69. Rastrapita Mahatma Gandhi 25-00
70. Swarajya of My Dreams 5-00
71. Gandhi My Grand Father 5-00
72. Grand Pa Gandhi 5-00
73. Relevance of Gandhi 20-00
74. Vinoba Sage of the Age 20.00
75. Kasturba 33.00
76. Mahatma Gandhi and his Foreign Associates 87

Tariff rates for Advertisement in Bapu Prapancha Kannada English Monthly Magzine

Sl.no.	Particulars	Rates (Rs)
1	Half Page (Black & White)	1,000.00
2	Full Page (Black & White)	2,000.00
3	Half Page (Extra)	2,000.00
4	Full Page (Colour)	4,000.00
5	2nd Cover Page	5,000.00
6	3rd Back Cover Page	5,000.00
7	Back Cover Page	10,000.00

ಚಂದಾದಾರರಾಗಲು, ಪುಸ್ತಕ ಖರೀದಿಸಲು, ಲೇಖನ ಹಾಗೂ ಜಾಹೀರಾತು ಪ್ರಕಟಿಸಲು

ಸಂಪರ್ಕಿಸಿ : ಯೋಗೀಶ್, ಸಹಾಯಕ ಕಾರ್ಯದರ್ಶಿ – 9738605799

ಚಂದ್ರಪ್ಪ, ಕಾರ್ಯನಿರ್ವಾಹಕ ಅಧಿಕಾರಿ – 7619134999, ನವೀನ್, ಸಹಾಯಕರು – 7892798344

RNI NO : KARBIL/2019/77950

If undelivered please return to: Hon. Secretary, Karnataka Gandhi Smaraka Nidhi, Gandhi Bhavana, Kumara Park Post, Bengaluru - 560001,Ph: 080 22261967, Email : gandhibhavanabengaluru@gmail.com

ಬಾಪು ಪ್ರಪಂಚ ಕನ್ನಡ-ಇಂಗ್ಲಿಷ್ ಮಾಸ ಪತ್ರಿಕೆ
RNI NO : KARBIL/2019/77950
Registered No. : KA/BGGPO/2589/2020-2022
published 15th of every month and posted on 20th of every month at Patrikachannel, Bengaluru - 560026



ಸರೋಜಿನಿ ನಾಯ್ಡು (13.02.1879 - 02.03.1949.)

ಕವಯತ್ರಿ, ಸರೋಜಿನಿ ನಾಯ್ಡು "ಭಾರತದ ಕೋಗಿಲೆ" ಎನ್ನುವ ಹೆಸರಿನಿಂದಲೂ, ಸ್ವಾತಂತ್ರ್ಯ ಹೋರಾಟಗಾರರೆಂತಲೂ ಪ್ರಸಿದ್ಧರಾಗಿದ್ದಾರೆ. ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ಪ್ರಥಮ ಮಹಿಳಾ ಅಧ್ಯಕ್ಷೆ ಮತ್ತು ಉತ್ತರ ಪ್ರದೇಶದ ಮೊದಲ ಮಹಿಳಾ ರಾಜ್ಯಪಾಲರಾಗಿ ಸೇವೆಸಲ್ಲಿಸಿದವರಾಗಿದ್ದಾರೆ. ತಂದೆ ವಿಜ್ಞಾನಿ ಮತ್ತು ತತ್ವಜ್ಞಾನಿ ಅಘೋರನಾಥ್ ಚಟ್ಟೋಪಾಧ್ಯರು ಮತ್ತು ತಾಯಿ ಬಂಗಾಳಿ ಕವಿಯಿತ್ರಿ ಬರಾಡ ಸುಂದರಿ ದೇವಿ. ಸರೋಜಿನಿ ನಾಯ್ಡು ಬಹುಭಾಷಾ ವಿಶಾರದೆ. ಉರ್ದು, ತೆಲುಗು, ಇಂಗ್ಲೀಷ್, ಬೆಂಗಾಳಿ ಮತ್ತು ಪರ್ಷಿಯನ್ ಭಾಷೆಗಳನ್ನು ನಿರರ್ಗಳವಾಗಿ ಮಾತಾನಾಡುತ್ತಿದ್ದರು. ಇವರು ಮೆಟ್ರಿಕ್ಯುಲೇಷನ್ ಮೇಲ್ದರ್ಜೆಯಲ್ಲಿ ಪಾಸಾದ ನಂತರ ಇಂಗ್ಲೆಂಡಿನ ಕಿಂಗ್ಸ್ ಮತ್ತು ಕೇಂಬ್ರಿಡ್ಜ್‌ನ ಗಿರ್ಟನ್ ಕಾಲೇಜಿನಲ್ಲಿ ಶಿಕ್ಷಣ ಮುಂದುವರಿಸಿದರು. ಅಂತರ್ಜಾತಿಯ ಮದುವೆಗಳಿಗೆ ವಿರೋಧವಿದ್ದ ಕಾಲದಲ್ಲೇ ಜಾತಿ ಮೀರಿ ಗೋವಿಂದರಾಜು ನಾಯ್ಡುರವರನ್ನು ಮದುವೆಯಾದರು. ಬಂಗಾಳದ ವಿಭಜನೆಯನ್ನು ತಡೆಯಲು 1905ರಲ್ಲಿ ಭಾರತದ ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಿದರು. ಆ ಸಮಯದಲ್ಲಿ ಗೋಪಾಲ್‌ಕೃಷ್ಣ ಗೋಖಲೆ, ರವೀಂದ್ರನಾಥ ಟ್ಯಾಗೂರ್, ಆನಿಬೆಸೆಂಟ್, ಸಿ.ಪಿ. ರಾಮಸ್ವಾಮಿ ಐಯ್ಯರ್, ಮಹಾತ್ಮ ಗಾಂಧಿ ಮತ್ತು ಜವಾಹರಲಾಲ್ ನೆಹರೂ ಅವರ ನಿಕಟ ಬಾಂಧವ್ಯ ಬೆಳೆಯಿತು. ಭಾರತದ ಸ್ವಾತಂತ್ರ್ಯಕ್ಕಾಗಿ ಉಪ್ಪಿನ ಸತ್ಯಾಗ್ರಹ, ಚಲೇಜಾವ್ ಚಳುವಳಿ ಇನ್ನೂ ಮುಂತಾದ ಚಳುವಳಿಯಲ್ಲಿ ನಾಯಕತ್ವ ವಹಿಸಿದ್ದರು. ಮಹಿಳೆಯರು ಅಡಿಗೆಮಾಡಲು ಮಾತ್ರ ಸೀಮಿತವಾಗಿಲ್ಲವೆಂದು ಮಹಿಳೆಯರನ್ನು ಜಾಗ್ರತಗೊಳಿಸಿದರು.



ಸ್ವಾಮಿ ರಾಮಕೃಷ್ಣ ಪರಮಹಂಸ (18.02.1836 - 16.09.1886)

ಸಂತರು, ಋಷಿಮುನಿಗಳ ಆಧ್ಯಾತ್ಮಿಕ ಸಾಕ್ಷಾತ್ಕಾರದ ಮೂಲವನ್ನು ಪ್ರತಿನಿಧಿಸುವರು. ರಾಮಕೃಷ್ಣರು ಭಗವಂತನ ಸಾಕ್ಷಾತ್ಕಾರವು ಎಲ್ಲ ಕಾಲದಲ್ಲೂ ದೊರೆಯುತ್ತದೆ ಮತ್ತು ಸಾಕ್ಷಾತ್ಕಾರವು ಯಾವುದೇ ನಿರ್ದಿಷ್ಟ ಯುಗ, ದೇಶ ಅಥವಾ ಜನರ ಏಕಸ್ವಾಮ್ಯವಲ್ಲ ಎಂಬುದನ್ನು ತಮ್ಮ ಜೀವನದ ಮೂಲಕ ಸಾಕ್ಷಾತ್ಕಾರಗೊಳಿಸಿದವರು. ಇವರು ಯಾವ ಪಂಥವನ್ನೂ ಸ್ಥಾಪಿಸಲಿಲ್ಲ. ಮೋಕ್ಷದ ಹೊಸ ಮಾರ್ಗವನ್ನು ತೋರಿಸಲಿಲ್ಲ. ಅವರ ಸಂದೇಶವೆಂದರೆ ದೈವಪ್ರಜ್ಞೆ ಕಡಿಮೆಯಾದಾಗ, ಸಂಪ್ರದಾಯಗಳು ಸಿದ್ಧಾಂತಗಳಾಗಿ, ದಮನಕಾರಿಯಾಗುತ್ತವೆ ಮತ್ತು ಧಾರ್ಮಿಕ ಬೋಧನೆಗಳು ಪರಿವರ್ತನಾ ಶಕ್ತಿಯನ್ನು ಕಳೆದುಕೊಳ್ಳುತ್ತವೆ. ಆ ಕಾಲದಲ್ಲಿ ಶ್ರೀರಾಮಕೃಷ್ಣರು ಆಧ್ಯಾತ್ಮಿಕ ಸಾಕ್ಷಾತ್ಕಾರದ ಮೂಲಕ ದೇವರ ವಾಸ್ತವವನ್ನು ಮತ್ತು ಬೋಧನೆಗಳ ಸಿಂಧುತ್ವವನ್ನು ಸಾಬೀತುಪಡಿಸುವ ಮೂಲಕ ಭದ್ರ ಬುನಾದಿಯ ಮೇಲೆ ಪುನರ್ ಸ್ಥಾಪಿಸಿದರು. ಶ್ರೀ ರಾಮಕೃಷ್ಣರು ದಿವ್ಯ ಅಯಸ್ಕಾಂತೀಯತೆಯಿಂದ ಆಕರ್ಷಿತರಾದ ದಾರ್ಶನಿಕರು, ಧರ್ಮಶಾಸ್ತ್ರಜ್ಞರು, ಮಾನವತಾವಾದಿಗಳು, ನಾಸ್ತಿಕರು, ಎಲ್ಲ ಧರ್ಮ, ಜಾತಿಗಳ ಸತ್ಯಶೋಧಕರು ಇವರ ಅನುಯಾಯಿಗಳಾಗಿದ್ದರು. ಆಧುನಿಕ ಜಗತ್ತಿಗೆ ಶ್ರೀರಾಮಕೃಷ್ಣರು ನೀಡಿದ ಬಹುದೊಡ್ಡ ಕೊಡುಗೆಯೆಂದರೆ ಧರ್ಮಗಳ ಸಾಮರಸ್ಯದ ಸಂದೇಶ. ವಿಭಿನ್ನ ಧರ್ಮಗಳು ಬೇರೆ ಬೇರೆ ದೃಷ್ಟಿಕೋನಗಳಿಂದ ಸತ್ಯದ ಚಿತ್ರಗಳನ್ನು ನಮಗೆ ನೀಡುತ್ತವೆ. ಧರ್ಮಗಳ ಸಾಮರಸ್ಯ ಏಕರೂಪತೆ ಅಲ್ಲ. ಅದು ವಿವಿಧತೆಯಲ್ಲಿ ಏಕತೆ. ಈ ನಿಟ್ಟಿನಲ್ಲಿ ಸಾಮರಸ್ಯವು ಸಾಕ್ಷಾತ್ಕಾರವಾಗಬೇಕು. ಇವರ ಪರಮಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ವಿವೇಕಾನಂದರು ಪ್ರಬುದ್ಧ ಭಾರತವನ್ನು, ವಿದೇಶಗಳಲ್ಲಿ ಸಮರ್ಥವಾಗಿ ಪ್ರತಿನಿಧಿಸಿದ್ದರು. ಇವರ ಚಿಕಾಗೋ ಭಾಷಣ ಪ್ರಸಿದ್ಧವಾದುದಾಗಿದೆ.



ಡಾ. ರಾಜಾರಾಮಣ್ಣ (28.01.1925 - 25.09.2004)

'ಭಾರತದ ಮೊದಲ ಅಣು ಬಾಂಬ್ ತಯಾರಕ ರಾಜಾರಾಮಣ್ಣ ಅವರು ತುಮಕೂರಿನಲ್ಲಿ ಜನಿಸಿದರು. 1974ರಲ್ಲಿ 'ರಾಜಾಸ್ಥಾನದ ಪೋಕ್ರಾನ್'ನಲ್ಲಿ ಜರುಗಿದ 'ಭಾರತದ ಪ್ರಥಮ ಪರಮಾಣು ಪರೀಕ್ಷೆ'ಯನ್ನು ಅತ್ಯಂತ ಸಮರ್ಥವಾಗಿ ನಿರ್ವಹಿಸಿದರು. 'ಹೋಮಿ ಜಹಂಗೀರ್ ಭಾಬಾ'ರವರ ಆಪ್ತ ಶಿಷ್ಯರಾಗಿದ್ದ ರಾಜರಾಮಣ್ಣನವರದು, ಬಹುಮುಖ ಪ್ರತಿಭೆ. ಅವರು 'ಶ್ರೇಷ್ಠ ಪರಮಾಣು ವಿಜ್ಞಾನಿ', 'ದಕ್ಷ ಆಡಳಿತಗಾರ', 'ಸಮರ್ಥ ಸಂಘಟಕ', 'ನುರಿತ ಪಿಯಾನೋ ವಾದಕ', 'ವೇದೋಪನಿಷತ್ ಪಾರಂಗತ', 'ಉಪಾಧ್ಯಾಯ', 'ದಾರ್ಶನಿಕ', 'ರಾಜ್ಯಸಭೆ ಸದಸ್ಯ', 'ರಕ್ಷಣಾ ರಾಜ್ಯ ಮಂತ್ರಿ' ಸಹ ಆಗಿದ್ದರು. 1945ರಲ್ಲಿ 'ಲಂಡನ್ನಿನ ಕಿಂಗ್ಸ್ ಕಾಲೇಜಿನಲ್ಲಿ ಪರಮಾಣು ವಿಜ್ಞಾನ' ಅಭ್ಯಾಸಿಸಿ 1949ರಲ್ಲಿ ಪಿ.ಎಚ್.ಡಿ. ಪದವಿ ಪಡೆದರು. ತದನಂತರ ಭಾರತದಲ್ಲಿ ಭೌತವಿಜ್ಞಾನದ ಅಭಿವೃದ್ಧಿಗಾಗಿ ಶ್ರಮಿಸಿದ ರಾಜಾರಾಮಣ್ಣನವರು, ಪರಮಾಣು ಕೇಂದ್ರ ವಿದಳನೆಯ (ನ್ಯೂಕ್ಲಿಯರ್ ಫಿಜನ್) ವಿಷಯದಲ್ಲಿ ಆಳವಾದ ಸಂಶೋಧನೆ ನೆಡಸಿದ್ದರು. 1978ರಿಂದ 1981ರ ವರೆಗೆ ರಾಜಾರಾಮಣ್ಣನವರು ರಕ್ಷಣಾ ಮಂತ್ರಿಯ ವೈಜ್ಞಾನಿಕ ಸಲಹೆಗಾರ, ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ (ಡಿ.ಆರ್.ಡಿ.ಒ) ಮಹಾ ನಿರ್ದೇಶಕ, ಹಾಗು ರಕ್ಷಣಾ ಸಂಶೋಧನ ಕಾರ್ಯದರ್ಶಿ ಹುದ್ದೆಗಳನ್ನು ಏಕಕಾಲದಲ್ಲಿ ನಿರ್ವಹಿಸಿದ್ದರು. 1990ರಲ್ಲಿ ವಿ.ಪಿ ಸಿಂಗ್ ಅವರ ಸರ್ಕಾರದಲ್ಲಿ ರಕ್ಷಣಾ ರಾಜ್ಯ ಸಚಿವರಾಗಿದ್ದರು. ಇವರಿಗೆ ಶಾಂತಿ ಸ್ವರೂಪ ಭಟ್ನಾಗರ್ ಸ್ಮಾರಕ ಪ್ರಶಸ್ತಿ, ಪದ್ಮಶ್ರೀ, ಪದ್ಮಭೂಷಣ, ಪದ್ಮ ವಿಭೂಷಣ ಇನ್ನು ಹಲವಾರು ಗೌರವ ಪುರಸ್ಕಾರಗಳು ಸಂದಿವೆ.

ಇವರಿಗೆ,

Printed and Published by Secretary, Karnataka Gandhi Smaraka Nidhi on behalf of Gandhi Bhavana, Kumarapark East, Bengaluru - 560001, Ph : 080 22261967, Printed at CreativeGeekZ, #58, Yadhava College Road, Madhavanagara Bengaluru - 560001, Ph : 080 40927049